ಶ್ರೀನಿವಾಸ

ಜೀವನ ಕಾರ್ಯಾಲಯ
ಬೆಂಗಳೂರು

ಲೀಲಾಶುಕಮುನಿ ವಿರಚಿತ

ಶ್ರೀಕೃಷ್ಣಕರ್ಣಾಮೃತಂ

ಮೂಲ ಮತ್ತು ಅನುವಾದ

ಶ್ರೀನಿವಾಸ

ಜೀವನ ಕಾರ್ಯಾಲಯ
ಬೆಂಗಳೂರು

ಮೊದಲ ಮುದ್ರಣ : ೧೯೫೯
ಎರಡನೆಯ ಮುದ್ರಣ : ೧೯೭೭

ಬೆಲೆ : ಆರು ರೂಪಾಯಿ

ಮುದ್ರಕರು :
ಲಿಪಿ ಮುದ್ರಣ, ಬೆಂಗಳೂರು–೪

ಪ್ರಸ್ತಾವನೆ

೧

"ಕಸ್ತೂರೀ ತಿಲಕಂ ಲಲಾಟ ಫಲಕೇ ವಕ್ಷಃಸ್ಥಲೇ ಕೌಸ್ತುಭಂ" ಎಂದು ಮೊದಲಾಗುವ ಒಂದು ಶ್ಲೋಕವನ್ನು ನಮ್ಮ ಜನರೆಲ್ಲ ಕೇಳಿದಾರೆ. ಆದರೆ ಅದು ಎಲ್ಲಿಯದು ಎನ್ನುವುದನ್ನು ಅನೇಕರು ಕಾಣರು. ನಾನು ಎಳೆಯನಾಗಿದ್ದ ದಿನದಲ್ಲಿ ನಮ್ಮ ತಾತನವರು ಇದನ್ನು ನನಗೆ ಇತರ ಶ್ಲೋಕ ಕೆಲವದರೊಂದಿಗೆ ಸುಪ್ರಭಾತದ ಸ್ತೋತ್ರವಾಗಿ ಕಲಿಸಿದರು. ಬಹು ವರ್ಷಗಳ ಬಳಿಕ ನಾನು ಮೈಸೂರಿನಲ್ಲಿ ಹೈಸ್ಕೂಲಿನಲ್ಲಿ ಓದುವಾಗ ಒಂದು ಹರಿಕಥೆಯಲ್ಲಿ, ರಾಧೆ ಕೃಷ್ಣನನ್ನು ನೆನೆಯುತ್ತಾ, ಮೊಸರಿಲ್ಲದ ಬರಿಯ ಪಾತ್ರೆಯಲ್ಲಿ ಮಂತನ್ನು ಹಾಕಿ ಕಡೆದಳು, ಕೃಷ್ಣ ರಾಧೆಯನ್ನು ನೆನೆಯುತ್ತ ಕರುವನ್ನು ಬಿಚ್ಚಿ ಹಸುವಿನ ಬಳಿ ಬಿಡುವುದಕ್ಕೆ ಪ್ರತಿಯಾಗಿ ಕರುವಿನ ಬಳಿಯೇ ಕುಳಿತು ಹಾಲು ಕರೆಯಲು ತೊಡಗಿದನು, ಎಂಬ ಕಥೆಯನ್ನು ಉಪಕಥೆಯಾಗಿ ಕೇಳಿದೆನು. ಇದು ಒಂದು ಗ್ರಂಥದ ಒಂದು ಶ್ಲೋಕ ಎಂದು ಹರಿದಾಸರು ಹೇಳಿದ ನೆನಪಿಲ್ಲ. ಇದಾದ ಹಲವು ವರ್ಷಗಳ ನಂತರ ನನ್ನ ಹಿರಿಯರೊಬ್ಬರು ಯಾವುದೋ ಸಂದರ್ಭದಲ್ಲಿ "ಸಾಯಂಕಾಲೇ ವನಾಂತೇ ಕುಸುಮಿತ ಸಮಯೇ ಸೈಕತೇ ಚಂದ್ರಿಕಾಯಾಂ," ಎಂಬ ಶ್ಲೋಕವನ್ನು ಉದ್ಧರಿಸಿದರು. ಅದು ಬಹು ಚೆನ್ನಾದ ಶ್ಲೋಕ ಎಂದು ನನಗೆನ್ನಿಸಿತು. ಇದಾದ ಕೆಲಕಾಲದ ಮೇಲೆ ನಾನು, ಆಂಗ್ಲ ಸಂಸ್ಕೃತಪ್ರೇಮಿ ಒಬ್ಬರು, "ಕರಾರವಿಂದೇನ ಪದಾರವಿಂದಂ" ಎಂದು ಮೊದಲಾಗುವ ಒಂದು ಪದ್ಯವನ್ನು ಬಹಳವಾಗಿ ಮೆಚ್ಚಿಕೊಂಡು ಬರೆದ ಒಂದು ಪ್ರಶಂಸೆಯನ್ನು ಓದಿ ಸಂತೋಷಪಟ್ಟೆನು. ಸುಮಾರು ಅದೇ ಕಾಲದಲ್ಲಿ, ಯಾವ ಸಂದರ್ಭದಲ್ಲೋ ನೆನಪಿಲ್ಲ. ಕೃಷ್ಣನಿಗೆ ಮನಸೋತಿರುವ ಗೊಲ್ಲ ತರುಣಿ, ಮೊಸರು ಮಾರಲು ಹೊರಟು 'ಹಾಲೂ ಮೊಸರೂ ಬೆಣ್ಣೇ,' ಎಂದು ಕೂಗುವುದಕ್ಕೆ ಪ್ರತಿಯಾಗಿ, 'ಗೋವಿಂದಾ ದಾಮೋದರಾ ಮಾಧವಾ' ಎಂದು ಕೂಗಿದಳು ಎಂಬ ಶ್ಲೋಕ

ವನ್ನು ಓದಿದೆನು; ಅದರ ಸ್ವಾರಸ್ಯಕ್ಕೆ ಮನಸೋತೆನು. ಅದೇ ತರುಣದಲ್ಲಿ ಇದು "ಕೃಷ್ಣಕರ್ಣಾಮೃತ"ದ ಒಂದು ಶ್ಲೋಕ ಎಂದು ಕೇಳಿ ಇರಬೇಕು, ಆ ಗ್ರಂಥ ವನ್ನು ತರಿಸಿಕೊಂಡು ಓದಿ ಅದರಲ್ಲಿ ಈ ಮೇಲೆ ಹೇಳಿರುವ ಎಲ್ಲ ಶ್ಲೋಕ ಗಳನ್ನೂ ಕಂಡು ಗ್ರಂಥದ ಕವಿಯನ್ನು ಕುರಿತು ತುಂಬ ಗೌರವವನ್ನು, ತುಂಬ ಪೂಜ್ಯ ಭಾವನೆಯನ್ನು, ವಹಿಸಿದೆನು ; ಗ್ರಂಥದಿಂದ ನನಗೆ ದೊರೆತ ಸುಖ ನನ್ನ ಮನೋಧರ್ಮದ ನನ್ನ ಸೋದರ ಚೇತನಗಳಿಗೆ ದೊರೆಯಬೇಕು ಎಂದು ಅಪೇ ಕ್ಷಿಸಿದೆನು. ಗ್ರಂಥ ಈ ಮುನ್ನ ಕನ್ನಡ ಅರ್ಥದೊಡನೆ ಪ್ರಕಟವಾದದ್ದುಂಟೋ ಇಲ್ಲವೋ ನಾನು ಕಾಣೆ. ಆಗಿದ್ದಲ್ಲಿ ಅಂಥ ಪ್ರಕಟನೆಯ ಪ್ರತಿಗಳು ದೊರೆಯಲಿಲ್ಲ. ಈಗಲೂ ದೊರೆಯುತ್ತಿಲ್ಲ. ಆದಕಾರಣ ಅಭ್ಯಾಸ, ಸೇವೆ, ಎರಡೂ ಸೇರಿದ ದೃಷ್ಟಿಯಿಂದ ಈ ಗ್ರಂಥವನ್ನು ಸರಳವಾದ ಗದ್ಯಾನುವಾದದೊಂದಿಗೆ ನಾನೇ ಪ್ರಕಟಿಸುವುದು ಎಂದು ನಿಶ್ಚಯ ಮಾಡಿದೆನು; ನಿಶ್ಚಯವನ್ನು ಮಾಡಿಸಿದ ದೈವದ ಅನುಗ್ರಹದಿಂದ ಈಗ ಈ ಪುಸ್ತಕವನ್ನು ನಮ್ಮ ಜನರ ಮುಂದೆ ಇರಿಸುತ್ತಿದೇನೆ.

೨

"ಶ್ರೀಕೃಷ್ಣಕರ್ಣಾಮೃತಂ" ಪ್ರಖ್ಯಾತವಾದ ಮೂರು ವೈಷ್ಣವ ಭಕ್ತಿ ಕಾವ್ಯಗಳಲ್ಲಿ ಒಂದು ಎನಿಸಿಕೊಂಡಿದೆ. ಇಂಥ ಗ್ರಂಥ ಮೂರೇನೇ ಎಂದು ಯಾರಾದರೂ ಆಶ್ಚರ್ಯಪಡಬಹುದು. ಭಕ್ತಿ ಮಾತ್ರ ಅಲ್ಲ, ಕಾವ್ಯ ಎಂಬ ಪದ ವನ್ನೂ ನೆನೆದರೆ ಈ ಆಶ್ಚರ್ಯಕ್ಕೆ ಕಾರಣ ಇಲ್ಲ ಎನ್ನಿಸುವುದು. ಭಕ್ತಿಯನ್ನು ಪ್ರಕಟಿಸಿದ ಕೃತಿ ಸ್ವಯಂ ಕಾವ್ಯವೂ ಆಗುವುದು ಅಸಾಮಾನ್ಯವೇ. ಇದು ಕುಲಶೇಖರಾಳ್ವಾರ್ ಇವರ ಮುಕುಂದಮಾಲೆಯಲ್ಲಿ ಜಯಗೋವಿಂದನ ಗೀತ ಗೋವಿಂದದಲ್ಲಿ ಲೀಲಾಶುಕನ ಕೃಷ್ಣಕರ್ಣಾಮೃತದಲ್ಲಿ ಸಿದ್ಧಿಸಿದೆ ಎನ್ನುವುದು ಬಲ್ಲವರ ಅಭಿಪ್ರಾಯ. ಶತಮಾನಗಳ ಕಾಲ ಬಹು ಜಾಣರಿಗೆ ಅಭಿಮತವಾದ ಇಂಥ ಅಭಿಪ್ರಾಯ ತಪ್ಪಿರುವುದು ಸಾಧ್ಯವಲ್ಲ. ಹೊಸಕಾಲದ ನಾವೂ ಈ ಗ್ರಂಥಗಳಲ್ಲಿ ಅಪೂರ್ವ ರೀತಿಯ ಕಾವ್ಯಶಕ್ತಿ ರೂಪುಗೊಂಡಿರುವುದನ್ನು ಕಾಣು ತ್ತೇವೆ. ಇವುಗಳನ್ನು ಓದುವಲ್ಲಿ ಭಕ್ತಿಯಷ್ಟನ್ನೇ ಅಲ್ಲ, ಕಾವ್ಯದಿಂದ ಉದಿಸುವ

ಉನ್ನತ ರಸಾನುಭವವನ್ನು ಪಡೆಯುತ್ತೇವೆ. ಹಾಗೂ ಈ ಮೂರು ಗ್ರಂಥ ಗಳದು ಮೂರು ಬೇರೆ ಬೇರೆಯ ದಾರಿ. ಮುಕುಂದಮಾಲೆಯೆಲ್ಲ ಭಕ್ತ ತನ್ನ ದೈವದ ಸನ್ನಿಧಿಯಲ್ಲಿ ನಿವೇದಿಸುವ ಶುದ್ಧ ಗಂಭೀರ ಚಿಂತನ. ಗೀತಗೋವಿಂದ ರಾಧಾಕೃಷ್ಣರ ಪ್ರಣಯದ ಶೃಂಗಾರವನ್ನು ನಿಸ್ಸಂಕೋಚವಾಗಿ ವರ್ಣಿಸಿರುವ ಗೀತಗುಚ್ಛ. ಕೃಷ್ಣಕರ್ಣಾಮೃತ ತೀರ ಅಂಥ ಬರಿಯ ಗಾಂಭೀರ್ಯದ ಕಾವ್ಯವೂ ಅಲ್ಲ; ಇಂಥ ಶೃಂಗಾರದ ಕಾವ್ಯವೂ ಅಲ್ಲ; ಕವಿ ದೈವವಾದ ಕೃಷ್ಣನನ್ನು ಮಗುವಾಗಿ, ಎಳೆಯನಾಗಿ, ತರುಣನಾಗಿ, ಪ್ರೌಢನಾಗಿ, ಭಾವಿಸಿ ಇಲ್ಲಿ ಶೃಂಗಾರ, ಇಲ್ಲಿ ಹಾಸ್ಯ, ಇಲ್ಲಿ ಗಂಭೀರ ಭಕ್ತಿ, ಹೀಗೆ ಬಹು ರೀತಿಯ ಭಾವವನ್ನು ಪ್ರಕಟಿಸುವ ಖಂಡ ಶ್ಲೋಕಗಳ ಸಮುದಾಯ. ಅನೇಕ ಭಾವಗಳನ್ನು ಗುರುತಿಸಲು ತೊಡಗಿರುವ ಈ ಕಾವ್ಯ ಉಳಿದ ಆ ಎರಡು ಗ್ರಂಥಗಳಿಗಿಂತಲೂ ದೀರ್ಘವಾಗಿರುವುದು ಅನಿವಾರ್ಯ.

೩

ಶ್ರೀಕೃಷ್ಣಕರ್ಣಾಮೃತದ ಕವಿಯನ್ನು ಕುರಿತು ನಮಗೆ ಬಹಳ ಸಂಗತಿ ಯೇನೂ ದೊರೆತಿಲ್ಲ. ಅವನು ತನ್ನನ್ನು ಲೀಲಾಶುಕ ಎಂದು ಕರೆದುಕೊಂಡಿ ದ್ದಾನೆ. ಇದು ಕಾವ್ಯನಾಮ ಅಷ್ಟೆ. ಕವಿಯ ಹೆಸರು ಬೇರೆ ಇದ್ದಿರಬೇಕು. ಇವನು ಯಾವ ಪ್ರಾಂತದವನೋ ತಿಳಿಯದು. ಮಲೆಯಾಳದಲ್ಲಿ, ಅಲ್ಲಿಗಿಂತ ಹೆಚ್ಚಾಗಿ ಆಂಧ್ರದಲ್ಲಿ, ಈ ಕೃತಿ ಬಹಳ ಪ್ರಚಾರದಲ್ಲಿದೆಯೆನ್ನುತ್ತಾರೆ. ಆದ್ದರಿಂದ ಕವಿ ಆಂಧ್ರದಲ್ಲಿದ್ದಾತನೆಂದು ಊಹೆ. ಇವನ ಕಾಲ ಇದೇ ಎನ್ನು ವಂತಿಲ್ಲ. ಮುಕುಂದ ಮಾಲೆಯಲ್ಲಿರುವ "ಹೇ ಗೋಪಾಲಕ ಹೇ ಕೃಪಾಜಲ ನಿಧೇ" ಎಂದು ಮೊದಲಾಗುವ ಶ್ಲೋಕ ಈ ಕೃತಿಯಲ್ಲಿಯೂ ಇದೆ. ಒಟ್ಟಿನಲ್ಲಿ ಈ ಕವಿತೆ ಹೊಸತೆಂದು ತೋರುವುದರಿಂದ ಈ ಶ್ಲೋಕವನ್ನು ಲೀಲಾಶುಕ ಕುಲಶೇಖರ ಕವಿಯಿಂದ ತೆಗೆದುಕೊಂಡಿದಾನೆಂದು ಹೇಳಬಹುದಾಗಿದೆ. ಆದರೆ ಇಷ್ಟರಿಂದ ಕಾಲದ ನಿರ್ಣಯ ಆಗುವುದಿಲ್ಲ. ಕಾವ್ಯದಿಂದ ಕವಿಯನ್ನು ಕುರಿತು ಕೆಲವು ವಿವರ ತಿಳಿಯುತ್ತವೆ. ಕವಿಗೆ ಸೋಮಗಿರಿ ಎಂಬವರು ಗುರು, ಶಿಖಿಪಿಂಛ

ಮೌಲಿ ಎಂಬವರು ಶಿಕ್ಷಾ ಗುರು. ಕವಿಯ ಮನೆತನ ಸಂಪ್ರದಾಯದಿಂದ ಶೈವ. ಈತ ಕೃಷ್ಣನನ್ನು ಇಷ್ಟದೈವವಾಗಿ ವರಿಸಿದ್ದ. ಕೆಲವು ಕಾಲ ಇವನು ಪ್ರಭು ಗಳಾದವರ ಆಶ್ರಯದಲ್ಲಿದ್ದು ಅವರ ಪ್ರಶಂಸೆಯ ಕಾವ್ಯಗಳನ್ನು ರಚಿಸಿ ಆಮೇಲೆ ಭಕ್ತನಾದ; ಸರಸ್ವತಿಯಿಂದ ಅಂಥ ಸೇವೆ ಮಾಡಿಸುವುದು ಸರಿ ಅಲ್ಲ ಎಂದು ತಿಳಿದ; ಇದಿಷ್ಟು ಕಾವ್ಯದಿಂದ ತಿಳಿಯುವ ವಿವರ. ಕವಿ ಮೊದಲಲ್ಲಿ ವಿಷಯ ಲಂಪಟನಾಗಿದ್ದ, ಚಿಂತಾಮಣಿ ಎಂಬ ವೇಶ್ಯೆ ಇವನ ಪ್ರಿಯೆ, ಅವಳು ಒಮ್ಮೆ ಇವನಿಗೆ ಬುದ್ಧಿ ಹೇಳಿದಳು, ಆದ್ದರಿಂದ ಜ್ಞಾನೋದಯ ಆಗಿ ಇವನು ದೈವ ಭಕ್ತನಾದ, ಎಂದು ಒಂದು ದಂತಕತೆ ಇದೆ. ಕಾಳಿದಾಸ, ತುಳಸೀದಾಸ, ಬಿಲ್ವಮಂಗಲ, ಇಂಥ ಹಿರಿಯರ ವಿಷಯ ಸ್ತ್ರೀ ಸಂಬಂಧದ ಇಂಥ ಕತೆ ಇರುವುದು ನಮಗೆಲ್ಲ ತಿಳಿದ ವಿಷಯ. ಯಾರ ವಿಷಯದಲ್ಲಿ ಇವು ನಿಜವೋ ; ಬಹುಜನರ ವಿಷಯದಲ್ಲಿ ನಿಜವಲ್ಲ ಕಲ್ಪಿತ ಎನ್ನುವುದು ಸ್ಪಷ್ಟ. ಲೀಲಾಶುಕನ ವಿಷಯಕ್ಕೆ ಇದು ಕಟ್ಟಿದ ಕತೆ ಎಂದು ತೋರುತ್ತದೆ. ಅವನ ಕೃತಿ "ಚಿಂತಾಮಣಿ" ಶಬ್ದದಿಂದ ಆರಂಭ ಆಗುತ್ತದೆ. ಆ ಸಂದರ್ಭದಲ್ಲಿ ಅದು ಗುರು ಸೋಮಗಿರಿಯವರ ಪ್ರಶಂಸೆಯ ಪದ ಅಷ್ಟೇ ಬೇರೆಯಲ್ಲ. ತನ್ನ ವೇಶ್ಯೆಯ ಹೆಸರನ್ನು ಗುರುವಿನ ಹೆಸರಿನ ಜೊತೆಗೆ ಜೋಡಿಸಿ ಗುರುವಿನ ಹೆಸರಿಗಿಂತ ಮುಂದಾಗಿ ಕಾವ್ಯದ ಮೊದಲ ಶಬ್ದವಾಗಿ ಅದನ್ನು ಕವಿ ಸೇರಿಸಿದ ನೆನ್ನುವುದು ಅಸಂಭಾವ್ಯ. ವೇಶ್ಯೆಯನ್ನು ಕುರಿತ ಕತೆಗೆ ಈ ಪದವೇ ಕಾರಣವಾಯಿತೆಂದರೂ ತಪ್ಪಲ್ಲವೆಂದು ತೋರುತ್ತದೆ.

೪

ಈ ಕಾವ್ಯದ ಶ್ಲೋಕಗಳೆಲ್ಲ ಪ್ರಾಯಶಃ ಧ್ಯಾನ ಶ್ಲೋಕಗಳು. ಎಂದರೆ ಯಾವ ಶ್ಲೋಕವೂ ಸ್ವಸಂಪೂರ್ಣ. ಅದರ ಅರ್ಥ ತಿಳಿಯುವುದಕ್ಕೆ ಹಿಂದಿನ ಮುಂದಿನ ಶ್ಲೋಕಗಳ ಸಂಗತಿ ತಿಳಿಯಬೇಕು ಎನ್ನುವುದಿಲ್ಲ. ಇವುಗಳಲ್ಲಿ ಕವಿ ಪುನಃ ಪುನಃ ಶ್ರೀಕೃಷ್ಣನನ್ನು ತನ್ನ ಮನಸ್ಸಿಗೆ ತಂದುಕೊಳ್ಳುತ್ತಾನೆ. ಆದ್ದರಿಂದ ಇದರಲ್ಲಿ ಪುನರುಕ್ತಿ ಅನಿವಾರ್ಯವಾಗಿದೆ. ಆದರೆ ಒಂದೊಂದು ಸಲವೂ ಒಂದಲ್ಲ

ಒಂದು ಹೊಸ ವಿವರ ಬರುತ್ತದೆ, ಕೃಷ್ಣನ ಮೂರ್ತಿ ಅಷ್ಟರಮಟ್ಟಿಗೆ ಬೇರೆಯಾಗುತ್ತದೆ. ಕೃತಿಯಲ್ಲಿ ಬರುವ ಕೃಷ್ಣನ ಮೂರ್ತಿ ಹಲವು ವಯಸ್ಸಿನವು, ಹಲವು ಸಂದರ್ಭದವು. ಅಂಬೆಗಾಲಿಡುವ ಕೃಷ್ಣ, ಬೆಣ್ಣೆಯನ್ನು ಹಿಡಿದಿರುವ ಕೃಷ್ಣ, ಅಂಗಳದ ಮಣಿಶಿಲೆಯಲ್ಲಿ ನೆರಳಲ್ಲಿ ಬೆಣ್ಣೆಯನ್ನು ಕಂಡು ಅದನ್ನು ತುಡುಕನೋಡಿ ಅದು ದೊರೆಯಲಿಲ್ಲವೆಂದು ಅಳುವ ಕೃಷ್ಣ, ಹಾಲು ಬೇಡುವ ಬೆಣ್ಣೆ ಕಳುವ, ಕೃಷ್ಣ, ಸಂಜೆ ಬಂದ ದನಗಳ ಮಂದೆಯಲ್ಲಿ ನುಗ್ಗಿ ತಾಯಿ ಕೈಗೆ ಸಿಕ್ಕದೆ ಓಡುವ ಕೃಷ್ಣ, ಮಣ್ಣು ತಿಂದನೆಂದು ಬಲರಾಮ ಚಾಡಿ ಹೇಳಿದಾಗ ಅದು ಸುಳ್ಳು ಎಂದು ಸ್ಥಾಪಿಸಲು ತಾಯಿಗೆ ತನ್ನ ಬಾಯಿ ತೆರೆದು ತೋರಿದ ಕೃಷ್ಣ, ದನ ಕಾಯಲು ಹೋಗಿರುವ ಕೃಷ್ಣ, ಗೊಲ್ಲ ಚೆಲುವೆಯರೊಡನೆ ಆಟ ವಾಡುವ ಕೃಷ್ಣ, ರಾಮಾವತಾರದ ಕತೆ ಕೇಳುತ್ತ ಸೀತಾಪಹರಣದ ಮಾತು ಬಂದಾಗ ಇದು ಬೇರೆ ಅವತಾರ ಎಂಬುದನ್ನು ಮರೆತು, ಲಕ್ಷ್ಮಣಾ ನನ್ನ ಧನುಸ್ಸೆಲ್ಲಿ ಧನುಸ್ಸೆಲ್ಲಿ, ಎಂದ ಕೃಷ್ಣ, ಗೋವರ್ಧನೋದ್ಧಾರಿ ಕೃಷ್ಣ, ಕಂಸ ಸಂಹಾರಿ ಕೃಷ್ಣ, ಹೀಗೆ ಕಾವ್ಯದ ಮುನ್ನೂರು ಶ್ಲೋಕದಲ್ಲಿ ಕೃಷ್ಣನ ಮುನ್ನೂರು ಚಿತ್ರ ದೊರೆಯುತ್ತದೆ. ಶ್ರೀಕೃಷ್ಣಕರ್ಣಾಮೃತ ಕೃಷ್ಣನನ್ನು ಕುರಿತ ಕಥೆಗಳ ಮಾಲೆ, ಚಿತ್ರಶಾಲೆ.

ಕವಿ ಕಥನ ಚತುರ, ಕವನ ಚತುರ, ಅವನ ಭಾಷೆ ಸುಂದರವಾಗಿದೆ. ಅವನು ಸರಸ್ವತಿಯನ್ನು ಸಹಜಸರಲೇ ಎಂದಿದ್ದಾನೆ. ಅವನ ಈ ಕಾವ್ಯ ಸಹಜ ಸರಲ ಆಗಿಯೇ ಇದೆ. ಇದರಲ್ಲಿ ಪ್ರಾಸಾನುಪ್ರಾಸಗಳ ಸೊಗಸಿದೆ; ಸ್ವರಗಳ ವಿನ್ಯಾಸವಿದೆ; ರಚನಚಮತ್ಕಾರವಿದೆ; ಬಹು ವಿಧದ ಛಂದಸ್ಸಿದೆ. ಅರ್ಥದಲ್ಲಿ ಸರಳತೆ ಇದೆ, ಚಾತುರ್ಯ ಇದೆ, ಅಲಂಕಾರ ಇದೆ, ವ್ಯಂಗ್ಯ ಇದೆ. ಶೃಂಗಾರ, ವೀರ, ಕರುಣ ಹಾಸ್ಯ ಅದ್ಭುತ ರಸಗಳಿವೆ.

ಕೃತಿಯ ರಚನೆಯಿಂದ ಕವಿ ತನ್ನ ದೈವದ ಮೂರ್ತಿಯನ್ನು ತನ್ನ ಚಿತ್ತಫಲಕದ ಮೇಲೆ ಭದ್ರವಾಗಿ ಮುದ್ರಿಸಿಕೊಂಡನು. ಅದರ ಮೂಲಕ ಆ ದೈವವನ್ನು ಸಾಕ್ಷಾತ್ಕಾರ ಮಾಡಿಕೊಂಡನು. ಈ ಸಿದ್ಧಿಯ ಫಲವಾಗಿ ಶರೀರ ಬಂಧದಿಂದ ವಿಮುಕ್ತನಾದನು.

ಇಲ್ಲಿ ಬರುವ ಕೆಲವು ಪ್ರಣಯಪ್ರಸಂಗಗಳು ಅತಿಗೆ ಹೋಗಿವೆ ಅಲ್ಲವೆ ಎಂದು ಹೊಸಕಾಲದ ನಮಗನೇಕರಿಗೆ ತೋರುತ್ತದೆ, ಐವತ್ತು ವರುಷದ ಹಿಂದೆ ಆಂಗ್ಲ ಸಾಹಿತ್ಯದ ಅಭ್ಯಾಸ ಮಾಡಿದ ನಮ್ಮ ತಲೆಮಾರಿಗಂತೂ ಈ ಶಂಕೆ ತೀರಾ ಸಹಜ. ಇದನ್ನು ನಿವಾರಿಸುವುದಾಗಲಿ, ಕಾವ್ಯವನ್ನು ಸಮರ್ಥಿಸುವುದಾಗಲಿ, ಇಲ್ಲಿ ಮಾಡಬೇಕಾದ ಕೆಲಸ ಅಲ್ಲ. ಅಥವಾ ಸಮರ್ಥಿಸಿದೆವು, ಶಂಕಿಸುವವರ ಶಂಕೆ ಅದರಿಂದ ನಿವಾರಣೆ ಆದೀತು ಎಂದು ನಮಗೆ ನೆಚ್ಚಿಕೆ ಇಲ್ಲ. ಸಮರ್ಥನದ ದೃಷ್ಟಿಯಿಂದಲ್ಲ, ಕವಿಯ ಮನೋಧರ್ಮವನ್ನು ಬಿಡಿಸಿ ತೋರಿಸುವ ದೃಷ್ಟಿಯಿಂದ, ಮೂರು ಮಾತನ್ನು ಹೇಳಬಹುದು. ಒಂದು ಮಾತು : ಈ ಶ್ಲೋಕಗಳೆಲ್ಲ ಶ್ರೀಕೃಷ್ಣನನ್ನು ದೇವರೆಂದು ಭಾವಿಸುವವರ ಸಲುವಾಗಿ ರಚಿತವಾಗಿವೆ ಎನ್ನುವುದು. ಎರಡನೆಯ ಮಾತು, ಈ ಕವಿತೆಯ ಕೃಷ್ಣ ಐತಿಹಾಸಿಕ ವ್ಯಕ್ತಿ ಅಲ್ಲ, ಅಧ್ಯಾತ್ಮ ತತ್ತ್ವವನ್ನು ಸುಲಭವಾಗಿ ತಿಳಿಸುವ ಸಲುವಾಗಿ ಧರ್ಮ ನಿರ್ಮಿಸಿಕೊಂಡಿರುವ ಒಂದು ಸಂಕೇತ, ಕಲ್ಪನೆಯ ಒಂದು ಮೂರ್ತಿ, ಎನ್ನುವುದು. ಮೂರನೆಯ ಮಾತು, ಶ್ಲೋಕಗಳು ಗುಂಪಿನ ಎದುರಲ್ಲಿ ಓದುವುದಕ್ಕಾಗಿ ಬರೆದುವಲ್ಲ ಎನ್ನುವುದು: ಓದುವವರು ಒಬ್ಬರೇ ಕುಳಿತು ಓದಬೇಕು ; ಅಥವಾ ತಮಗೆ ತಮ್ಮಷ್ಟೆ ಹತ್ತಿರ ಆದ ಇನ್ನೊಬ್ಬರು ಇನ್ನಿಬ್ಬರೊಡನೆ ಮಾತ್ರ ಕುಳಿತು ಓದಬೇಕು. ಈ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಂಡು ಓದುವುದೇ ಕಾವ್ಯವನ್ನು ಸರಿಯಾಗಿ ಓದುವ ರೀತಿ ; ಇದನ್ನು ಬಿಟ್ಟರೆ ಕಾವ್ಯಕ್ಕೆ ಅಪಾರ್ಥ ಆಗುತ್ತದೆ.

೫

ಆಂಗ್ಲ ವಿದ್ಯೆಯನ್ನು ಪಡೆಯ ಹೋದ ನಮಗೆ ರಾಮಾಯಣ ಭಾರತಗಳ ಪರಿಚಯವೇ ಇಲ್ಲದೆ ಹೋಯಿತೆಂದು ನಾನು ಅನೇಕ ಸಲ ಹೇಳಿದ್ದೇನೆ. ಇನ್ನು ಶ್ರೀಕೃಷ್ಣಕರ್ಣಾಮೃತದ ಪರಿಚಯ ಇಲ್ಲದೆ ಹೋದದ್ದು ಏನು ಆಶ್ಚರ್ಯ ? ಮಧ್ಯ ವಯಸ್ಸಿನಲ್ಲಿ ಈ ಗ್ರಂಥವನ್ನು ನೋಡಿದ ನಾನು ನನ್ನ ತಲೆಮಾರಿನ ವಿದ್ಯಾವಂತರ ಒಬ್ಬ ಪ್ರತಿನಿಧಿ. ಆದರೆ ನಮ್ಮ ಸಂಸ್ಕೃತಿ ಸುರೂಪ

ವಾಗಿ ಬೆಳೆಯಬೇಕಾದರೆ ನಮ್ಮ ವಿದ್ಯಾವಂತರೆನ್ನಿಸಿಕೊಳ್ಳುವವರೆಲ್ಲರಿಗೂ ಈ ಗ್ರಂಥದ, ಇಂಥ ನಮ್ಮ ಉತ್ತಮ ಗ್ರಂಥಗಳ, ಪರಿಚಯ ಸ್ವಲ್ಪವಾದರೂ ದೊರೆಯಬೇಕು. ಇದನ್ನು ಸಾಧಿಸುವುದಕ್ಕೆ, ಈ ಪುಸ್ತಕದಲ್ಲಿ ನಡೆದಿರುವ ಯತ್ನದಂಥ ಯತ್ನ ಆವಶ್ಯಕ. ಬಹು ವಿವರಕ್ಕೆ ಹೋದರೆ ಪ್ರಕಟನೆ ಕಷ್ಟ. ಮೂಲ ಅಷ್ಟನ್ನೆ ಅಚ್ಚು ಮಾಡಿದರೆ ಅನೇಕರಿಗೆ ತಿಳಿಯುವುದಿಲ್ಲ. ಆದ್ದರಿಂದ ಮಾತಿಗೆ ಮಾತು ಎಷ್ಟು ಅಷ್ಟು ಅರ್ಥ ಕೊಟ್ಟು, ಓದುವ ನೀವು ಗ್ರಂಥವನ್ನು ವಿದ್ಯಾರ್ಥಿ ಮನೋಧರ್ಮದಿಂದ ಅಭ್ಯಾಸಮಾಡಿ, ಎನ್ನುವುದು ಒಂದು ಉಪಾಯ. ಅದನ್ನು ಈ ಭಾಷಾಂತರದಲ್ಲಿ ಅನುಸರಿಸಿದ್ದೇನೆ. ಉದ್ದೇಶ ಪೂರ್ವಕವಾಗಿಯೇ ಅರ್ಥದಲ್ಲಿ ಬಹು ಕಡೆ ಮೂಲದ ಪದಗಳನ್ನೇ ಪ್ರಯೋಗಿಸಿದ್ದೇನೆ.

೬

ನಾನು ಸಂಸ್ಕೃತವನ್ನು ಕ್ರಮವಾಗಿ ಅಭ್ಯಾಸ ಮಾಡಿದವನಲ್ಲ. ವ್ಯಾಖ್ಯಾನ ಭಾಷಾಂತರಗಳ ಸಹಾಯದಿಂದ ಈ ಅನುವಾದವನ್ನು ಸಿದ್ಧಪಡಿಸಿದೇನೆ. ಇದರಲ್ಲಿ ತಪ್ಪುಗಳಾಗಿದ್ದರೆ ನನಗೆ ಆಶ್ಚರ್ಯವಿಲ್ಲ. ತಪ್ಪುಗಳನ್ನು ಕಾಣುವ ಹಿರಿಯರು ನನ್ನ ಆಶಯವನ್ನು ಗಣಿಸಿ ತಾಳ್ಮೆವಹಿಸಬೇಕೆಂದು ಬೇಡುತ್ತೇನೆ. ಅನುಕೂಲವಾದರೆ ನನಗೆ ತಿಳಿಸಬೇಕೆಂದು ಪ್ರಾರ್ಥನೆ.

ಅಚ್ಚಿನಲ್ಲಿ ಹಲವೆಡೆ ತಪ್ಪು ಬಿದ್ದಿವೆ. ಇಂಥ ತಪ್ಪುಗಳನ್ನು ತಿದ್ದಿ, ಪ್ರಾಯಃ ಅಪುರೂಪವೆಂದು ತೋರಿದ ಪದಗಳ ಅರ್ಥವನ್ನು ನಿರೂಪಿಸಿ, ಆವಶ್ಯಕವೆಂದು ಕಂಡ ಇನ್ನು ಕೆಲವು ವಿವರವನ್ನು ಸೂಚಿಸಿ, ಕೊನೆಯಲ್ಲಿ ಟಿಪ್ಪಣಿಗಳನ್ನು ಕೊಟ್ಟಿದೆ. ಆಯಾ ಶ್ಲೋಕವನ್ನು ಓದುವಾಗ ಆ ಸಂದರ್ಭದ ಟಿಪ್ಪಣಿಗಳನ್ನು ನೋಡಿಕೊಳ್ಳಬೇಕೆಂದು ಬೇಡಿದೆ.

ಬೆಂಗಳೂರು, ವಿಕಾರಿ ಸಂವತ್ಸರ
ವೈಶಾಖ ಶುದ್ಧ ದ್ವಾದಶೀ ೧೯-೫-೫೯

ಶ್ರೀನಿವಾಸ.

ಎರಡನೆಯ ಮುದ್ರಣ

ವಿಜ್ಞಾಪನೆ

(ಪುಸ್ತಕದಲ್ಲಿ ಮುಂದೆ ಸೂಚಿಸಿರುವ ಶ್ಲೋಕಗಳಲ್ಲಿ ಅಚ್ಚಿನ ತಪ್ಪು ಇವೆ. ಶ್ಲೋಕಗಳನ್ನು ಹೀಗೆ ಓದಿಕೊಳ್ಳಬೇಕೆಂದು ಬೇಡಿದೆ.)

ಪುಟ	ಶ್ಲೋಕ	ಹೀಗೆ ಓದಬೇಕು
೨	೩	ಚಾತುರ್ಯೈಕ
೭	೧೩	ಹೊಸವಾಗಿರುವವೂ
೮	೧೬	ಲಲಿತಾನಿ
೧೪	೩೨	ತ್ವಚ್ಛೈಲಶವಂ
೧೮	೪೧	ಅನಾಥ ಬಂಧೋ
೧೮	೪೩	ದೈವಸಾಮಗ್ರೀ
೨೪	೫೫	ಆತಾಮ್ರಾಮಧರಾಮೃತೇ
೨೫	೫೮	ಭಂಗಿಯಿಂದ
೩೦	೭೦	ಶಿಶುಪಾಲ ಬಾಲಪರಿಷದ್ವಿಭೂಷಣಂ
೩೫	೮೦	ಬರುತ್ತಿದ್ದಾನೆ.
೩೬	೮೫	ಪ್ರಥಮ ವಲ್ಲವೋಲ್ಲಂಘಿತಾ
೪೦	೯೮	ಗಲದ್ವ್ರೀಡಾ ಸಮುಜ್ಜೃಂಭಾ ಗುಂಭಾ
೪೩	೧೦೧	ಚರಿತಾಮೃತಗಳು
,,	,,	ಧಾರಾವಾಹಿಯಾಗಿ.

ಪುಟ	ಶ್ಲೋಕ	ಹೀಗೆ ಓದಬೇಕು
೫೫	೨೪	ನನ್ನ ಚೇತಸ್ಸು
೫೬	೨೫	ನಿರುಂಧರ್ಃ
೫೬	೨೬	ಗೋಪೀಜನಸ್ಯ
೬೧	೩೯	ಆಲಿಂಗಿತನಾಗಿ
೬೩	೪೩	ಆವ್ಯಾಹತವಾದ
೬೪	೪೫	ನಿಜಾವಾಸಂ
೬೬	೫೨	ಪೃಥಿವ್ಯಾಕುಲಂ
೬೭	೫೨	ಪುಷ್ಪಾರ್ಚನೆಯಿಂದ
೭೪	೭೪	ಶಾರ್ದೂಲ
೭೭	೭೭	ಹಸುಗಳ ಗುಂಪಿನಲ್ಲಿ
,,	,,	ನಿಡುಗುರುಳ, ಎಳೆಯು
೭೯	೮೨	ಯಾರೋ ನೀನು ಹುಡುಗ ?
೮೩	೯೨	ಮದದಿಂದ
೮೮	೧೦೬	ಪುಣ್ಯೈರ್ಯಶೋ
೯೨	೧	ಹಸ್ತೋದಸ್ತ
೯೫	೫	ಶಾರ್ಙ್ಗಧರನ
೯೭	೧೦	ಪಾದಕಮಲವನ್ನು
೧೦೬	೩೫	ಪುನಃ ಪುನರುಪಾಸ್ಮಹೇ
೧೧೦	೪೮	ಶಾರ್ಙ್ಗಿಣಃ
೧೧೦	೪೮	ಶ್ರಿಯಾಶ್ರಿತಂ
೧೧೨	೫೧	ಅನುಗತಮಮರೀಣಾಂ
೧೧೪	೫೮	ಸುಧಾಧರಾ
೧೨೦	೭೩	ಅರ್ಥಾನುಲಾಪಾನ್
೧೨೦	೭೩	ಅಕೃತ್ರಿಮಾಣಾಂ

ಪುಟ	ಶ್ಲೋಕ	ಹೀಗೆ ಓದಬೇಕು
೧೨೩	೭೬	ಲಕ್ಷ್ಮೀದೇವಿಯಿಂದ
೧೨೪	೮೨	ದಧ್ಯನ್ನ ಮಶ್ನಾತಿ
೧೨೭	೮೭	ಅನವದ್ಯವಪುಷ
೧೨೭	೮೯	ಅವನ ಜಾರತ್ವ
೧೨೮	೯೪	ಪಶ್ಚಾತ್
೧೩೨	೧೦೧	ಜಂಘಾತಯುಗ್ಮಂ
೧೩೨	೧೦೨	ವಿಕಸಿತ ಕುರವಿಂದಾಭ
೧೩೨	೧೦೩	ಆಪೀತಂ
೧೩೪	೧೦೫	ಪಾಪ ಸಂಘಾತ ಪಂಜರಃ
೧೩೬	೪	ತಾಮರಸಾಸನಃ

ಶ್ರೀಃ

ಶ್ರೀಕೃಷ್ಣಕರ್ಣಾಮೃತಂ

ನಿವೇದನ

ಶ್ರೀಲೋಲನಡಿಯ ಭಕುತಿಯೊ
ಳೋಲಾಡಿದ ಜೀವವೀಂಟಿದಾನಂದವನಾ
ಲೀಲಾಶುಕಮುನಿ ಹಾಡಿದ
ನೀಲಾವಣ್ಯಪ್ರಪೂರ್ಣಸುಂದರಕೃತಿಯೊಳ್.

ಮುನಿ ಸಂಸ್ಕೃತದಲಿ ಹಾಡಿದ
ಮನೋಹರಾರ್ಥಗಳನೆನ್ನ ಕನ್ನಡದೊಡಹು
ಟ್ಟನುಭವಿಸಲೆಂಬ ಹಂಬಲು
ಘನವಾಗಿರಲೊರೆದೆನವನು ನಮ್ಮಯ ನುಡಿಯೊಳ್

ಒಡಹುಟ್ಟಿನಸಂತಸಮುಂ
ನುಡಿತಾಯ್‌ಸನ್ನಿಧಿಯದೊಂದುಸೇವಾಕ್ರಮಮುಂ
ಒಡೆಯ ತಿರುವೇಂಗಡನ ಸಿರಿ
ಯಡಿಗಳ ಪೂಜನಮುಮಕ್ಕೆ ಕಿರಿದೀಕಜ್ಜಂ.

ಶ್ರೀಃ

ಶ್ರೀಕೃಷ್ಣಕರ್ಣಾಮೃತಂ

ಚಿಂತಾಮಣಿರ್ಜಯತಿ ಸೋಮಗಿರಿರ್ಗುರುರ್ಮೇ
ಶಿಕ್ಷಾಗುರುಶ್ಚ ಭಗವಾನ್ ಶಿಖಿಪಿಂಛಮೌಲಿಃ
ಯತ್ಪಾದಕಲ್ಪತರುಪಲ್ಲವಶೇಖರೇಷು
ಲೀಲಾಸ್ವಯಂವರರಸಂ ಲಭತೇ ಜಯಶ್ರೀಃ

ಅಸ್ತಿಸ್ವಸ್ತರುಣೀಕರಾಗ್ರ ವಿಗಲತ್ಕಲ್ಪಪ್ರಸೂನಾಪ್ಲುತಂ
ವಸ್ತು ಪ್ರಸ್ತುತವೇಣುನಾದಲಹರೀ ನಿರ್ವಾಣ ನಿರ್ವ್ಯಾಕುಲಂ
ಸ್ರಸ್ತಸ್ರಸ್ತನಿರುದ್ಧನೀವಿ ವಿಲಸತ್ ಗೋಪೀಸಹಸ್ರಾವೃತಂ
ಹಸ್ತನ್ಯಸ್ತನತಾಪವರ್ಗಮಖಿಲೋದಾರಂ ಕಿಶೋರಾಕೃತಿ

ಚಾತುರ್ಯೈಕ ನಿಧಾನಸೀಮಚಪಲಾಪಾಂಗಚ್ಛಟಾಮನ್ಥರಂ
ಲಾವಣ್ಯಾಮೃತ ವೀಚಿಲಾಲಿತದೃಶಂ ಲಕ್ಷ್ಮೀಕಟಾಕ್ಷಾದೃತಂ
ಕಾಲಿನ್ದೀ ಪುಲಿನಾಂಗಣ ಪ್ರಣಯಿನಂ ಕಾಮಾವತಾರಾಂಕುರಂ
ಬಾಲಂ ನೀಲಮಮೀವಯಂ ಮಧುರಿಮಸ್ವಾರಾಜ್ಯಮಾರಾಧ್ನುಮಃ

ಶ್ರೀಃ

ಶ್ರೀಕೃಷ್ಣಕರ್ಣಾಮೃತಂ

ಚಿಂತಾಮಣಿಗಳಾದ ನನ್ನ ಗುರು ಸೋಮಗಿರಿಯವರು ಜಯಶೀಲರು; ಅಂತೇ ಶಿಕ್ಷಾಗುರು ಭಗವಾನ್ ಶಿಖಿಪಿಂಛಮೌಲಿ. ಇವರ ಪಾದವೆಂಬ ಕಲ್ಪತರುಪಲ್ಲವವು ಶೇಖರವಾದವರಲ್ಲಿ ಜಯಲಕ್ಷ್ಮಿ ಲೀಲಾಸ್ವಯಂವರ ರಸವನ್ನು ಪಡೆಯುತ್ತಾಳೆ.

ಸ್ವರ್ಗದ ತರುಣಿಯರ ಕರಗಳ ಕೊನೆಯಿಂದ ಸರಿದ ಕಲ್ಪಪ್ರಸೂನಗಳಲ್ಲಿ ಅದ್ದಿರುವುದು, ಪ್ರಸ್ತುತವಾದ ವೇಣುನಾದಲಹರಿಯಿಂದುದಿಸಿದ ಆನಂದದಿಂದ ನಿರ್ವ್ಯಾಕುಲವಾದದ್ದು, ಮರಳಿಮರಳಿ ಜಾರುವ ಸೆರಗನ್ನು ಮೇಲೆಳೆದುಕೊಳ್ಳುವ ಸಹಸ್ರಗೋಪಿಯರಿಂದ ಆವೃತವಾದದ್ದು, ತಲೆಬಾಗಿದವರಿಗೆ ಕೊಡಲು ಕೈಯಲ್ಲಿ ಮುಕ್ತಿಯನ್ನಿರಿಸಿಕೊಂಡದ್ದು, ಉಂಟು ವಸ್ತು, ಅಖಿಲ ಉದಾರವಾದ ಕಿಶೋರಾಕೃತಿಯದು.

ಚಾತುರ್ಯನಿಧಾನದ ಒಂದೇ ಎಲ್ಲೆಯಾದ ಚಪಲ ಅಪಾಂಗ ಸಮೂಹದ ಹೊರೆಯನ್ನು ಹೊತ್ತಿರುವನೂ, ಲಾವಣ್ಯಾಮೃತದ ತೆರೆಗಳಿಂದ ಲಾಲಿತವಾದ ಕಣ್ಣುಳ್ಳವನೂ, ಲಕ್ಷ್ಮಿಯ ಕಟಾಕ್ಷದಿಂದ ಆದೃತನಾದವನೂ, ಯಮುನೆಯ ಮರಳ ಹರಹನ್ನು ಪ್ರೀತಿಸುವವನೂ, ಕಾಮನ ಜನ್ಮಕ್ಕೆ ಅಂಕುರನಾದವನೂ, ಸಕಲ ಸೌಂದರ್ಯದ ಸ್ವಾರಾಜ್ಯನೂ, ಆದ ನೀಲವರ್ಣದ ಬಾಲನನ್ನು ನಾವೀಗ ಆರಾಧಿಸುತ್ತೇವೆ,

ಬರ್ಹೋತ್ತಂಸವಿಲಾಸಿ ಕುಂತಲಭರಂ ಮಾಧುರ್ಯಮಗ್ನಾನ
ಪ್ರೋನ್ಮೀಲನ್ನವಯೌವನಂ ಪ್ರವಿಲಸದ್ವೇಣುಪ್ರಣಾದಾಮೃ
ಅಪೀನಸ್ತನಕುಟ್ಮಲಾಭಿರಭಿತೋಗೋಪೀಭಿರಾರಾಧಿತಂ
ಜ್ಯೋತಿಶ್ಚೇತಸಿ ನಶ್ಚರೌತಿ ಜಗತಾಮೇಕಾಭಿರಾಮಾದ್ಭುತಂ

ಮಧುರತರಸ್ಮಿತಾಮೃತವಿಮುಗ್ಧ ಮುಖಾಂಬುರುಹಂ
ಮದಶಿಖಿ ಪಿಂಛಲಾಂಛಿತ ಮನೋಜ್ಞಕಚಪ್ರಚಯಂ
ವಿಷಯ ವಿಷಾಮಿಷಗ್ರಸನ ಗೃಧ್ನುನಿ ಚೇತಸಿ ಮೇ
ವಿಪುಲ ವಿಲೋಚನಂ ಕಿಮಪಿ ಧಾಮ ಚಕಾಸ್ತು ಚಿರಂ

ಮುಕುಲಾಯಮಾನನಯನಾಂಬುಜಂ ವಿಭೋಃ
ಮುರಲೀ ನಿನಾದ ಮಕರಂದನಿರ್ಭರಂ
ಮುಕುರಾಯಮಾಣ ಮೃದುಗಂಡಮಂಡಲಂ
ಮುಖಪಂಕಜಂ ಮನಸಿಮೇ ವಿಜೃಂಭತಾಂ

ಕಮನೀಯ ಕಿಶೋರಮುಗ್ಧ ಮೂರ್ತೇಃ
ಕಲವೇಣು ಕ್ವಣಿತಾದೃತಾನನೇಂದೋಃ
ಮಮವಾಚಿ ವಿಜೃಂಭತಾಂ ಮುರಾರೇಃ
ಮಧುರಿಮ್ಣಃ ಕಣಿಕಾಪಿ ಕಾಪಿ ಕಾಪಿ

ಮದಶಿಖಣ್ಡಿ ಶಿಖಣ್ಡ ವಿಭೂಷಣಂ
ಮದನಮಂಥರ ಮುಗ್ಧಮುಖಾಂಬುಜಂ
ವ್ರಜವಧೂನಯನಾಂಚಲವಂಚಿತಂ
ವಿಜಯತಾಂ ಮಮ ವಾಙ್ಮಯ ಜೀವಿತಂ

ನವಿಲಗರಿಯ ಉತ್ತಂಸದಿಂದ ವಿಲಾಸಯುಕ್ತವಾಗಿರುವ ಹೆರಳಭಾರ, ಮಾಧುರ್ಯ ಮಗ್ನವಾದ ಆನನ, ಹೊಂಗಿ ಏರಿದ ಹೊಸ ಯೌವನ, ವಿಲಾಸ ಉಕ್ಕಿದ ವೇಣುಗಾನದ ಅಮೃತ, ಆಪೀನಸ್ತನಕುಟ್ಮಲರಾದ ಗೋಪಿಯರು ಮುತ್ತಿ ಕೊಂಡು ಮಾಡುವ ಆರಾಧನ, ಇವುಗಳಿಂದ ಜಗತ್ತಿಗೆ ಅಭಿರಾಮವಾದ ಒಂದೇ ಆದ ಅದ್ಭುತ ಜ್ಯೋತಿ ನಮ್ಮ ಚೇತಸ್ಸಿನಲ್ಲಿ ಪ್ರಕಾಶಿಸುತ್ತದೆ.

ಮಧುರತರ ಅಮೃತಸಮ ಸ್ಮಿತದಿಂದ ವಿಮುಗ್ಧವಾದ ಮುಖಕಮಲ, ಮದಿಸಿದ ಗಂಡುನವಿಲ ಗರಿಯಿಂದ ಲಾಂಛಿತವಾಗಿ ಮನೋಜ್ಞವಾಗಿರುವ ಹೆರಳು, ವಿಪುಲಲೋಚನಗಳು, ಇವುಗಳ ಅದೆಂಥದೊ ತೇಜಸ್ಸು ಈ ನನ್ನ ವಿಷಯವೆಂಬ ವಿಷಮಾಂಸವನ್ನುಣಲು ಆಶಿಸುವ ಚೇತಸ್ಸಿನಲ್ಲಿ ಚಿರಕಾಲ ಪ್ರಕಾಶಿಸುತ್ತದೆ.

ಮುಕುಲಾಯಮಾನ ನಯನಾಂಬುಜದ, ಮುರಲೀ ನಿನಾದದ ಮಕರಂದದಿಂದ ಪೂರ್ಣವಾದ, ಕನ್ನಡಿಯಂತಿರುವ ಮೃದು ಕಪೋಲಮಂಡಲದ, ಒಡೆಯನ ಮುಖಪಂಕಜ ನನ್ನ ಮನಸ್ಸಿನಲ್ಲಿ ವಿಜೃಂಭಿಸಲಿ.

ಕಮನೀಯವಾದ ಕಿಶೋರ ಮುಗ್ಧಮೂರ್ತಿಯ, ಮತ್ತು ಇಂಪಾದ ಕೊಳಲ ದನಿ ಯಿಂದ ಆದೃತವಾದ ಮುಖಚಂದ್ರದ, ಮುರಾರಿಯ ಮಧುರಿಮತೆಯ ಆ ಇಂತೆಂದು ಬಣ್ಣಿಸಲಾಗದ ಅತಿ ಸೂಕ್ಷ್ಮಲೇಶಾಂಶವಾದರೂ ನನ್ನ ನುಡಿಯಲ್ಲಿ ವಿಜೃಂಭಿಸಲಿ.

ಮದಿಸಿದ ನವಿಲಗರಿಯನ್ನು ವಿಭೂಷಣವಾಗಿ ಉಳ್ಳ, ಮದನಮಂಥರವಾದ ಮುಗ್ಧಮುಖಾಂಬುಜದ, ವ್ರಜವಧೂಜನರ ಕೊನೆಗಣ್ಣಿನಿಂದ ಪೋಸ ಹೋದ ವಸ್ತು ನನ್ನ ಕಾವ್ಯದ ಪ್ರಾಣವಾಗಿ ಪಿಜೃಂಭಿಯಾಗಲಿ.

ಪಲ್ಲವಾರುಣ ಪಾಣಿ ಪಂಕಜ ಸಾಂಗವೇಣು ರವಾಕುಲಂ
ಫುಲ್ಲಪಾಟಲ ಪಾಟಲೀಪರಿವಾದಿ ಪಾದ ಸರೋರುಹಂ
ಉಲ್ಲಸನ್ಮಧುರಾಧರದ್ಯುತಿಮಂಜರೀ ಸರಸಾನನಂ
ವಲ್ಲವೀಕುಚಕುಂಭಕುಂಕುಮ ಪಂಕಿಲಂ ಪ್ರಭುಮಾಶ್ರಯೇ ೯

ಅಪಾಂಗರೇಖಾಭಿರಭಂಗುರಾಭಿಃ
ಅನಂಗರೇಖಾರಸರಂಜಿತಾಭಿಃ
ಅನುಕ್ಷಣಂ ವಲ್ಲವಸುಂದರೀಭಿಃ
ಅಭ್ಯರ್ಚ್ಯಮಾನಂ ವಿಭುಮಾಶ್ರಯಾಮಃ ೧೦

ಹೃದಯೇ ಮಮ ಹೃದ್ಯ ವಿಭ್ರಮಾಣಾಂ
ಹೃದಯಂ ಹರ್ಷವಿಶಾಲಲೋಲನೇತ್ರಂ
ತರುಣಂ ವ್ರಜಬಾಲಸುಂದರೀಣಾಂ
ತರಲಂ ಕಿಂಚನ ಧಾಮ ಸನ್ನಿಧತ್ತಾಂ ೧೧

ನಿಖಿಲಭುವನಲಕ್ಷ್ಮೀ ನಿತ್ಯಲೀಲಾಸ್ಪದಾಭ್ಯಾಂ
ಕಮಲವಿಪಿನ ವೀಥೀಗರ್ವಸರ್ವಂಕಷಾಭ್ಯಾಂ
ಪ್ರಣಮದಭಯದಾನ ಪ್ರೌಢಿಗಾಢೋದ್ಧತಾಭ್ಯಾಂ
ಕಿಮಪಿ ವಹತು ಚೇತಃ ಕೃಷ್ಣಪಾದಾಂಬುಜಾಭ್ಯಾಂ ೧೨

ಪ್ರಣಯಪರಿಣತಾಭ್ಯಾಂ ಪ್ರಾಭವಾಲಂಬನಾಭ್ಯಾಂ
ಪ್ರತಿಪದಲಲಿತಾಭ್ಯಾಂ ಪ್ರತ್ಯಹಂ ನೂತನಾಭ್ಯಾಂ
ಪ್ರತಿಮುಹುರಧಿಕಾಭ್ಯಾಂ ಪ್ರಸ್ನುವಲ್ಲೋಚನಾಭ್ಯಾಂ
ಪ್ರಭವತುಹೃದಯೇನಃ ಪ್ರಾಣನಾಥಃ ಕಿಶೋರಃ ೧೩

ತಳಿರಂತೆ ಅರುಣವಾದ ಕೈಯ ತಾವರೆಯಿಂದ ಕೂಡಿದ ಕೊಳಲ ದನಿಯಿಂದ ಆಕುಲನಾದಂಥ, ಅರಳಿದ ಪಾಟಲೀ ಪುಷ್ಪಗಳ ಸಮೂಹವನ್ನು ತಿರಸ್ಕರಿಸುವ ಪಾದಸರೋರುಹನಾದ, ಉಲ್ಲಾಸಯುಕ್ತವಾದ ಮಧುರಾಧರದ ಬೆಳಗಿನ ಮಂಜರಿಯಿಂದ ಸರಸವಾಗಿರುವ ಮುಖವುಳ್ಳ ಗೋಪಸ್ತ್ರೀಯರ ಕುಚಕುಂಭ ಕುಂಕುಮದಿಂದ ಪಂಕಿಲನಾದ, ಪ್ರಭುವನ್ನು ಆಶ್ರಯಿಸುತ್ತೇನೆ.

ಅನಂಗರೇಖಾರಸದಿಂದ ರಂಜಿತವಾದ ನೀಳವಾದ ಕಡೆಗಣ್ಣನೋಟದಿಂದ ವಲ್ಲವ ಸುಂದರಿಯರು ಅನುಕ್ಷಣವೂ ಅಭ್ಯರ್ಚಿಸುವ ವಿಭುವನ್ನು ಆಶ್ರಯಿಸುತ್ತೇವೆ.

ಹೃದ್ಯವಾದ ವಿಭ್ರಮದ ಎಳೆಯ ವ್ರಜಸುಂದರಿಯರ ಹೃದಯವೇ ತಾನಾಗಿ ರುವ, ಹರ್ಷವಿಶಾಲಲೋಲನೇತ್ರವುಳ್ಳದಾದ, ತರುಣತರಲ ಅಗ್ರಾಹ್ಯ ತೇಜಸ್ಸು ನನ್ನ ಹೃದಯದಲ್ಲಿ ನಿಲ್ಲಲಿ.

ಸಲಿಲಭವದ ಲಕ್ಷ್ಮಿಗೆ ನಿತ್ಯಲೀಲಾಸ್ಥಾನಗಳಾದ, ತಾವರೆಯ ವನದ ವೀಥಿಯ ಗರ್ವವನ್ನು ನಿರ್ಮೂಲಮಾಡುವವಾದ, ಪ್ರಣಾಮಮಾಡಿದವರಿಗೆ ಅಭಯ ಕೊಡುವ ಪ್ರೌಢಿಯಿಂದ ಅತ್ಯಂತ ಉದ್ಧತವಾಗಿರುವ, ಕೃಷ್ಣನ ಅಡಿದಾವರೆಗಳ ದೆಸೆಯಿಂದ ಬರುವ ಅನಿರ್ವಚನೀಯ ಆನಂದವನ್ನು ನನ್ನ ಚೇತನ ಧರಿಸಲಿ.

ಪ್ರಣಯಪರಿಣತಗಳಾದವೂ, ಆಳಲು ಆಧಾರ ಭೂತಗಳಾದವೂ, ಸಹಜವಾಗಿ ಲಲಿತ ಮತ್ತು ದಿನ ದಿನವೂ ಹೊಸವಾಗಿರುವವೂ, ಮತ್ತೆ ಮತ್ತೆ ವಿಶಾಲವಾಗಿ ಪ್ರೇಮವನ್ನು ವರ್ಷಿಸುವವೂ, ಆದ ಲೋಚನಗಳ ಕಿಶೋರ ಪ್ರಾಣನಾಥನು ನಮ್ಮ ಹೃದಯದಲ್ಲಿ ಶಾಸನಮಾಡಲಿ.

ಮಾಧುರ್ಯವಾರಿಧಿ ಮದಾಂಧತರಂಗ ಭಂಗೀ
ಶೃಂಗಾರ ಸಂಕಲಿತ ಶೀತ ಕಿಶೋರವೇಷಂ
ಆಮಂದಹಾಸಲಲಿತಾನನಚಂದ್ರಬಿಂಬಂ
ಆನಂದ ಸಂಪ್ಲವಮನುಪ್ಲವತಾಂ ಮನೋಮೇ ೧

ಅವ್ಯಾಜಮಂಜುಲಮುಖಾಂಬುಜ ಮುಗ್ಧಭಾವೈಃ
ಆಸ್ವಾದ್ಯಮಾನ ನಿಜವೇಣು ವಿನೋದ ನಾದಂ
ಆಕ್ರೀಡತಾಮರುಣಪಾದಸರೋರುಹಾಭ್ಯಾಂ
ಆರ್ದ್ರೇ ಮದೀಯಹೃದಯೇ ಭುವನಾರ್ದ್ರಮೋಜಃ ೧

ಮಣಿನೂಪುರ ವಾಚಾಲಂ ವಂದೇತಚ್ಚರಣಂ ವಿಭೋಃ
ಲಲಿತಾನಿ ಯದೀಯಾನಿ ಲಕ್ಷ್ಮಾಣಿ ವ್ರಜವೀಥಿಷು ೧

ಮಮ ಚೇತಸಿ ಸ್ಫುರತು ವಲ್ಲವೀವಿಭೋಃ
ಮಣಿ ನೂಪುರ ಪ್ರಣಯಿ ಮಂಜು ಶಿಂಜಿತಂ
ಕಮಲವನೇಚರಕಲಿನ್ದಕನ್ಯಕಾ
ಕಲಹಂಸಕಂಠಕಲಕೂಜಿತಾದೃತಂ ೧

ತರುಣಾರುಣ ಕರುಣಾಮಯ ವಿಪುಲಾಯತನಯನಂ
ಕಮಲಾಕುಚಕಲಶೀಭರ ವಿಪುಲೀಕೃತ ಪುಲಕಂ
ಮುರಲೀರವ ತರಲೀಕೃತ ಮುನಿಮಾನಸನಲಿನಂ
ಮಮ ಖೇಲತಿ ಮದಚೇತಸಿ ಮಧುರಾಧರಮಮೃತಂ ೧೧

ಮಾಧುರ್ಯವಾರಿಧಿಯ ಮದಾಂಧ ತರಂಗ ಸಂತತಿಯಿಂದ ಮೂಡಿದಂಥ ಶೃಂಗಾರದಿಂದ ಅಲಂಕೃತವಾಗಿ ಕಣ್ಣಿಗೆ ತಂಪಾಗಿರುವ ಕಿಶೋರ ವೇಷದ, ಮೃದುಮಂದಹಾಸದಿಂದ ಲಲಿತವಾದ ಚಂದ್ರಬಿಂಬಸಮಮುಖದ, ಶ್ರೀಕೃಷ್ಣ ನೆಂಬ ಆನಂದಪ್ರವಾಹ ನನ್ನ ಮನಸ್ಸನ್ನು ತುಂಬಿ ಹರಿಯಲಿ.

ಅವ್ಯಾಜಮಂಜುಲವಾದ ಮುಖಾಂಬುಜದ ಮುಗ್ಧಭಾವಗಳಿಂದ ಆಸ್ವಾದ್ಯ ಮಾನವಾದ ತನ್ನ ವೇಣುವಿನೋದಸಹಿತ ಲೋಕಸುಖಕರವಾದ ಓಜಸ್ಸು, ಆರ್ದ್ರವಾದ ನನ್ನ ಹೃದಯದಲ್ಲಿ ಅರುಣಪಾದಸರೋರುಹಗಳ ದೆಸೆಯಿಂದ ಕ್ರೀಡಿಸಲಿ.

ನಂದವ್ರಜದ ಬೀದಿಗಳಲ್ಲಿ ಲಲಿತವಾದ ಹೆಜ್ಜೆಯ ಗುರುತುಗಳನ್ನು ಮಾಡಿದ ಪ್ರಭುವಿನ ಮಣಿನೂಪುರಗಳ ದನಿಯ ಆ ಚರಣಗಳಿಗೆ ವಂದಿಸುತ್ತೇನೆ.

ಕಮಲವನದಲ್ಲಿ ಚರಿಸುವ ಯಮುನೆಯ ಕಲಹಂಸಗಳ ಕೊರಲ ಕಲಕೂಜಿತ ದಿಂದ ಮರ್ಯಾದೆ ಪಡೆಯುವಂಥದಾದ ವಲ್ಲವೀ ವಿಭುವಿನ ಮಣಿನೂಪುರದ ಸ್ನೇಹಯುಕ್ತ ಮಧುರಧ್ವನಿ ನನ್ನ ಚೇತಸ್ಸಿನಲ್ಲಿ ಸ್ಫುರಿಸಲಿ.

ಕರುಣಾಮಯ ವಿಪುಲ ಆಯತ ಆದ ಎಳೆಗೆಂಪಿನ ಕಣ್ಣಿನ, ಲಕ್ಷ್ಮೀದೇವಿಯ ಕುಚಕಲಶ ಭರದಿಂದ ವಿಪುಲೀಕೃತವಾದ ರೋಮಾಂಚದ, ಕೊಳಲರವದಿಂದ ಮುನಿಗಳ ಮನಸ್ಸೆಂಬ ನಲಿನವನ್ನು ಚಂಚಲಗೊಳಿಸುವ ಮಧುರವಾದ ಅಧ ರದ, ಅಮೃತ ನನ್ನ ಮತ್ತಚೇತನದಲ್ಲಿ ಕ್ರೀಡಿಸುತ್ತದೆ.

ಆಮುಗ್ಧ ಮುಗ್ಧನಯನಾಂಬುಜ ಚುಂಬ್ಯಮಾನ
ಹರ್ಷಾಕುಲವ್ರಜವಧೂಮಧುರಾನನೇಂದೋಃ
ಆರಬ್ಧ ವೇಣುರವಮಾದಿಕಿಶೋರಮೂರ್ತೇಃ
ಆವಿರ್ಭವಂತಿ ಮಮ ಚೇತಸಿ ಕೇಪಿ ಭಾವಾಃ

ಕಲ ಕ್ವಣಿತ ಕಂಕಣಂ ಕರನಿರುದ್ಧ ಪೀತಾಂಬರಂ
ಕ್ರಮಪ್ರಸೃತ ಕುಂತಲಂ ಗಲಿತಬರ್ಹಭೂಷಂ ವಿಭೋಃ
ಪುನಃಪ್ರಸೃತಿ ಚಾಪಲಂ ಪ್ರಣಯಿನೀಭುಜಾಯಂತ್ರಿತಂ
ಮಮ ಸ್ಫುರತು ಮಾನಸೇ ಮದನಕೇಲಿಶಯ್ಯೋತ್ಥಿತಂ

ಸ್ತೋಕಸ್ತೋಕನಿರುಧ್ಯಮಾನ ಮೃದುಲ ಪ್ರಸ್ಯಂದಿ ಮಂದಸ್ಮಿತಂ
ಪ್ರೇಮೋದ್ಭೇದ ನಿರರ್ಗಲ ಪ್ರಸೃಮರಪ್ರವ್ಯಕ್ತ ರೋಮೋದ್ಗಮಂ
ಶ್ರೋತ್ರಶ್ರೋತ್ರಮನೋಹರವ್ರಜವಧೂಲೀಲಾಮಿಥೋಜಲ್ಪಿತಂ
ಮಿಥ್ಯಾಸ್ವಾಪಮುಪಾಸ್ಮಹೇ ಭಗವತಃ ಕ್ರೀಡಾನಿಮೀಲದ್ದೃಶೋಃ

ವಿಚಿತ್ರಪತ್ರಾಂಕುರಶಾಲಿಬಾಲಾ
ಸ್ತನಾಂತರಂ ಮೌನಿಮನೋಂತರಂ ವಾ
ಅಪಾಸ್ಯ ಬೃಂದಾವನ ಪಾದಪಾಸ್ಯಂ
ಉಪಾಸ್ಯಮನ್ಯನ್ನ ವಿಲೋಕಯಾಮಃ

ಸಾರ್ಧಂ ಸಮೃದ್ಧೈರಮೃತಾಯಮಾನೈಃ
ಆಧ್ಮಾಯಮಾನೈಃ ಮುರಲೀನಿನಾದೈಃ
ಮೂರ್ಧಾಭಿಷಿಕ್ತಂ ಮಧುರಾಕೃತೀನಾಂ
ಬಾಲಂ ಕದಾ ನಾಮ ವಿಲೋಕಯಿಷ್ಯೇ

ಅರೆ ಮುಚ್ಚಿದ ಕಣ್ದಾವರೆಯಿಂದ ಚುಂಬಿಸಿ ವ್ರಜಸುಂದರಿಯರ ಮಧುರ ಮುಖಚಂದ್ರವನ್ನು ಹರ್ಷಾಕುಲ ಮಾಡುವ ಆದಿ ಕಿಶೋರ ಮೂರ್ತಿಯ ಅದೆಂಥವೊ ಭಾವಗಳು, ಆರಂಭಿಸಿದ ಕೊಳಲಗಾನದ ರೀತಿಯಲ್ಲಿ ತೀರ ಸುಂದರವಾಗಿ ನನ್ನ ಚೇತನದಲ್ಲಿ ಮೂಡುತ್ತವೆ.

ಕಲ ಕ್ವಣಿತ ಕಂಕಣದ, ಕೈಯಿಂದ ತಡೆದಿರುವ ಪೀತಾಂಬರದ, ಕ್ರಮವಾಗಿ ಹರಡಿರುವ ಕುಂತಲದ, ಜಾರಿದ ನವಿಲಗರಿಯ ತೊಡವಿನ, ರತಿಶಯ್ಯೆಯಿಂದ ಎದ್ದ ವೇಳೆ ಪ್ರಣಯಿನಿಯ ತೋಳತೆಕ್ಕೆಯು ಕಾರಣದಿಂದ ಮರಳಿ ಮೈಚಾಚುವ ಒಡೆಯನ ಚಾಪಲ ನನ್ನ ಮನಸ್ಸಿನಲ್ಲಿ ಸ್ಫುರಿಸಲಿ.

ಸ್ವಲ್ಪ ಸ್ವಲ್ಪ ತಡೆದು ಮೆದುವಾಗಿ ಹಾಯ್ದ ಮಂದಸ್ಮಿತ, ಪ್ರೇಮಾವಿರ್ಭಾವದಿಂದ ತಡೆಯಿಲ್ಲದೆ ಮೂಡಿದ ಸುಸ್ಪಷ್ಟರೋಮಾಂಚನ ಕೇಳುವವರ ಕಿವಿಗೆ ಮನೋಹರವಾಗುವಂತೆ ವ್ರಜಸುಂದರಿಯರ ಜೊತೆಯ ಲೀಲೆಯಲ್ಲಿ ಆಡಿದ ಕಿವಿಮಾತು, ಇವನ್ನು ಧರಿಸಿ ಶ್ರೀಕೃಷ್ಣ ಕ್ರೀಡೆಗಾಗಿ ಕಣ್ಮುಚ್ಚಿ ಮಾಡಿದ ಕಪಟ ನಿದ್ರೆಯನ್ನು ಉಪಾಸಿಸುತ್ತೇನೆ.

ವಿಚಿತ್ರವಾದ ಮಕರಿಕಾ ಪತ್ರಗಳಿಂದ ಚಿತ್ರಿತವಾದ ಬಾಲೆಯರ ಸ್ತನಮಧ್ಯ, ಮುನಿಜನರ ಮನದ ಮಧ್ಯ, ಬೃಂದಾವನದ ಮರಗಳಡಿಯ ಕೃತಕಪೀಠ, ಇವನ್ನು ಬಿಟ್ಟು ಶ್ರೀಕೃಷ್ಣನು ಉಪಾಸಿಸುವ ಸ್ಥಾನ ಬೇರೆಯುದನ್ನು ಕಾಣೆವು.

ತಾನು ಊದಿ ನಿರ್ಮಿಸಿದ ಸಮೃದ್ಧ ಅಮೃತಾಯಮಾನ ಮುರಲೀ ನಿನಾದದಿಂದ ಕೂಡಿದವನಾದ, ಎಲ್ಲ ಮಧುರಾಕೃತಿಗಳ ಪಟ್ಟದರಸಾದ, ಬಾಲನನ್ನು ಅದೆಂದಿಗೆ ನಾನು ನೋಡುತ್ತೇನೋ.

ಶಿಶಿರೀಕುರುತೇ ಕದಾನು ನಃ
ಶಿಖಿಪಿಂಛಾಭರಣಃ ಶಿಶುರ್ದೃಶೋಃ
ಯುಗಲಂ ವಿಗಲನ್ಮಧುದ್ರವ
ಸ್ಮಿತಮುದ್ರಾಮೃದುನಾ ಮುಖೇಂದುನಾ

ಕಾರುಣ್ಯಕರ್ಬುರಕಟಾಕ್ಷನಿರೀಕ್ಷಣೇನ
ತಾರುಣ್ಯಸಂವಲಿತ ಶೈಶವ ವೈಭವೇನ
ಆಪುಷ್ಣತಾಭುವನಮದ್ಭುತವಿಭ್ರಮೇಣ
ಶ್ರೀಕೃಷ್ಣಚಂದ್ರ ಶಿಶಿರೀಕುರು ಲೋಚನಂ ಮೇ

ಕದಾವಾ ಕಾಲಿಂದೀಕುವಲಯದಲಶ್ಯಾಮಲತರಾಃ
ಕಟಾಕ್ಷಾ ಲಕ್ಷ್ಯನ್ತೇ ಕಿಮಪಿ ಕರುಣಾವೀಚಿನಿಚಿತಾಃ
ಕದಾವಾ ಕಂದರ್ಪಪ್ರತಿಭಟ ಜಟಾ ಚಂದ್ರಶಿಶಿರಾಃ
ಕಮಪ್ಯನ್ತಸ್ತೋಷಂ ದದತಿ ಮುರಲೀಕೇಲಿನಿನದಾಃ

ಅಧೀರಮಾಲೋಕಿತಮಾರ್ದ್ರ ಜಲ್ಪಿತಂ
ಗತಂ ಚ ಗಂಭೀರ ವಿಲಾಸ ಮನ್ಥರಂ
ಅಮಂದಮಾಲಿಂಗಿತಮಾಕುಲೋನ್ಮದ
ಸ್ಮಿತಂ ಚ ತೇ ನಾಥ ವದನ್ತಿ ಗೋಪಿಕಾಃ

ಅಸ್ತೋಕಸ್ಮಿತಭರಮಾಯತಾಯತಾಕ್ಷಂ
ನಿಃಶೇಷಸ್ತನಮೃದಿತಂ ವ್ರಜಾಂಗನಾಭಿಃ
ನಿಸ್ಸೀಮಸ್ತಬಕಿತ ನೀಲ ಕಾನ್ತಿಧಾರಂ
ದೃಶ್ಯಾಸಂ ತ್ರಿಭುವನ ಸುಂದರಂ ಮಹಸ್ತೇ

ನವಿಲಗರಿಯ ತೊಡವಿನ ಶಿಶು ಮಧುರಸ ಸುರಿಯುವ ನಗೆಮುದ್ರೆಯ ಮೃದುವಾದ ಮುಖಚಂದ್ರನಿಂದ ನಮ್ಮ ಎರಡೂ ಕಣ್ಣನ್ನು ಅದೆಂದು ತಂಪು ಮಾಡುವನೊ.

ಕಾರುಣ್ಯದಿಂದ ಬಣ್ಣ ಪಡೆದ ಕಟಾಕ್ಷದ ನೋಟದಿಂದ, ತಾರುಣ್ಯ ಬೆರೆತ ಶೈಶವ ವೈಭವದಿಂದ, ಲೋಕವನ್ನು ಪೋಷಿಸುವ ಅದ್ಭುತ ವಿಭ್ರಮದಿಂದ, ಶ್ರೀಕೃಷ್ಣ ಚಂದ್ರನೇ ನನ್ನ ಕಣ್ಣಿಗೆ ತಂಪನ್ನುಂಟು ಮಾಡು.

ಯಮುನೆಯ ಕುವಲಯಗಳ ದಲಗಳಿಗಿಂತ ಹೆಚ್ಚು ಶ್ಯಾಮಲವಾದ ಕಟಾಕ್ಷಗಳು ಅವರ್ಣನೀಯವಾದ ಕರುಣೆಯ ಅಲೆಗಳಿಂದ ತೀವಿ ಅದೆಂದು ಕಾಣುತ್ತವೊ ! ಕೊಳಲ ಗಾಯನದ ನಿನದ ಮದನಾರಿಹರನ ಜಡೆಯ ಚಂದ್ರನಂತೆ ತಂಪಾಗಿ ಅವರ್ಣನೀಯವಾದ ಅಂತರಾಹ್ಲಾದವನ್ನು ನೀಡುವುದು ಅದೆಂದೋ!

ಓ ನಾಥ, ಗೋಪಸ್ತ್ರೀಯರು ನಿನ್ನ ಚಂಚಲವಾದ ನೋಟವನ್ನು, ರಸಯುಕ್ತವಾದ ಉಕ್ತಿಯನ್ನು, ಗಂಭೀರವಾದ ವಿಲಾಸದಿಂದ ತೂಕವಾದ ನಡೆಯನ್ನು, ಗಾಢವಾದ ಆಲಿಂಗನವನ್ನು, ಆಕುಲೋನ್ಮದವಾದ ನಗೆಯನ್ನು, ಹೊಗಳಿ ನುಡಿಯುತ್ತಾರೆ.

ತುಂಬು ನಗೆಯ ಭರದ, ದೊಡ್ಡ ದೊಡ್ಡ ಕಣ್ಣುಗಳ ಗೋಪಸ್ತ್ರೀಯರು ಮನಸಾರ ಎದೆಗೆ ಅಪ್ಪಿ ನಲುಗಿಸಿದ, ಮೇರೆ ಇಲ್ಲದೆ ತಾರಕಿತವಾದ ನೀಲಕಾಂತಿಧಾರೆಯ ನಿನ್ನ ತ್ರಿಭುವನ ಸುಂದರವಾದ ತೇಜಸ್ಸ್ವರೂಪವನ್ನು ನೋಡಿಯೇನು.

ಮಯಿ ಪ್ರಸಾದಂ ಮಧುರೈಃ ಕಟಾಕ್ಷೈಃ
ವಂಶೀನಿನಾದಾನುಚರೈಃ ವಿಧೇಹಿ
ತ್ವಯಿ ಪ್ರಸನ್ನೇ ಕಿಮಿಹಾಪರೈರ್ನಃ
ತ್ವಯ್ಯಪ್ರಸನ್ನೇ ಕಿಮಿಹಾಪರೈರ್ನಃ

ನಿಬದ್ಧಮುಗ್ಧಾಂಜಲಿರೇಷಯಾಚೇ
ನೀರಂಧ್ರ ದೈನ್ಯೋನ್ನತ ಮುಗ್ಧ ಕಂಠಂ
ದಯಾಂಬುಧೇ ದೇವ ಭವತ್ಕಟಾಕ್ಷ
ದಾಕ್ಷಿಣ್ಯ ಲೇಶೇನ ಸಕೃನ್ನಿಷಿಂಚ

ಪಿಂಛಾವತಂಸ ರಚನೋಚಿತ ಕೇಶಪಾಶೇ
ಪೀನಸ್ತನೀನಯನಪಂಕಜಪೂಜನೀಯೇ
ಚಂದ್ರಾರವಿಂದ ವಿಜಯೋದ್ಯತ ವಕ್ತ್ರಬಿಂಬೇ
ಚಾಪಲ್ಯಮೇತಿ ನಯನಂ ತವ ಶೈಶವೇ ನಃ

ತ್ವಚ್ಛೈಶವಂ ತ್ರಿಭುವನಾದ್ಭುತಮಿತ್ಯವೈಮಿ
ಯಚ್ಚಾಪಲಂ ಚ ಮಮ ವಾಗವಿವಾದಗಮ್ಯಂ
ತತ್ಕಿಂಕರೋಮಿ ವಿರಣನ್ಮುರಲೀವಿಲಾಸ
ಮುಗ್ಧಂ ಮುಖಾಂಬುಜಮುದೀಕ್ಷಿತುಮೀಕ್ಷಣಾಭ್ಯಾಂ

ಪರ್ಯಾಚಿತಾಮೃತರಸಾನಿ ಪದಾರ್ಥಭಂಗೀ
ಫಲ್ಗೂನಿ ವಲ್ಗಿತ ವಿಶಾಲವಿಲೋಚನಾನಿ
ಬಾಲ್ಯಾಧಿಕಾನಿ ಮದವಲ್ಲಭಭಾಷಿತಾನಿ
ಭಾವೇ ಲುಠನ್ತಿ ಸುದೃಶಾಂ ತವ ಜಲ್ಪಿತಾನಿ

ಕೊಳಲ ಗಾನದೊಡನೆ ಕೂಡಿದ ಮಧುರ ಕಟಾಕ್ಷಗಳಿಂದ ನನ್ನಲ್ಲಿ ಅನುಗ್ರಹ ಮಾಡುವನಾಗು. ನೀನು ಪ್ರಸನ್ನನಾದ ಮೇಲೆ ಬೇರೆಯುದರಿಂದ ಇಲ್ಲಿ ನಮಗೆ ಆಗಬೇಕಾದದ್ದೇನು ? ನೀನು ಅಪ್ರಸನ್ನನಾದರೂ ಅಷ್ಟೆ ಬೇರೆಯುದರಿಂದ ನಮಗೆ ಪ್ರಯೋಜನವೇನು ?

ಬಲವಾಗಿ ಕಟ್ಟಿ ಮುಗ್ಧವಾದ ಅಂಜಲಿ ಸಮೇತ, ಸಂಪೂರ್ಣವಾದ ದೈನ್ಯದ ದೆಸೆಯಿಂದ ಗದ್ಗದವಾದ ಎತ್ತಿದ ದನಿಯಿಂದ, ಈ ನಾನು ಯಾಚಿಸುತ್ತೇನೆ : ಓ ದಯಾಂಬುಧಿ, ದೇವ, ನಿನ್ನ ಕಟಾಕ್ಷದ ದಾಕ್ಷಿಣ್ಯಲೇಶದಿಂದ ಒಮ್ಮೆ ನನ್ನನ್ನು ನೆನೆಯಿಸು.

ನವಿಲಗರಿಯನ್ನು ಅವತಂಸವಾಗಿ ಧರಿಸಲು ತಕ್ಕದಾದ ಕೇಶಪಾಶದ, ತುಂಬಿದ ಎದೆಯ ಗೋಪಸ್ತ್ರೀಯರ ಕಣ್ತಾವರೆಯಿಂದ ಪೂಜನೀಯವಾದ, ಚಂದ್ರನನ್ನೂ ಅರವಿಂದನನ್ನೂ ಜಯಿಸಲು ತೊಡಗಿರುವ ಮುಖಬಿಂಬವುಳ್ಳ, ನಿನ್ನ ಶೈಶವವನ್ನು ನೋಡಲು ನಮ್ಮ ಕಣ್ಣು ಚಪಲವಾಗುತ್ತದೆ.

ನಿನ್ನ ಶೈಶವ ತ್ರಿಭುವನಾದ್ಭುತವೆಂದು ನಾನು ಬಲ್ಲೆ. ಆದರೂ, ಏನು ಮಾಡಲಿ ನಾನು, ಊದುವ ಕೊಳಲವಿಲಾಸದಿಂದ ಮುದ್ದಾದ ನಿನ್ನ ಮುಖಾಂಬುಜವನ್ನು ಕಣ್ಗಳಿಂದ ನೋಡಲು ನನಗೆ ಈಗ ಬೇಡವೆಂದರೂ ಬಿಡದ ಮುಷ್ಕರದ ಆಸೆ ಆಗುತ್ತದೆ.

ಸುರಿಯುವ ಅಮೃತದಂತೆ ರಸಯುಕ್ತವಾಗಿ, ಶ್ರೇಷ್ಠವಸ್ತುಗಳನ್ನು ಅಸಾರ ಮಾಡುವಂತೆ, ಸುಂದರ ವಿಶಾಲದೃಷ್ಟಿಯಿಂದ ಕೂಡಿ ನಿನ್ನ ವಯಸ್ಸಿಗೆ ಮೀರಿ ಹರೆಯದ ನಲ್ಲನಂತೆ ನೀನು ಆಡಿದ ಮಾತುಗಳು ಸುಂದರಿಯರ ಮನಸ್ಸಿನಲ್ಲಿ ಸುಳಿಯುತ್ತಿವೆ.

ಪುನಃಪ್ರಸನ್ನೇನ ಮುಖೇಂದುತೇಜಸಾ
ಪುರೋಽವತೀರ್ಣಸ್ಯ ಕೃಪಾಮಹಾಂಬುಧೇಃ
ತದೇವ ಲೀಲಾಮುರಲೀರವಾಮೃತಂ
ಸಮಾಧಿವಿಘ್ನಾಯ ಕದಾನು ಮೇ ಭವೇತ್

ಭಾವೇನಮುಗ್ಧಚಪಲೇನ ವಿಲೋಕಿತೇನ
ಮನ್ಮಾನಸೇ ಕಿಮಪಿ ಚಾಪಲಮುದ್ವಹನ್ತಂ
ಲೋಲೇನ ಲೋಚನ ರಸಾಯನಮೀಕ್ಷಣೇನ
ಲೀಲಾಕಿಶೋರಮುಪಗೂಹಿತುಮುತ್ಸುಕಾಃ ಸ್ಮಃ

ಅಧೀರ ಬಿಂಬಾಧರವಿಭ್ರಮೇಣ
ಹರ್ಷಾರ್ದ್ರವೇಣು ಸ್ವರ ಸಂಪದಾಚ
ಅನೇನ ಕೇನಾಪಿ ಮನೋಹರೇಣ
ಹಾಹನ್ತ ಹಾಹನ್ತ ಮನೋಧುನೋತಿ

ಯಾವನ್ನಮೇ ನಿಖಿಲಮರ್ಮದೃಢಾಭಿಘಾತ
ನಿಃಸನ್ಧಿಬಂಧನಮುದೇತಿ ನವೋಪತಾಪಃ
ತಾವದ್ವಿಭೋ ಭವತು ತಾವಕ ವಕ್ತ್ರಚಂದ್ರ
ಚಂದ್ರಾತಪದ್ವಿಗುಣಿತಾ ಮಮಚಿತ್ತಧಾರಾ

ಯಾವನ್ನಮೇನರದಶಾ ದಶಮೀದೃಶೋಽಪಿ
ರಂಧ್ರಾದುದೇತಿ ತಿಮಿರೀಕೃತ ಸರ್ವಭಾವಾ
ಲಾವಣ್ಯಕೇಲಿಸದನಂ ತವ ತಾವದೇತು
ಲಕ್ಷ್ಮ್ಯಾಸಮುತ್ಕ್ವಣಿತವೇಣುಮುಖೇಂದು ಬಿಂಬಂ

ಅತ್ಯಂತ ನಿರ್ಮಲವಾದ ಮುಖಚಂದ್ರದ ಕಳೆಯಿಂದ ಎದುರಲ್ಲಿಳಿದು ನಿಂತ ಕೃಪಾಮಹಾಂಬುಧಿಯು ಅದೇ ಆ ಮುರಲೀರವಾಮೃತ ಎಂದು ತಾನೆ ನನ್ನ ಸಮಾಧಿಯ ವಿಘ್ನಕ್ಕೆ ಕಾರಣವಾಗುವುದೋ.

ಮುದ್ದಾದ ಚಂಚಲವಾದ ಭಾವ ಮತ್ತು ದೃಷ್ಟಿಯಿಂದ ಮನಸ್ಸಿನಲ್ಲಿ ಅವರ್ಣನೀಯವಾದ ಒಂದು ಚಾಪಲ್ಯವನ್ನು ಮೂಡಿಸುವನಾದ, ಲೋಚನ ರಸಾಯನನಾದ ಲೀಲಾಕಿಶೋರನನ್ನು ಲೋಲವಾದ ದೃಷ್ಟಿಯಿಂದ ಆಲಿಂಗಿಸಲು ನಾವು ಉತ್ಸುಕರಾಗಿದೇವೆ.

ಚಂಚಲವಾದ ಬಿಂಬಾಧರದ ವಿಭ್ರಮದಿಂದ, ಹರ್ಷಾರ್ದ್ರವಾದ ವೇಣುಸ್ವರದ ಸಂಪದದಿಂದ, ಆ ಮನೋಹರವಾದ ಅದೇತರದೊ ವಸ್ತುವಿನಿಂದ, ಅಯ್ಯೋ ಅಯ್ಯೋ, ನನ್ನ ಮನಸ್ಸು ಕಂಪಿಸುತ್ತದೆ.

ಯಾವ ಹೊತ್ತು ಮರಣಯಾತನೆ ನನ್ನ ಎಲ್ಲ ಮರ್ಮದ ದೃಢಾಭಿಘಾತದಿಂದ ಸಂಧಿ ಬಂಧನಗಳನ್ನು ಸಡಿಲಮಾಡುತ್ತದೆ ಆ ಮುನ್ನ ಹೇ ವಿಭು ನಿನ್ನ ಮುಖ ಚಂದ್ರದ ಬೆಳುದಿಂಗಳಿಂದ ನನ್ನ ಚಿತ್ತಧಾರೆ ದ್ವಿಗುಣಿತವಾಗಲಿ.

ಯಾವ ಹೊತ್ತು ನನ್ನ ನರದಶೆ ಕೊನೆಮುಟ್ಟಿ ಕಣ್ಣ ರಂಧ್ರದಿಂದ ಸರ್ವ ಭಾವಗಳು ಕತ್ತಲುಗಟ್ಟಿ ಹೊರಡುತ್ತವೆ ಆ ಮುನ್ನ ಲಾವಣ್ಯಕೇಲಿಸದನವಾದ ಸುಸ್ವರವಾಗಿ ಊದುತ್ತಿರುವ ಕೊಳಲಿಂದ ಕೂಡಿದ ನಿನ್ನ ಮುಖೇಂದು ಬಿಂಬ ಸುಂದರವಾಗಿ ನನ್ನ ಎದುರಿಗೆ ಬರಲಿ.

ಆಲೋಲಲೋಚನ ವಿಲೋಕಿತ ಕೇಲಿಧಾರಾ
ನೀರಾಜಿತಾಗ್ರಸರಣೇಃ ಕರುಣಾಂಬುರಾಶೇಃ
ಆರ್ದ್ರಾಣಿ ವೇಣುನಿನದೈಃ ಪ್ರತಿನಾದಪೂರ್ಣೈಃ
ಆಕರ್ಣಯಾಮಿ ಮಣಿನೂಪುರ ಶಿಂಜಿತಾನಿ

ಹೇ ದೇವ ಹೇ ದಯಿತ ಹೇ ಜಗದೇಕಬಂಧೋ
ಹೇ ಕೃಷ್ಣ ಹೇ ಚಪಲ ಹೇ ಕರುಣೈಕಸಿಂಧೋ
ಹೇನಾಥ ಹೇರಮಣ ಹೇನಯನಾಭಿರಾಮ
ಹಾ ಹಾ ಕದಾನು ಭವಿತಾಸಿ ಪದಂ ದೃಶೋರ್ಮೇ

ಅಮೂನ್ಯಧನ್ಯಾನಿ ದಿನಾನ್ತರಾಣಿ
ಹರೇ ತ್ವದಾಲೋಕನಮನ್ತರೇಣ
ಅನಾಥ ಬುಧೋ ಕರುಣೈಕಸಿಂಧೋ
ಹಾಹನ್ತ ಹಾಹನ್ತ ಕಥಂನಯಾಮಿ

ಕಿಮಿಹ ಶೃಣುಮಃ ಕಸ್ಯ ಬ್ರೂಮಃ ಕಥಂ ಕೃತಮಾಶಯಾ
ಕಥಯತ ಕಥಂ ಧನ್ಯಾ ಮನ್ಯಾಮಹೇ ಹೃದಯೇ ಶಯಂ
ಮಧುರಮಧುರಸ್ಮೇರಾಕಾರೇ ಮನೋನಯನೋತ್ಸವೇ
ಕೃಪಣಕೃಪಣಾ ತೃಷ್ಣಾ ಕೃಷ್ಣೇ ಚಿರಂ ಬತ ಲಂಬತೇ

ಆಭ್ಯಾಂ ವಿಲೋಚನಾಭ್ಯಾಂ
ಅಂಬುಜದಲಲಲಿತಲೋಚನಂ ಬಾಲಂ
ದ್ವಾಭ್ಯಾಮಪಿ ಪರಿರಬ್ಧುಂ
ದೂರೇ ಮಮ ಹನ್ತ ದೈವಸಾಮಾಗ್ರೀ

ಆಲೋಲವಾದ ಲೋಚನಗಳ ವಿಲೋಕನದ ಕೇಲಿಧಾರೆಯಿಂದ ನೀರಾಜಿತವಾದ ಮುಂಬದಿಯುಳ್ಳ ಕರುಣಾಂಬುರಾಶಿ ಶ್ರೀಕೃಷ್ಣನ, ಪ್ರತಿನಾದಪೂರ ವೇಣುನಿನಾದದಿಂದ ರಸಯುಕ್ತವಾಗಿರುವ ಮಣಿನೂಪುರದ ಶಿಂಜಿತ ನನಗೆ ಕೇಳಿಸುತ್ತಿದೆ.

ಓ ದೇವ, ಓ ಪ್ರಿಯ, ಓ ಲೋಕದ ಏಕಮಾತ್ರಬಂಧುವೆ, ಓ ಕೃಷ್ಣ, ಓ ಚಪಲ, ಓ ಕರುಣೈಕಸಿಂಧುವೆ, ಓ ನಾಥ, ಓ ರಮಣ, ಓ ನಯನಾಭಿರಾಮ, ಹಾ ಹಾ ಅದೆಂದು ನೀನು ನನ್ನ ಕಣ್ಣುಗಳ ನೋಟದ ವಸ್ತುವಾಗುವೆ.

ಅಯ್ಯೋ ಹರಿ, ಅನಾಥಬಂಧು, ಕರುಣೈಕಸಿಂಧು, ನಿನ್ನ ದರ್ಶನದ ಮಧ್ಯದ ಈ ಅಧನ್ಯ ದಿನಗಳ ಕಾಲವನ್ನು ಅಯ್ಯೋ ನಾನು ಅದು ಹೇಗೆ ತಾನೆ ಕಳೆಯಲಿ.

ಏನನ್ನು ಕೇಳೋಣ; ಯಾರಿಗೆ ಹೇಳೋಣ; ಆಶೆ ಹೀಗೆ ಮಾಡಿತಲ್ಲಾ. ಹೃದಯಸ್ಥನಾದ ಕೃಷ್ಣನನ್ನು ಕಾಣುವುದಕ್ಕೆ ದಾರಿ ಏನು ಹೇಳಿ ಧನ್ಯರೇ. ಮನಸ್ಸು ಕಣ್ಣು ಎರಡಕ್ಕೂ ಉತ್ಸವಕಾರಿಯಾದ, ಮಧುರದಲ್ಲಿ ಮಧುರವಾದ ಸ್ಮೇರಾಕಾರದ, ಶ್ರೀಕೃಷ್ಣನನ್ನು ಕುರಿತ ಬಹುಕೃಪಣವಾದ ತೃಷೆ ಬಹು ಕಾಲದಿಂದ ಹಿಡಿದಿರುವುದಲ್ಲ !

ಅಯ್ಯೋ ಈ ಕಣ್ಣು ಎರಡಿದ್ದೂ ಕಮಲದಲದಂತೆ ಲಲಿತವಾದ ಲೋಚನದ ಬಾಲನನ್ನು ಕಾಣುವುದಕ್ಕೆ ನನಗೆ ಅದೃಷ್ಟ ಒದಗಲಿಲ್ಲ.

ಅಶ್ರಾಂತಸ್ಮಿತಮರುಣಾರುಣಾಧರೋಷ್ಠಂ
ಹರ್ಷಾರ್ದ್ರದ್ವಿಗುಣ ಮನೋಜ್ಞವೇಣುಗೀತಂ
ವಿಭ್ರಾಮ್ಯದ್ವಿಪುಲವಿಲೋಚನಾರ್ಧ ಮುಗ್ಧಂ
ವೀಕ್ಷಿಷ್ಯೇ ತವ ವದನಾಂಬುಜಂ ಕದಾನು

ಲೀಲಾಯಿತಾಭ್ಯಾಂ ರಸಶೀತಲಾಭ್ಯಾಂ
ನೀಲಾರುಣಾಭ್ಯಾಂ ನಯನಾಂಬುಜಾಭ್ಯಾಂ
ಆಲೋಕಯೇದದ್ಭುತವಿಭ್ರಮಾಭ್ಯಾಂ
ಕಾಲೇ ಕದಾ ಕಾರುಣಿಕಃ ಕಿಶೋರಃ

ಬಹುಲಚಿಕುರಭಾರಂ ಬದ್ಧಪಿಂಛಾವತಂಸಂ
ಚಪಲಚಪಲನೇತ್ರಂ ಚಾರುಬಿಂಬಾಧರೋಷ್ಠಂ
ಮಧುರಮೃದುಲಹಾಸಂ ಮಂದರೋದಾರಲೀಲಂ
ಮೃಗಯತಿ ನಯನಂ ಮೇ ಮುಗ್ಧವೇಷಂ ಮುರಾರೇಃ

ಬಹುಲಜಲದಚ್ಛಾಯಾಚೋರಂ ವಿಲಾಸಭರಾಲಸಂ
ಮದಶಿಖಿಶಿಖಾಲೀಲೋತ್ತಂಸಂ ಮನೋಜ್ಞಮುಖಾಂಬುಜಂ
ಕಮಪಿ ಕಮಲಾಪಾಂಗೋದಗ್ರಪ್ರಸನ್ನಜಗಜ್ಜಡಂ
ಮಧುರಿಮಪರೀಪಾಕೋದ್ರೇಕಂ ವಯಂ ಮೃಗಯಾಮಹೇ

ಪರಾಮೃಗ್ಯಂ ದೂರೇ ಪರಿಷದಿ ಮುನೀನಾಂ ವ್ರಜವಧೂ
ದೃಶಾಂ ದೃಶ್ಯಂ ಶಶ್ವತ್ತ್ರಿಭುವನಮನೋಹಾರಿವಪುಷಂ
ಅನಾಮೃಗ್ಯಂ ವಾಚಾಮನಿದಮುದಯಾನಾಮಪಿ ಕದಾ
ದರೀದೃಶ್ಯೇ ದೇವಂ ದರದಲಿತನೀಲೋತ್ಪಲರುಚಿಂ

ನಿರಂತರವಾದ ನಗೆಯು, ಕೆಂಪೆಂದರೆ ಕೆಂಪಾದ ಕೆಳತುಟಿಯು, ಹರ್ಷರಸದಿಂದ ಇಮ್ಮಡಿ ಸವಿಯಾದ ವೇಣುಗೀತದ, ಚಂಚಲವಾದ ಹರಹುಗಣ್ಣುಗಳ, ಮುದ್ದಾದ ನಿನ್ನ ಮೊಗದಾವರೆಯನ್ನು ಅದೆಂದು ಕಾಣುತ್ತೇನೆ.

ಕರುಣಾಳು ಬಾಲಕೃಷ್ಣನು ವಿಲಾಸಯುಕ್ತವಾದ ಮತ್ತು ರಸದಿಂದ ತಂಪು ಬೀರುವವಾದ ನೀಲಾರುಣವರ್ಣಗಳು ಬೆರೆತ ಅದ್ಭುತ ವಿಭ್ರಮದ ನಯನಾಂಬುಜಗಳಿಂದ ಅದು ಯಾವಾಗ ನನ್ನನ್ನು ನೋಡುವುದು ?

ನವಿಲಗರಿಯನ್ನು ಅವತಂಸವಾಗಿ ತೊಟ್ಟ ಭಾರವಾದ ಹಿರಿಯ ಹೆರಳ, ಚಂಚಲವೆಂದರೆ ಚಂಚಲವಾದ ನೋಟದ, ತೊಂಡೆಯ ಬಣ್ಣದ ಚೆಲುವಾದ ಕೆಳತುಟಿಯು, ಮಧುರವೂ ಮೃದುವೂ ಆದ ನಗೆಯು, ಮಂದರದಂತೆ ಗಂಭೀರವಾದ ವಿಲಾಸದ, ಶ್ರೀಕೃಷ್ಣನ ಮುದ್ದಾದ ಆಕಾರವನ್ನು ನನ್ನ ಕಣ್ಣು ಅರಸುತ್ತದೆ.

ತುಂಬುನೀರ ಮೋಡದ ವರ್ಣವನ್ನು ಕದ್ದಂತೆ ನೀಲವಾದ, ವಿಲಾಸದ ಬಾಹುಲ್ಯದಿಂದ ಅಲಸವಾದ, ಮುದಿಸಿದ ನವಿಲಿನ ಗರಿಯನ್ನು ಲೀಲೋತ್ತಂಸವಾಗಿ ತಳೆದಿರುವ, ಕಮಲವರ್ಣದ ಕಡೆಗಣ್ಣನೋಟದಿಂದ ಜಗದ ಜಡತೆಯನ್ನು ತಿಳಿಮಾಡಿರುವ, ಮಾಧುರ್ಯದ ಪರಿಪಾಕದ ಉದ್ರೇಕವಾದ ಅವರ್ಣನೀಯ ಮನೋಹರವಾದ ಆ ಮುಖಾಂಬುಜವನ್ನು ನಾವು ಅರಸುತ್ತೇವೆ.

ಮುನಿಗಳ ಪರಿಷತ್ತಿನಲ್ಲಾದರೆ ದೂರದಲ್ಲಿರುತ್ತ ಅನ್ವೇಷಣಯೋಗ್ಯವಾಗಿ, ವ್ರಜವಧುಗಳ ದೃಷ್ಟಿಗೋ ಸದಾ ಗೋಚರವಾಗಿ, ಅನಾದಿಗಳಾದ ವೇದಗಳಿಗೆ ಕೂಡ ಸಿಲುಕದ ತ್ರಿಭುವನಮನೋಹಾರಿಯಾದ ಆಕಾರದ ದರದಲಿತ ನೀಲೋತ್ಪಲದ ಕಾಂತಿಯ ದೇವನನ್ನು ಎಂದು ನಾನು ಕಣ್ಣಾರೆ ನೋಡುತ್ತೇನೆ,

ಲೀಲಾನನಾಂಬುಜಮಧೀರಮುದೀಕ್ಷಮಾಣಂ
ನರ್ಮಾಣಿ ವೇಣುವಿವರೇಷು ನಿವೇಶಯಂತಂ
ಡೋಲಾಯಮಾನನಯನಂ ನಯನಾಭಿರಾಮಂ
ವಂದೇ ಕದಾ ನು ದಯಿತಂ ವ್ಯತಿಲೋಕಯಿಷ್ಯೇ

ಲಗ್ನಂ ಮುಹುರ್ಮನಸಿ ಲಂಪಟಸಂಪ್ರದಾಯಿ
ಲೇಖಾವಲೇಖಿನಿ ರಸಜ್ಞಮನೋಜ್ಞವೇಷಂ
ಲಜ್ಜನ್ಮೃದುಸ್ಮಿತ ಮಧುಸ್ರಪಿತಾಧರಾಂಶು
ರಾಕೇನ್ದುಲಾಲಿತಮುಖೇನ್ದುಮುಕುಂದಬಾಲ್ಯಂ

ಅಹಿಮಕರ ಕರನಿಕರ ಮೃದುಮುದಿತಲಕ್ಷ್ಮೀ
ಸರಸತರ ಸರಸಿರುಹ ಸರಸದೃಶಿ ದೇವೇ
ವ್ರಜಯುವತಿ ರತಿಕಲಹ ವಿಜಯ ನಿಜಲೀಲಾ
ಮದಮುದಿತ ವದನಶಶಿ ಮಧುರಿಮಣಿ ಲೀಯೇ

ಕರಕಮಲದಲದಲಿತ ಲಲಿತತರ ವಂಶೀ
ಕಲನಿನದಗಲದಮೃತ ಘನಸರಸಿ ದೇವೇ
ಸಹಜರಸಭರಭರಿತ ದರಹಸಿತವೀಥೀ
ಸತತವಹದಧರಮಣಿ ಮಧುರಿಮಣಿ ಲೀಯೇ

ಕುಸುಮಶರಶರ ಸಮರಕುಪಿತ ಮದಗೋಪೀ
ಕುಚಕಲಶಘುಸೃಣರಸಲಸದುರಸಿ ದೇವೇ
ಮದಲುಲಿತಮೃದುಹಸಿತಮುಷಿತ ಶಶಿಶೋಭಾ
ಮುಹುರಧಿಕ ಮುಖಕಮಲ ಮಧುರಿಮಣಿ ಲೀಯೇ

ವಿಲಾಸಯುಕ್ತವಾದ ಮುಖ ಕಮಲದ, ಚಂಚಲವಾದ ದೃಷ್ಟಿಯ, ಕೊಳಲ ರಂಧ್ರಗಳಲ್ಲಿ ತನ್ನ ಗುಟ್ಟನ್ನು ಇರಿಸುವ, ಓಲಾಡುವ ಕಣ್ಣಿನ, ನಯನಾಭಿ ರಾಮನಾದ ಪ್ರಿಯನನ್ನು ಅದೆಂದು ಕಣ್ಣಿಂದ ಕಾಣುತ್ತೇನೆ, ಎಂದು ಅವ ನನ್ನು ವಂದಿಸುತ್ತೇನೆ ?

ರಸಜ್ಞರಿಗೆ ಮನೋಹರವಾಗಿರುವ ಆಕಾರದ, ಹುಸಿನಾಚಿಕೆಯ ಮೆಲು ನಗೆಯ ಜೇನಿಂದ ತೇವವಾದ ತುಟಿಯ, ಪೂರ್ಣಚಂದ್ರನು ಓಲೈಸುವ ಮುಖ ಚಂದ್ರದ, ಶ್ರೀಕೃಷ್ಣನ ಬಾಲ್ಯ ಅವನ ಮೂರ್ತಿಯನ್ನು ಬರೆದು ಕೊಂಡಿರುವ ಈ ಮನಸ್ಸಿನಲ್ಲಿ ಮತ್ತೆ ಮತ್ತೆ ಆಯಾಸವುಂಟುಮಾಡುವಂತೆ ಅಂಟಿಕೊಂಡಿದೆ.

ಸೂರ್ಯನ ಕಿರಣನಿಕರದ ಮೃದುಸ್ಪರ್ಶದಿಂದ ಹರ್ಷಗೊಂಡ ಕಾಂತಿಯ ಸರಸ ತರವಾದ ತಾವರೆಯಂತೆ ಸರಸವಾದ ಕಣ್ಣುಗಳ, ಮತ್ತು ಗೋಕುಲದ ಯುವತಿಯರ ಜೊತೆಯ ರತಿಕಲಹದಲ್ಲಿ ಗೆದ್ದ ತನ್ನ ಲೀಲೆಯ ಮದದಿಂದ ಹರ್ಷಗೊಂಡ ಮುಖಚಂದ್ರದ ಸೌಂದರ್ಯದ, ದೇವನಲ್ಲಿ ನಾನು (ನನ್ನನ್ನು) ಮರೆಯುತ್ತೇನೆ.

ಕರಕಮಲದ ದಲ (ಬೆರಳು)ಗಳಿಂದ ನುಡಿಸಿದ ಲಲಿತತರವಾದ ಕೊಳಲ ಕಲನಿನದದಿಂದ ಸರಿದ ಅಮೃತದ ಹಿರಿಯ ಸರಸ್ವಾದ, ಮತ್ತು ಸಹಜವೂ ರಸಭರಭರಿತವೂ ಆದ ದರಹಸಿತ ಪಂಕ್ತಿಯನ್ನು ಸತತವೂ ತಳೆದಿರುವ, ತುಟಿ ರನ್ನದ ಸೌಂದರ್ಯದ ದೇವನಲ್ಲಿ ನಾನು (ನನ್ನನ್ನು) ಮರೆಯುತ್ತೇನೆ.

ಕುಸುಮಶರನ ಶರದಿಂದ ನಡೆವ ಯುದ್ಧದಲ್ಲಿ ಕುಪಿತರಾದ ತಾರುಣ್ಯಮತ್ತ ಗೋಪಿಯರ ಕುಚಕಲಶದ ಅಂಗರಾಗದ ರಸದಿಂದ ಶೋಭಿಸುವ ವಕ್ಷಸ್ಸಿನ, ಮತ್ತು ಮದಲುಲಿತವಾದ ಮೃದುಹಾಸದಿಂದ ಮತ್ತೆ ಮತ್ತೆ ಶಶಿಯ ಶೋಭೆ ಯನ್ನು ಕದ್ದ ಮುಖಕಮಲದ, ಅಧಿಕವಾದ ಸೌಂದರ್ಯದ ದೇವನಲ್ಲಿ ನಾನು (ನನ್ನನ್ನು) ಮರೆಯುತ್ತೇನೆ.

ಆನಮ್ರಾಮಸಿತಭ್ರುವೋರುಪಚಿತಾಮಕ್ಷೀಣ ಪಕ್ಷ್ಮಾಂಕುರೇ
ಷ್ವಾಲೋಲಾಮನುರಾಗಿಣೋರ್ನಯನಯೋರಾರ್ದ್ರಾಂಮೃದೌಜಲ್ಪಿತೇ
ಆತಾಮ್ರಾಮಧರಾಮೃತೆ ಮದಕಲಾಮಮ್ಲಾನವಂಶೀಸ್ವನೇ
ಷ್ವಾಶಾಸ್ತೇ ಮಮಲೋಚನಂ ವ್ರಜಶಿಶೋರ್ಮೂರ್ತಿಂಜಗನ್ಮೋಹನೀಂ

ತತ್ಕೈಶೋರಂ ತಚ್ಚ ವಕ್ತ್ರಾರವಿಂದಂ
ತತ್ಕಾರುಣ್ಯಂ ತೇಚ ಲೀಲಾಕಟಾಕ್ಷಾಃ
ತತ್ಸೌಂದರ್ಯಂ ಸಾಚ ಮಂದಸ್ಮಿತ ಶ್ರೀಃ
ಸತ್ಯಂ ಸತ್ಯಂ ದುರ್ಲಭಂ ದೇವತೇಷು

ವಿಶ್ವೋಪಪ್ಲವಶಮನೈಕಬದ್ಧದೀಕ್ಷಂ
ವಿಶ್ವಾಸಸ್ತಬಕಿತ ಚೇತಸಾಂ ಜನಾನಾಂ
ಪಶ್ಯಾಮಃ ಪ್ರತಿನವಕಾನ್ತಿಕಂದಲಾರ್ದ್ರಂ
ಪಶ್ಯಾಮಃ ಪಥಿಪಥಿ ಶೈಶವಂ ಮುರಾರೇಃ

ಪಾದೌ ಪಾದವಿನಿರ್ಜಿತಾಂಬುಜವನೌ ಪದ್ಮಾಲಯಾಲಂಕೃತೌ
ಪಾಣೀ ವೇಣುವಿನೋದನಪ್ರಣಯಿನೌ ಪರ್ಯಾಪ್ತ ಶಿಲ್ಪಶ್ರಿಯೌ
ಬಾಹೂ ದೋಹದಭಾಜನಂ ಮೃಗದೃಶಾಂ ಮಾಧುರ್ಯಧಾರಾ ಗಿರೋ
ವಕ್ತ್ರಂವಾಗ್ವಿಷಯಾತಿಲಂಘಿತಮಹೋ ಬಾಲಂ ಕಿಮೇತನ್ಮಹಃ

ಬರ್ಹಂನಾಮವಿಭೂಷಣಂಬಹುಮತಂ ವೇಷಾಯ ಶೇಷೈರಲಂ
ವಕ್ತ್ರಂ ದ್ವಿತ್ರ ವಿಶೇಷಕಾನ್ತಿಲಹರೀವಿನ್ಯಾಸಧನ್ಯಾಧರಂ
ಶೀಲೈರಲ್ಪಧಿಯಾಮಗಮ್ಯವಿಭವೈಃ ಶೃಂಗಾರಭಂಗೀಮಯಂ
ವಕ್ತ್ರಂಚಿತ್ರಮಹೋವಿಚಿತ್ರಿತಮಹೋಚಿತ್ರಂವಿಚಿತ್ರಂಮಹಃ

ಕರಿದಾದ ಹುಬ್ಬಿನಲ್ಲಿ ಅಂದವಾಗಿ ಬಾಗಿ, ಕಿರಿದಲ್ಲದ ಎವೆಗಳಲ್ಲಿ ಚೆಲುವೇರಿ, ಅನುರಾಗದಿಂದ ಕೂಡಿರುವ ಕಣ್ಣುಗಳಲ್ಲಿ ಚಂಚಲವಾಗಿ, ಮೆಲುನುಡಿಯಲ್ಲಿ ರಸವನ್ನೊಸರಿ, ಅಧರಾಮೃತದಲ್ಲಿ ತುಂಬು ಕೆಂಪಾಗಿ, ದನಿಯೆತ್ತಿ ನುಡಿಯುವ ಕೊಳಲಗಾನದಲ್ಲಿ ಮೈಮರೆಸುವ, ನಂದಕುಮಾರನ ಜಗನ್ಮೋಹನ ಮೂರ್ತಿಯನ್ನು ನನ್ನ ಕಣ್ಣು ಎಳಸುತ್ತದೆ.

ಆ ಎಳೆತನದ ಭಾವ, ಅಂತೆ ಆ ಮುಖಾರವಿಂದ, ಆ ಕಾರುಣ್ಯ, ಅಂತೆ ಆ ಲೀಲಾ ಕಟಾಕ್ಷಗಳು, ಆ ಸೌಂದರ್ಯ, ಅಂತೆ ಆ ಮಂದಹಾಸ ಸಂಪತ್ತು, ಸತ್ಯವಾಗಿ ಹೇಳುತ್ತೇನೆ, ಸತ್ಯವಾಗಿ, ದೇವತೆಗಳಲ್ಲಿ ದೊರೆಯುವುದಿಲ್ಲ.

ನಂಬಿ ಜೋತುಬಿದ್ದಂಥ ಚೇತನದ ಜನರ ಸಮಸ್ತ ಉಪದ್ರವಗಳ ನಿವಾರಣೆಗೆಂದೇ ದೀಕ್ಷೆವಹಿಸಿರುವ, ಮತ್ತು ಪ್ರತಿಕ್ಷಣವೂ ಹೊಸತೆನಿಸುವ ಕಾಂತಿಯ ಕಂದಲವಾಗಿ ರಸವಂತವಾದ, ಮುರಾರಿಯ ಶೈಶವ ನನಗೆ ದಾರಿದಾರಿಯಲ್ಲೂ ಕಾಣುತ್ತದೆ.

ಪಾದಗಳು ತಮ್ಮ ಚೆಲುವಿನ ಒಂದಂಶದಿಂದ ಅಂಬುಜವನವನ್ನು ಸೋಲಿಸುವವು. ಮತ್ತು ಲಕ್ಷ್ಮಿಯಿಂದ ಅಲಂಕೃತವಾದವು ; ಕೈಗಳು ಕೊಳಲ ಬಾಜನದಲ್ಲಿ ಪ್ರೀತಿಯುಳ್ಳವು ಮತ್ತು ಆಕೃತಿಸೌಂದರ್ಯದಿಂದ ತುಂಬಿರುವವು ; ತೋಳುಗಳು ಏಣಾಕ್ಷಿಯರ ದೋಹದಕ್ಕೆ ಭಾಜನವಾದವು ; ನುಡಿಗಳು ಮಾಧುರ್ಯಧಾರೆಗಳು ; ಮುಖ ಮಾತಿನಿಂದ ವರ್ಣಿಸುವ ಮೇರೆಯನ್ನು ಮೀರಿದ್ದು ; ಅಹೋ ಈ ಎಳೆಯ ತೇಜ ಇದು ಯಾವುದಿದು ?

ಬಹು ಒಪ್ಪಿದ ತೊಡವು ಎಂದರೆ ನವಿಲಗರಿ ; ಅಲಂಕಾರಕ್ಕೆ ಬೇರೆ ಏನೂ ಬೇಡ. ಮುಖವೋ ಎರಡೊ ಮೂರೊ ಕಾಂತಿಲಹರಿಯ ಗುರುತಿಂದ ಧನ್ಯವಾದ ತುಟಿಗಳುಳ್ಳದ್ದು ; ಅಲ್ಪಬುದ್ಧಿಯ ಜನ ಅರಿಯಲಾಗದ ವಿಭವದ ಸ್ವಭಾವದ ಶೃಂಗಾರ ಭಂಗಿಯಿಂದ ಕೂಡಿರುವುದು. ವರ್ಣಿಸಲು ಸೋಜಿಗ ಅಹೋ ; ವಿಚಿತ್ರಿತ ಅಹೋ ; ತೇಜ ಇದು ಚಿತ್ರ, ವಿಚಿತ್ರ.

ಅಗ್ರೇ ಸಮಗ್ರಯತಿ ಕಾಮಪಿ ಕೇಲಿಲಕ್ಷ್ಮೀ
ಮನ್ಯಾಸು ದಿಕ್ಷ್ವಪಿ ವಿಲೋಚನಮೇವ ಸಾಕ್ಷೀ
ಹಾಹನ್ತ ಹಸ್ತಪಥದೂರಮಹೋ ಕಿಮೇತ
ದಾಸೀತ್ಕಿಶೋರಮಯಮಂಬ ಜಗತ್ತ್ರಯಂ ಮೇ

ಚಿಕುರಂ ಬಹುಲಂ ವಿರಲಂ ಭ್ರಮರಂ
ಮೃದುಲಂ ವಚನಂ ವಿಪುಲಂ ನಯನಂ
ಅಧರಂ ಮಧುರಂ ಲಲಿತಂ ವದನಂ
ಚಪಲಂ ಚರಿತಂ ಚ ಕದಾನುಭವೇ

ಪರಿಪಾಲಯ ನಃ ಕೃಪಾಲಯೇ
ತ್ಯಸಕೃತ್ ಜಲ್ಪಿತಮಾತ್ಮಬಾಂಧವಃ
ಮುರಲೀಮೃದುಲಸ್ವನಾಂತರೇ
ವಿಭುರಾಕರ್ಣಯಿತಾ ಕದಾನುನಃ

ಕದಾನು ಕಸ್ಯಾಂತು ವಿಪದ್ದಶಾಯಾಂ
ಕೈಶೋರಗಂಧಿಃ ಕರುಣಾಂಬುಧಿರ್ನಃ
ವಿಲೋಚನಾಭ್ಯಾಂ ವಿಪುಲಾಯತಾಭ್ಯಾಂ
ವ್ಯಾಲೋಕಯಿಷ್ಯನ್ ವಿಷಯೀಕರೋತಿ

ಮಧುರಮಧರಬಿಂಬೇ ಮಂಜುಲಂ ಮಂದಹಾಸೇ
ಶಿಶಿರಮಮೃತನಾದೇ ಶೀತಲಂ ದೃಷ್ಟಿಪಾತೇ
ವಿಪುಲಮರುಣನೇತ್ರೇ ವಿಶ್ರುತಂ ವೇಣುನಾದೇ
ಮರಕತಮಣಿನೀಲಂ ಬಾಲಮಾಲೋಕಯೇ ನು

ಎದುರಲ್ಲಿ ಅದೆಂಥದೊ ಅವರ್ಣನೀಯವಾದ ಲೀಲಾವಿಭೂತಿಯನ್ನು ತುಂಬು ತ್ತದೆ. ಇತರ ದೆಸೆಗಳಲ್ಲೂ ಹಾಗೆಯೆ. ಇದಕ್ಕೆ ಕಣ್ಣುಸಾಕ್ಷಿ. ಆದರೂ ಅಯ್ಯೋ ಕೈಯಿಂದ ತುಡುಕುವನೆ ನಿಲುಕದು. ಅಮ್ಮ ನನಗೆ ಜಗತ್ರಯಿ ಕಿಶೋರಮಯವಾಗಿದೆ. ಅಹೋ ಇದು ಏನಾಗಿರಬಹುದು.

ಬಹುಲವಾದ ಚಿಕುರ, ವಿರಲವಾದ ಮುಂಗುರುಳು, ಮೃದುವಾದ ವಚನ ವಿಪುಲವಾದ ನಯನ, ಮಧುರವಾವ ಆಧರ, ಲಲಿತವಾದ ವದನ, ಚಪಲ ವಾದ ಚರಿತ, ಇವನ್ನು ಎಂದು ನಾನು ಸ್ವತಃ ಕಾಣುವುದು ?

ಕೃಪಾಲಯ ನಮ್ಮನ್ನು ಪರಿಪಾಲಿಸು ಎಂದು ಅನೇಕ ಸಲ ನಾವು ಉಸುರಿ ದ್ದನ್ನು ಆತ್ಮಬಾಂಧವನಾದ ವಿಭು ತನ್ನ ಕೊಳಲ ಮೃದುಲಸ್ವರಗಳ ಮಧ್ಯ ದಲ್ಲಿ ಅದೆಂದು ಕೇಳುವನಾಗುವನು ?

ಕರುಣಾಂಬುಧಿ ಕೈಶೋರಗಂಧಿ (ಕೃಷ್ಣನು) ನನ್ನನ್ನು ವಿಪುಲವೂ ಆಯತವೂ ಆದ ಕಣ್ಣುಗಳಿಂದ ನೋಡಿ ಒಂದು ಪದಾರ್ಥವನ್ನಾಗಿ ಮಾಡುವುದು ಅದೆಂದು, ಮತ್ತೆ ಯಾವ ವಿಪದ್ದಶೆಯುಲ್ಲಿ ?

ಅಧರ ಬಿಂಬದಲ್ಲಿ ಮಧುರನಾದ, ಮಂದಹಾಸದಲ್ಲಿ ಮಂಜಲನಾದ, ಅಮೃತ ಸಮವಾದ ಮಾತಿನಲ್ಲಿಯೂ ಬೀರಿದ ನೋಟದಲ್ಲಿಯೂ ತಂಪು ಆದ, ಅರೆಗೆಂಪಾದಕಣ್ಣು ದೊಡ್ಡದಾಗಿರುವನಾದ, ಕೊಳಲಗಾನದಲ್ಲಿ ಪ್ರಸಿದ್ಧ ನಾದ, ಮರಕತಮಣಿ ನೀಲನಾದ ಬಾಲನನ್ನು ನಾನೇನು ನೋಡುತ್ತೇನೋ ?

ಮಾಧುರ್ಯಾದಪಿ ಮಧುರಂ
ಮನ್ಮಥತಾತಸ್ಯ ಕಿಮಪಿ ಕೈಶೋರಂ
ಚಾಪಲ್ಯಾದಪಿ ಚಪಲಂ ।
ಚೇತೋ ಮಮ ಹರತಿ ಕಿಂ ಕುರ್ಮಃ

ವಕ್ಷಃಸ್ಥಲೇ ಚ ವಿಪುಲಂ ನಯನೋತ್ಪಲೇ ಚ
ಮಂದಸ್ಮಿತೇ ಚ ಮೃದುಲಂ ಮದಜಲ್ಪಿತೇ ಚ
ಬಿಂಬಾಧರೇ ಚ ಮಧುರಂ ಮುರಲೀರವೇ ಚ
ಬಾಲಂ ವಿಲಾಸನಿಧಿಮಾಕಲಯೇ ಕದಾನು

ಮಾರಃ ಸ್ವಯಂನು ಮಧುರದ್ಯುತಿಮಂಡಲಂನು
ಮಾಧುರ್ಯಮೇವನು ಮನೋನಯನಾಮೃತಂ ನು
ವಾಣೀಮೃಜಾನು ಮಮ ಜೀವಿತವಲ್ಲಭೋನು
ಬಾಲೋಯಮಭ್ಯುದಯತೇ ಮಮ ಲೋಚನಾಯ

ಆದ್ರಾ೯ವಲೋಕಿತದಯಾಪರಿಣದ್ಧನೇತ್ರಂ
ಆವಿಷ್ಕೃತಸ್ಮಿತಸುಧಾಮಧುರಾಧರೋಷ್ಠಂ
ಆದ್ಯಂ ಪುಮಾಂಸಮವತಂಸಿತಬರ್ಹಿಬರ್ಹಂ
ಆಲೋಕಯಂತಿ ಕೃತಿನಃ ಕೃತಪುಣ್ಯಪುಂಜಾಃ

ಬಾಲೋಯಮಾಲೋಲವಿಲೋಚನೇನ
ವಕ್ತ್ರೇಣ ಚಿತ್ರೀಕೃತದಿಙ್ಮುಖೇನ
ವೇಷೇಣ ಘೋಷೋಚಿತ ಭೂಷಣೇನ
ಮುಗ್ಧೇನ ದುಗ್ಧೇ ನಯನೋತ್ಸವಂ ನಃ

ಮನ್ಮಥನ ತಂದೆಯ ಅವರ್ಣನೀಯ ಬಾಲ್ಯ, ಮಾಧುರ್ಯಕ್ಕಿಂತ ಮಧುರ ವಾಗಿ ಚಾಪಲ್ಯಕ್ಕಿಂತ ಚಪಲವಾಗಿ, ನನ್ನ ಚೇತನವನ್ನು ಅಪಹರಿಸುತ್ತದೆ; ಏನು ಮಾಡಲಿ ?

ವಕ್ಷಃಸ್ಥಲದಲ್ಲಿ ನಯನೋತ್ಪಲದಲ್ಲಿ ವಿಪುಲತೆಯುಳ್ಳ, ಮಂದಹಾಸದಲ್ಲಿ ಮದಜಲ್ಪಿತದಲ್ಲಿ ಮೃದುವಾದ, ಬಿಂಬಾಧರದಲ್ಲಿ ಮುರಲೀರವದಲ್ಲಿ ಮಧುರ ನಾದ, ವಿಲಾಸನಿಧಿಯಾದ ಬಾಲನನ್ನು ಆದೆಂದು ನಾನು ನೋಡುತ್ತೇನೆ ?

ಇಲ್ಲ ಸ್ವತಃ ಮನ್ಮಥ, ಇಲ್ಲ ಮಧುರ ದ್ಯುತಿಯ ಮಂಡಲ, ಇಲ್ಲ ಸ್ವತಃ ಮಾಧುರ್ಯವೇ, ಇಲ್ಲ ಮನಸ್ಸು ಕಣ್ಣುಗಳ ಅಮೃತ, ಇಲ್ಲ ನನ್ನ ಮಾತನ್ನು ಪಾವನಮಾಡುವ ತತ್ತ್ವ, ಇಲ್ಲವೇ ನನ್ನ ಜೀವನದ ಪ್ರಿಯನು, ಯಾರೊ ಈ ಬಾಲನು ನನ್ನ ಕಣ್ಣಿಗೆ ಕಂಡಿದಾನೆ.

ಆರ್ದ್ರವಾದ ನೋಟದ ದಯೆಯಿಂದ ತುಂಬಿದ ಕಣ್ಣಿನ, ಆವಿಷ್ಕೃತವಾದ ನಗೆಯ ಸುಧೆಯಿಂದ ಮಧುರವಾದ ಕೆಳತುಟಿ ಮೇಲ್ತುಟಿಯ, ನವಿಲಗರಿಯ ಅವತಂಸದ ಆದಿಪುರುಷನನ್ನು ಪೂರ್ವಕೃತಪುಣ್ಯ ಪುಂಜವಾಗಿ ಸೇರಿರುವ ಧನ್ಯಾತ್ಮರು ನೋಡುವರಾಗುತ್ತಾರೆ.

ಅಲೆಯುವ ನೋಟದ ಕಣ್ಣಿನಿಂದ, ಚಿತ್ರೀಕೃತವಾದ ದಿಜ್ಮುಖವುಳ್ಳ ವಕ್ತ್ರ ದಿಂದ, ಘೋಷಕ್ಕೆ ಉಚಿತವಾದ ಭೂಷಣದಿಂದ ಮುದ್ದಾದ ವೇಷದಿಂದ ಈ ಬಾಲನು ನಮ್ಮ ಕಣ್ಣಿಗೆ ಹಬ್ಬವನ್ನು ಮಾಡುತ್ತಾನೆ.

ಆಂದೋಲಿತಾಗ್ರಭುಜಮಾಕುಲನೇತ್ರಲೀಲಂ
ಆರ್ದ್ರಸ್ಮಿತಂ ಚ ವದನಾಂಬುಜಚಂದ್ರಬಿಂಬಂ
ಶಿಂಜಾನ ಭೂಷಣಶತಂ ಶಿಖಿಪಿಂಛಮೌಲಿ
ಶೀತಂ ವಿಲೋಕನರಸಾಯನಮಭ್ಯುಪೈತಿ

ಶಿಶುಪಾಲಬಾಲಪರಿಷರಿಷದ್ವಿಭೂಷಣಂ
ಶಿಶುರೇಷ ಶೀತಲವಿಲೋಲಲೋಚನಂ
ಮೃದುಲಸ್ಮಿತಾರ್ದ್ರವದನೇಂದು ಸಂಪದಾ
ಮದಯನ್ ಮದೀಯ ಹೃದಯಂ ವಿಗಾಹತೇ

ಕಿಮಿದಮಧರವೀಥೀ ಕ್ಲೃಪ್ತವಂಶೀನಿನಾದಂ
ಕಿರತಿ ನಯನಯೋರ್ನಃ ಕಾಮಪಿ ಪ್ರೇಮಧಾರಾಂ
ತದಿದಮಪರವೀಥೀ ದುರ್ಲಭಂ ವಲ್ಲಭಂ ನಃ
ತ್ರಿಭುವನ ಭಜನೀಯಂ ದೈವತಂ ಜೀವಿತಂ ಚ

ತದಿದಮುಪನತಂ ತಮಾಲನೀಲಂ
ತರಲ ವಿಲೋಚನ ತಾರಕಾಭಿರಾಮಂ
ಮುದಿತ ಮುದಿತ ವಕ್ತ್ರ ಚಂದ್ರಬಿಂಬಂ
ಮುಖರಿತವೇಣುವಿಲಾಸಜೀವಿತಂ ಮೇ

ಚಾಪಲ್ಯಸೀಮ ಚಪಲಾನುಭವೈಕಸೀಮ
ಚಾತುರ್ಯಸೀಮ ಚತುರಾನನಶಿಲ್ಪಸೀಮ
ಸೌರಭ್ಯಸೀಮ ಸಕಲಾದ್ಭುತಕೇಲಿಸೀಮ
ಸೌಭಾಗ್ಯಸೀಮ ತದಿದಂ ವ್ರಜಭಾಗ್ಯಸೀಮ

ಆಡುವ ತೋಳು, ಆಕುಲವಾದ ನೇತ್ರದ ವಿಲಾಸ, ರಸಯುಕ್ತವಾದ ನಗೆ, ಚಂದ್ರಬಿಂಬದಂತಿರುವ ಮುಖಕಮಲ, ಸದ್ದು ಮಾಡುವ ನೂಪುರವೆ, ನವಿಲಗರಿ ತೊಟ್ಟ ಮೌಲಿ, ಇವನ್ನುಳ್ಳ ತಂಪಾದನೇತ್ರ ರಸಾಯನ ನನ್ನೆದುರು ಸಾರಿದೆ.

ಕರುಗಳನ್ನು ಕಾಯುವ ಬಾಲರ ಸಮುದಾಯಕ್ಕೆ ವಿಭೂಷಣಪ್ರಾಯವಾದ, ತಂಪಾದ ವಿಲೋಲ ಲೋಚನದ, ಈ ಶಿಶು ಮೆಲುನಗೆಯಿಂದ ರಸಯುಕ್ತವಾದ ಮುಖಚಂದ್ರದ ಚಂದದಿಂದ ನನ್ನ ಹೃದಯಕ್ಕೆ ಹುಚ್ಚು ಹಿಡಿಸಿ ಒಳಹೊಗುತ್ತಿದೆ.

ತುಟಿಯಧಾರೆಯೆಡೆಯಲ್ಲಿ ಇರಿಸಿದ ವೇಣುವಿನಿಂದ ಹಾಡುವುದು ಇದು ಯಾವುದು ನಮ್ಮ ಕಣ್ಣುಗಳಿಗೆ ಪ್ರೇಮಧಾರೆಯನ್ನು ಚೆಲ್ಲುತ್ತಿದೆ. ? ಸ್ವರ್ಗದ ಬೀದಿಗಳಲ್ಲಿ ದುರ್ಲಭವಾದ, ನಮಗೆ ಬಹುಪ್ರಿಯವಾದ, ಮೂರುಲೋಕದ ಪೂಜೆಗೆ ತಕ್ಕದಾದ, ದೈವತ ಮತ್ತು ಜೀವಿತ ಯಾವುದು, ಅದು ಇದು.

ತಮಾಲ ನೀಲವಾದ ಚಂಚಲವಾದ ದೃಷ್ಟಿಯ ಪಾಪೆಗಳಿಂದ ಅಭಿರಾಮವಾದ, ಅತ್ಯಂತ ಸಂತೋಷವನ್ನು ಸೂಚಿಸುವ ಚಂದ್ರಬಿಂಬದಂತ ಮುಖವುಳ್ಳ, ಹಾಡುವ ಕೊಳಲ ವಿಲಾಸದ ಜೀವಭೂತವಾದ ಆ ವಸ್ತು ನನ್ನೆದುರುಸಾರಿದೆ.

ಚಾಪಲ್ಯದ ಎಲ್ಲೆ, ಚಪಲಾನುಭವದ ಒಂದೆ ಎಲ್ಲೆ, ಚಾತುರ್ಯದ ಎಲ್ಲೆ, ಸೃಷ್ಟಿಕರ್ತನ ಸೃಷ್ಟಿಕಲೆಯ ಎಲ್ಲೆ, ಸೌಭಾಗ್ಯದ ಎಲ್ಲೆ, ಅದ್ಭುತವಾದ ಎಲ್ಲ ಕೇಲಿಗಳ ಎಲ್ಲೆ. ಸೌಭಾಗ್ಯದ ಎಲ್ಲೆ ಆದ ಈ ವಸ್ತು ನಂದ ಗೋಕುಲದ ಭಾಗ್ಯದ ಎಲ್ಲೆ.

ಮಾಧುರ್ಯೇಣ ದ್ವಿಗುಣ ಶಿಶಿರಂ ವಕ್ತ್ರಚಂದ್ರಂ ವಹನ್ತೀ
ವಂಶೀವೀಥೀವಿಗಲದಮೃತ ಸ್ರೋತಸಾ ಸೇಚಯಂತೀ
ಮದ್ವಾಣೀನಾಂ ವಿಹರಣ ಪದಂ ಮಸ್ತಸೌಭಾಗ್ಯಭಾಜಾಂ
ಮತ್ಪುಣ್ಯಾನಾಂ ಪರಿಣತಿರಹೋ ನೇತ್ರಯೋಃ ಸನ್ನಿಧತ್ತೇ

ತೇಜಸೇಽಸ್ತು ನಮೋ ಧೇನುಪಾಲಿನೇ ಲೋಕಪಾಲಿನೇ
ರಾಧಾಪಯೋಧರೋತ್ಸಂಗಶಾಯಿನೇ ಶೇಷಶಾಯಿನೇ

ಧೇನುಪಾಲದಯಿತಾಸ್ತನಸ್ಥಲೀ
ಧನ್ಯಕುಂಕುಮಸನಾಥ ಕಾಂತಯೇ
ವೇಣುಗೀತಗತಿ ಮೂಲವೇಧಸೇ
ತೇಜಸೇ ತದಿದಮೋಂ ನಮೋ ನಮಃ

ಮೃದುಕ್ವಣನ್ನೂಪುರಮಂಥರೇಣ
ಬಾಲೇನ ಪಾದಾಂಬುಜಪಲ್ಲವೇನ
ಅನುಕ್ವಣ್ಣ ಮಂಜುಲವೇಣುಗೀತಂ
ಆಯಾತಿ ಮೇ ಜೀವಿತಮಾತ್ತಕೇಲಿ

ಸೋಽಯಂವಿಲಾಸಮುರಲೀನಿನದಾಮೃತೇನ
ಸಿಂಜನ್ನುದಂಚಿತಮಿದಂ ಮಮ ಕರ್ಣಯುಗ್ಮಂ
ಆಯಾತಿ ಮೇ ನಯನಬಂಧುರನನ್ಯಬಂಧು
ರಾನಂದ ಕಂದಲಿತಕೇಲಿಕಟಾಕ್ಷಲಕ್ಷಃ

ತುಂಬಿದ ಸೌಭಾಗ್ಯಕ್ಕೆ ಪಾತ್ರವಾದ ನನ್ನ ಪುಣ್ಯದ ಪರಿಪಾಕ, ಮಾಧುರ್ಯದಿಂದ ಇಮ್ಮಡಿಯಾಗಿ ತಂಪಾದ ಮುಖಚಂದ್ರವನ್ನು ಧರಿಸಿ, ಕೊಳಲ ರಂಧ್ರಗಳ ಸಾಲಿಂದ ಸುರಿಯುವ ಅಮೃತಸ್ರೋತದಿಂದ ನೆನೆಯಿಸಿ, ನನ್ನ ನುಡಿಯ ವಿಹಾರಕ್ಕೆ ವಸ್ತುವಾಗಿ ಆಹೋ ಕಣ್ಣುಗಳಿಗೆ ಪ್ರತ್ಯಕ್ಷವಾಗಿದೆ.

ಧೇನುಗಳನ್ನು ಲೋಕಗಳನ್ನು ಪಾಲಿಸುವ, ರಾಧೆಯ ಸ್ತನಗಳ ಮೇಲೆ ಶೇಷನ ಮೇಲೆ ಮಲಗುವ, ತೇಜಸ್ಸಿಗೆ ನಮಸ್ಕಾರ.

ಧೇನುಪಾಲಪ್ರೇಯಸಿಯರ ಸ್ತನಸ್ಥಲದಲ್ಲಿ ಸೇರಿ ಸಾರ್ಥಕತೆಯನ್ನುಂಡ ಕುಂಕುಮದಿಂದ ರಕ್ಷಿತವಾದ ಕಾಂತಿಯು, ಮತ್ತು ವೇಣುಗೀತದ ಗತಿಯು ಆದಿ ಬ್ರಹ್ಮವಾದ, ತೇಜಸ್ಸಿಗೆ ಇಕೊ ಈ ಪ್ರಣವಪೂರ್ವಕವಾದ ನಮಸ್ಕಾರ ಒಂದಲ್ಲ, ಎರಡು ಬಾರಿ.

ವಿಹಾರಪ್ರೇಮಿಯಾದ ನನ್ನ ಜೀವತತ್ತ್ವ ಮೆಲ್ಲುಲಿಯ ಅಂದುಗೆಯ ಭಾರದ ಪಾದಾಂಬುಜದ ಎಳೆತಳಿರಿಂದ ಮಂಜುಲವಾದ ವೇಣುಗೀತವನ್ನು ಪೋಷಿಸುತ್ತ ನಡೆದುಬರುತ್ತಿದೆ.

ರಸಯುಕ್ತವಾದ ಮುರಲೀನಿನದಾಮೃತದಿಂದ ಅದನ್ನು ಕೇಳಲು ನಿಮಿರಿರುವ ನನ್ನ ಎರಡು ಕಿವಿಯನ್ನು ತುಂಬುತ್ತ ಬರುತ್ತಿದಾನೆ ಆತ, ನನ್ನ ಕಣ್ಣುಗಳ ಬಂಧು, ಅನನ್ಯಬಂಧು. ಆನಂದಕಂದಲಿತ ವಿಲಾಸಯುಕ್ತ ಕಟಾಕ್ಷ ಲಕ್ಷನು.

ದೂರಾದ್ವಿಲೋಕಯತಿ ವಾರಣಖೇಲಗಾಮೀ
ಧಾರಾಕಟಾಕ್ಷ ಭರಿತೇನ ವಿಲೋಚನೇನ
ಆರಾದುಪೈತಿ ಹೃದಯಂಗಮ ವೇಣುನಾದ
ವೇಣೀದುಘೇನ ದಶನಾವರಣೇನ ದೇವಃ

ತ್ರಿಭುವನ ಸರಸಾಭ್ಯಾಂ ದೀಪ್ತಭೂಷಾಪರಾಭ್ಯಾಂ
ದೃಶಿದೃಶಿ ಶಿಶಿರಾಭ್ಯಾಂ ದಿವ್ಯಲೀಲಾಕುಲಾಭ್ಯಾಂ
ಅಶರಣಶರಣಾಭ್ಯಾಮದ್ಭುತಾಭ್ಯಾಂ ಪದಾಭ್ಯಾಂ
ಅಯಮಯಮನುಕೂಜದ್ವೇಣುರಾಯಾತಿ ದೇವಃ

ಸೋಽಯಂ ಮುನೀಂದ್ರ ಜನಮಾನಸತಾಪಹಾರೀ
ಸೋಽಯಂ ಮದಪ್ರಜವಧೂವಸನಾಪಹಾರೀ
ಸೋಽಯಂ ತೃತೀಯ ಭುವನೇಶ್ವರ ದರ್ಪಹಾರೀ
ಸೋಽಯಂ ಮದೀಯಹೃದಯಾಂಬುರುಹಾಪಹಾರೀ

ಸರ್ವಜ್ಞತ್ವೇಚ ಮೌಗ್ಧ್ಯೇಚ ಸಾರ್ವಭೌಮಮಿದಂ ಮಹಃ
ನಿರ್ವಿಶನ್ನಯಸಂ ಹಂತ ನಿರ್ವಾಣಪದಮಶ್ನುತೇ

ಪ್ರಷ್ಣಾನಮೇತತ್ಪುನರುಕ್ತಶೋಭಂ
ಉಷ್ಣೇತರಾಂಶೋರುದಯಂ ಮುಖೇಂದೋಃ
ತೃಷ್ಣಾಂಬುರಾಶಿಂ ತ್ರಿಗುಣೀಕರೋತಿ
ಕೃಷ್ಣಾಹ್ವಯಂ ಕಿಂಚನ ಜೀವಿತಂ ಮೇ

ಆನೆಯಂತೆ ವಿಲಾಸಯುಕ್ತವಾಗಿ ನಡೆಯುವ ದೇವನು ದೂರದಿಂದ ಧಾರಾ ಕಟಾಕ್ಷಭರಿತವಾದ ಕಣ್ಣುಗಳಿಂದ ನೋಡುತ್ತಾನೆ: ಹೃದಯಂಗಮವಾದ ವೇಣುನಾದ ಪ್ರವಾಹವನ್ನು ಕರೆಯುವ ತುಟಿಗಳಿಂದ ಕೂಡಿ, ಹತ್ತಿರ ಸಾರುತ್ತಿದ್ದಾನೆ.

ತ್ರಿಭುವನಮನೋಹರವೂ, ಹೊಳೆಯುವ ಭೂಷಣಗಳಿಗಿಂತ ಉತ್ಕೃಷ್ಟವೂ, ನೋಟನೋಟಕ್ಕೂ ತಂಪೂ ದಿವ್ಯಲೀಲೆಯಿಂದ ಆಕುಲವೂ, ಮರೆಯಿಲ್ಲದವರಿಗೆ ಮರೆಯೂ, ಆಗಿರುವ ಅದ್ಭುತ ಪಾದಗಳಿಂದ ಇದೊ ಇದೊ ಸಾರಿ ಬರುತ್ತಿದ್ದಾರೆ ಕೊಳಲನ್ನು ಊದುತ್ತ ದೇವನು.

ಇವನೆ ಮುನೀಂದ್ರ ಜನರ ಮನಸ್ಸಿನ ತಾಪವನ್ನು ನಿವಾರಿಸುವ ಅವನು; ಇವನೆ ನಂದವ್ರಜದ ತರುಣಿಯರ ವಸ್ತ್ರಗಳನ್ನು ಅಪಹರಿಸಿದ ಅವನು; ಇವನೆ ಸ್ವರ್ಗದ ರಾಜನಾವ ಇಂದ್ರನ ದರ್ಪವನ್ನು ಕಳೆದವನು; ಇವನೆ ನನ್ನ ಹೃದಯ ಕಮಲವನ್ನು ಕಳವು ಮಾಡಿರುವ ಅವನು.

ಪೂರ್ಣಜ್ಞಾನ ಮುಗ್ಧಸೌಂದರ್ಯಗಳಲ್ಲಿ ಸಾರ್ವಭೌಮವಾದ ಈ ತೇಜಸ್ಸನ್ನು ಹೊಕ್ಕು ಅಹಾ ನನ್ನ ಕಣ್ಣು ಮುಕ್ತಿಸುಖವನ್ನು ಅನುಭವಿಸುತ್ತಿದೆ.

ತನ್ನ ಮುಖಚಂದ್ರದಿಂದ ತಂಪುಕಿರಣದ ಚಂದ್ರವೆಂಬ ವಸ್ತುವಿನ ಉದಯ ವನ್ನು ಪುನರುಕ್ತ ಶೋಭವನ್ನಾಗಿ ಮಾಡಿ ಕೃಷ್ಣ ಎಂಬ ಹೆಸರಿನ ನನ್ನ ಅವರ್ಣನೀಯ ಜೀವತತ್ತ್ವ ತನ್ನನ್ನು ಕುರಿತ ನನ್ನ ಆಶೆಯ ಸಮುದ್ರವನ್ನು ಮೂರ್ಮಡಿ ಬೆಳಸುತ್ತದೆ.

ತದೇತದಾತಾಮ್ರವಿಲೋಚನ ಶ್ರೀ
ಸಂಭಾವಿತಾಶೇಷವಿನಮ್ರವರ್ಗಂ
ಮುಹುರ್ಮುರಾರೇರ್ಮಧುರಾಧರೋಷ್ಠಂ
ಮುಖಾಂಬುಜಂ ಚುಂಬತಿ ಮಾನಸಂ ಮೇ

ಕರೌ ಶರದುದಂಚಿತಾಂಬುಜ ವಿಲಾಸಶಿಕ್ಷಾಗುರೂ
ಪದೌ ವಿಬುಧಪಾದಪ ಪ್ರಥಮಪಲ್ಲವೋಂಘಿನೌ
ದೃಶೌ ದಲಿತದುರ್ಮದ ತ್ರಿಭುವನೋಪಮಾನ ಶ್ರಿಯೌ
ವಿಲೋಕಯ ವಿಲೋಕನಾಮೃತಮಹೋ ಮಹಚ್ಛೈಶವಂ

ಆಚಿನ್ವಾನಮಹನ್ಯಹನಿ ಸಾಕಾರಾನ್ವಿಹಾರಕ್ರಮಾನ್
ಆರುನ್ಧಾನಮರುಂಧತೀಹೃದಯಮಪ್ಯಾರ್ದ್ರಸ್ಮಿತಾಸ್ಯಶ್ರಿಯಾ
ಆತನ್ವಾನಮನಸ್ಯ ಜನ್ಮನಯನಶ್ಲಾಘ್ಯಾಮನರ್ಘಾಂ ದಶಾಂ
ಆಮನ್ದಂ ವ್ರಜಸುಂದರೀಸ್ತನತಟೀಸಾಮ್ರಾಜ್ಯಮುಜ್ಜೃಂಭತೇ

ಸಮುಚ್ಛ್ವಸಿತಯೌವನಂ ತರಲಶೈಶವಾಲಂಕೃತಂ
ಮದಚ್ಛುರಿತಲೋಚನಂ ಮದವಿಮುಗ್ಧ ಹಾಸಾಮೃತಂ
ಪ್ರತಿಕ್ಷಣವಿಲೋಭನಂ ಪ್ರಣಯಪೀತವಂಶೀಮುಖಂ
ಜಗತ್ತ್ರಯಮನೋಹರಂ ಜಯತಿ ಮಾಮಕಂ ಜೀವಿತಂ

ಚಿತ್ರಂ ತದೇತಚ್ಚರಣಾರವಿಂದಂ
ಚಿತ್ರಂ ತದೇತನ್ನಯನಾರವಿಂದಂ
ಚಿತ್ರಂ ತದೇತದ್ವದನಾರವಿಂದಂ
ಚಿತ್ರಂ ತದೇತತ್ಪುನರಂಬ ಚಿತ್ರಂ

ತುಂಬು ಎಳೆಗೆಂಪಿನ ನೋಟದ ಸಂಪತ್ತಿನಿಂದ ಸಮಸ್ತ ನತಜನಸಮುದಾಯವನ್ನು ಅನುಗ್ರಹಿಸಿರುವವಾದ ಮುರಾರಿಯ ಆ ಮಧುರವಾದ ಅಧರ ಓಷ್ಠ ಮುಖಕಮಲಗಳನ್ನು ನನ್ನ ಮನಸ್ಸು ಮತ್ತೆ ಮತ್ತೆ ಮುದ್ದಿಸುತ್ತದೆ.

ಕೈಗಳು ಶರತ್ಕಾಲದ ಅರಳಿದ ತಾವರೆಗೆ ವಿಲಾಸವನ್ನು ಕಲಿಸುವ ಗುರುಗಳು; ಅಡಿಗಳು ಕಲ್ಪವೃಕ್ಷದ ಮೊದಲ ತಳಿರನ್ನು ಮೀರಿಸಿರುವವು; ಕಣ್ಣುಗಳು ಮೂರು ಲೋಕದಲ್ಲಿ ಅತ್ಯಂತ ಸುಂದರವೆನ್ನಬಹುದಾದ ವಸ್ತು ತಮಗೆ ಸಮನಲ್ಲ ಎಂಬಂತಿರುವವು; ಅಹೋ ನೋಡಿರಿ ನೋಟಕ್ಕೆ ಅಮೃತವಾಗಿರುವ ಮಹಚ್ಛೈಶವವನ್ನು.

ದಿನದಿನದಿನವೂ ಸಾಕಾರದ ವಿಹಾರ ಕ್ರಮಗಳನ್ನು ಮೂಡಿಸುವುದೂ ವಿಲಾಸಯುಕ್ತವಾದ ಹಾಸದ ಮುಖದ ಕಾಂತಿಯಿಂದ ಅರುಂಧತಿಯ ಹೃದಯವನ್ನು ಕೂಡ ತನ್ನತ್ತ ಸೆಳೆಯುವುದೂ ಮನ್ಮಥನ ಕಣ್ಣಿಗೂ ಶ್ಲಾಘ್ಯವೆಂದು ಕಾಣುವ ಅನರ್ಘ್ಯವಾದ ದೆಸೆಯನ್ನು ಹರಡುವುದೂ ಆದ ವ್ರಜ ಸುಂದರಿಯರ ಸ್ತನತಟಿಯ ಸಾಮ್ರಾಜ್ಯವಸ್ತು ಸ್ಫುಟವಾಗಿ ಪ್ರಕಾಶಿಸುತ್ತದೆ.

ಕಳೆಯುತ್ತಿರುವ ಎಳೆತನದಿಂದ ಅಲಂಕೃತವಾದ ಹೊಸ ಯೌವನದ ಪ್ರೇಮದಿಂದ ವಿಕಾಸವಾದ ಕಣ್ಣುಗಳ, ಪ್ರೇಮದಿಂದ ಮುದ್ದಾದ ಹಾಸಾಮೃತದ ಕ್ಷಣಕ್ಷಣವೂ ವಿಮೋಹಕವಾದ ಪ್ರೀತಿಯಿಂದ ಪಾನಮಾಡಿದ ಕೊಳಲಮುಖದ, ನನ್ನದಾದ ಜೀವತತ್ತ್ವ ಮೂರುಲೋಕದ ಮನಸ್ಸನ್ನು ಅಪಹರಿಸುವುದಾಗಿ ಜಯಶೀಲವಾಗಿದೆ.

ಆ ಚರಣಾರವಿಂದ ಇದು ಅದ್ಭುತವಾದದ್ದು; ಆ ನಯನಾರವಿಂದವಿದು ಅದ್ಭುತ: ಈ ವದನಾರವಿಂದವದು ಅದ್ಭುತ. ನಿಜದಲ್ಲಿ ಇದೆಲ್ಲಾ ಅದ್ಭುತ: ಅಮ್ಮ, ಅದ್ಭುತದಲ್ಲಿ ಅದ್ಭುತ.

ಅಖಿಲ ಭುವನೈಕಭೂಷಣ
ಮಧಿಭೂಷಿತ ಜಲಧಿದುಹಿತೃಕುಚಕುಂಭಂ
ವ್ರಜಯುವತಿಹಾರವಲ್ಲೀ
ಮರಕತ ನಾಯಕಮಹಾಮಣಿಂ ವಂದೇ

ಮಧುರಂ ಮಧುರಂ ವಪುರಸ್ಯವಿಭೋ
ಮಧುರಂ ಮಧುರಂ ವದನಂ ಮಧುರಂ
ಮಧುಗಂಧಿ ಮೃದುಸ್ಮಿತಮೇತದಹೋ
ಮಧುರಂ ಮಧುರಂ ಮಧುರಂ ಮಧುರಂ

ಶೃಂಗಾರರಸಸರ್ವಸ್ವಂ ಶಿಖಿಪಿಂಛವಿಭೂಷಣಂ
ಅಂಗೀಕೃತನರಾಕಾರಮಾಶ್ರಯೇಭುವನಾಶ್ರಯಂ

ನಾದ್ಯಾಪಿ ಪಶ್ಯತಿ ಕದಾಚನ ದರ್ಶನೇನ
ಚಿತ್ತೇನ ವೋಪನಿಷದಾ ಸುದೃಶಾಂ ಸಹಸ್ರಂ
ಸ ತ್ವಂ ಚಿರಂ ನಯನಯೋರನಯೋಃ ಪದವ್ಯಾಂ
ಸ್ವಾಮಿನ್ ಕಯಾನುಕೃಪಯಾ ಮಮ ಸಂನಿಧತ್ಸೇ

ಕೇಯಂ ಕಾನ್ತಿಃ ಕೇಶವ ತ್ವನ್ಮುಖೇಂದೋಃ
ಕೋಽಯಂವೇಷಃ ಕಾಪಿವಾಚಾಮಭೂಮಿಃ
ಸೇಯಂ ಸೋಯಂ ಸ್ವಾದುತಾ ಮಂಜುಲಶ್ರೀಃ
ಭೂಯೋ ಭೂಯೋ ಭೂಯಸಸ್ತ್ವನ್ನಮಾಮಿ

ಅಖಿಲಭುವನದ ಏಕಮಾತ್ರ ಭೂಷಣವಾಗಿ ಲಕ್ಷ್ಮೀವಕ್ಷಃಸ್ಥಲವನ್ನು ಅಲಂಕರಿಸಿದ್ದು, ವ್ರಜಯುವತಿಯರ ಸಾಲಮಧ್ಯೆ ಹಾರದ ಮಧ್ಯದ ಮರಕತ ಮಹಾಮಣಿಯಂತೆ ನಾಯಕವಾಗಿರುವ ಶ್ರೀಕೃಷ್ಣನಿಗೆ ವಂದಿಸುತ್ತೇನೆ.

ಈ ನನ್ನ ಒಡೆಯನ ಒಡಲು ಮಧುರ, ಮಧುರ ; ಮಧುರ ಮಧುರ ಈ ವದನ ಮಧುರ ; ಅಹೋ ಮಧುಗಂಧಿ ಮಂದಹಾಸವಿದು ಮಧುರ ಮಧುರ ; ಮಧುರ ಮಧುರ, ಮಧುರ, ಮಧುರ.

ಶೃಂಗಾರರಸರ್ವಸ್ವನಾಗಿ ನವಿಲಗರಿಯನ್ನು ತೊಡವಾಗಿ ಮಾಡಿಕೊಂಡು ನರಾಕಾರವನ್ನು ಅಂಗೀಕರಿಸಿರುವ ಭುವನಾಶ್ರಯದೈವವನ್ನು ಆಶ್ರಯಿಸುತ್ತೇನೆ.

ಬಹುಸಂಖ್ಯೆಯ ವಿದ್ವನ್ಮಂಡಲ ದರ್ಶನದಿಂದಾಗಲಿ ಚಿತ್ತದಿಂದಾಗಲಿ ಉಪನಿಷತ್ತುಗಳಿಂದಾಗಲಿ ಎಂದೂ ಕಾಣದ ಇಂದಾದರೂ ಕಾಣದಿರುವ ಆ ನೀನು ಓ ಸ್ವಾಮಿ ಈ ನನ್ನ ಕಣ್ಣುಗಳ ಎದುರಲ್ಲಿ ಯಾವ ಕೃಪೆಯ ಕಾರಣದಿಂದ ಸಾನ್ನಿಧ್ಯವನ್ನು ನೀಡುತ್ತೀಯೆ ?

ಇದು ಏನು ಕಾಂತಿ, ಕೇಶವ, ನಿನ್ನ ಮುಖಚಂದ್ರನದು ? ಇದು ಯಾವ ಭೂಷಣ ? ಉಸುರಲಳವಲ್ಲದ ಯಾವುದೊ ಈ ಸ್ವಾದುತೆ ಈ ಮಂಜುಲತಾ ಸಂಪತ್ತು ? ಮರಳಿ ಮರಳಿ ಮರಳಿ ಇದಕ್ಕೆ ನಮಸ್ಕಾರ ಮಾಡುತ್ತೇನೆ.

ವದನೇಂದುವಿನಿರ್ಜಿತಶ್ಶಶೀ
ದಶಧಾ ದೇವಪದಂ ಪ್ರಪದ್ಯತೇ
ಅಧಿಕಾಂ ಶ್ರಿಯಮಶ್ನುತೇತರಾಂ
ತವ ಕಾರುಣ್ಯವಿಜೃಂಭಿತಂ ಕಿಯತ್

ತತ್ತ್ವಂಮುಖಂ ಕಥಮಿವಾಬ್ಜಸಮಾನಕಕ್ಷ್ಯಂ
ವಾಙ್ಮಾಧುರೀ ಬಹುಲಪರ್ವಕಲಾಸಮೃದ್ಧಂ
ತತ್ಕಿಂಬ್ರುವೇ ಕಿಮಪರಂ ಭುವನೈಕಕಾನ್ತಂ
ಯಸ್ಯ ತ್ವದಾನನಸಮಾ ಸುಷಮಾ ಸದಾ ಸ್ಯಾತ್

ಅಖಂಡನಿರ್ವಾಣರಸಪ್ರವಾಹ
ವಿಖಂಡಿತಾಶೇಷರಸಾಂತರಾಣಿ
ಅಯಂತ್ರಿತೋದ್ವಾಂತಸುಧಾರ್ಣವಾನಿ
ಜಯಂತಿ ಶೀತಾನಿ ತವ ಸ್ಮಿತಾನಿ

ಕಾಮಂ ಸಂತು ಸಹಸ್ರಶಃ ಕತಿಪಯೇ ಸಾರಸ್ಯಧೌರೇಯಕಾಃ
ಕಾಮಂವಾ ಕಮನೀಯತಾ ಪರಿಣತಿಸ್ವಾರಾಜ್ಯಬದ್ಧವ್ರತಾಃ
ನೈವೈತ್ತೈರ್ವಿವದಾಮಹೇ ನಚವಯಂ ದೇವ ಪ್ರಿಯಂಬ್ರೂಮಹೇ
ಯತ್ಸತ್ಯಂ ರಮಣೀಯತಾಪರಿಣತಿಸ್ತ್ವಯ್ಯೇವ ಪಾರಂಗತಾ

ಗಲದ್ವ್ರೀಲಾಲೋಲಾ ಮದನವನಿತಾ ಗೋಪವನಿತಾ
ಮಧುಸ್ಫೀತಂ ಗೀತಂ ಕಿಮಪಿಮಧುರಾ ಚಾಪಲಧುರಾ
ಸಮುಜ್ಜೃಂಭೋ ಗುಂಭೋ ಮಧುಮುಕಿರಾಂ ಮಾದೃಶಗಿರಾಂ
ತ್ವಯಿ ಸ್ಥಾನೇ ಜಾತೇ ದಧತಿ ಚಪಲಂ ಜನ್ಮ ಸಫಲಂ

ನಿನ್ನ ಮುಖಚಂದ್ರದಿಂದ ಸೋಲನ್ನು ಪಡೆದ ಚಂದ್ರನು, ದೇವ, ಹತ್ತು ಪಾಲಾಗಿ ನಿನ್ನಡಿಯನ್ನು ಸಾರಿ ಮತ್ತಷ್ಟು ಬೆಳಗುವ ಕಾಂತಿಯನ್ನು ಹೆಚ್ಚಾಗಿ ಪಡೆಯುತ್ತಾನೆ. ನಿನ್ನ ಕರುಣೆಯ ವಿಜೃಂಭಣೆ ಎನ್ನುವುದು ಅದೆಷ್ಟು ?

ವಾಙ್ಮಾಧುರ್ಯವೆಂಬ ಬಹುಲ ಪರ್ವಕಲಾ ಸಮೃದ್ಧವಾದ ಈ ನಿನ್ನ ಮುಖವು ಕಮಲಕ್ಕೆ ಸಮಾನವಸ್ತು ಹೇಗಾದೀತು ? ನಿನ್ನ ಮುಖಕ್ಕೆ ಸಮನಾದ ಶೋಭೆ ಸದಾ ಇರುವುದೆಂಬ ಭುವನೈಕಕಾಂತವಾದ ವಸ್ತು ಬೇರೆ ಒಂದನ್ನು ಯಾವುದನ್ನು ಹೇಳಲಿ ?

ಅಖಂಡವಾದ ನಿರ್ವಾಣರಸಪ್ರವಾಹದಿಂದ ಉಳಿದೆಲ್ಲ ರಸಗಳನ್ನೂ ಸೋಲಿಸಿದವೂ ತಡೆಯಿಲ್ಲದೆ ಮೇಲ್ವಾಯ್ದ ಸುಧಾರ್ಣವ ರೂಪದವೂ ಆದ ನಿನ್ನ ತಂಪಾದ ನಗೆಗಳು ಜಯಶೀಲವಾಗಿವೆ.

ಸರಸತೆಯ ಭಾರವನ್ನು ಹೊತ್ತಾತಗಳು ಹಲವು ಸಾವಿರವೇ ಇರಲಲ್ಲ ! ಕಮನೀಯತೆಯ ಪರಿಣತಿಯ ಸ್ವರ್ಗರಾಜ್ಯವನ್ನು ಕುರಿತು ವ್ರತ ವಹಿಸಿಕೊಂಡವರೂ ಅಂತೆಯೇ ಇರಲಿ, ಅಡ್ಡಿ ಇಲ್ಲ ! ನಾನು ಅವರೊಂದಿಗೆ ವಿವಾದದಲ್ಲಿ ತೊಡಗುವುದಿಲ್ಲ. ಅಥವಾ ನಿನಗೆ ಪ್ರಿಯವಾಗಲೆಂದು ಇದನ್ನು ಹೇಳುತ್ತಿಲ್ಲ. ರಮಣೀಯತೆಯ ಪರಿಣತಿ ನಿನ್ನಲ್ಲೆ ಎಲ್ಲೆಮುಟ್ಟಿದೆ ಎನ್ನುವುದು ಸತ್ಯ.

ಗೊಲ್ಲರ ಹೆಣ್ಣುಗಳು ನಾಚಿಕೆಯನ್ನು ತೊರೆದು ನಿನ್ನಲ್ಲಿ ಆಸಕ್ತರಾಗಿ ರತಿಯರಾದರು : ಜೇನಿಂದ ತುಂಬಿತು ಗೀತ ; ಚಪಲದ ಹೊರೆ ಅವರ್ಣನೀಯವಾಗಿ ಮಧುರವಾಯಿತು ; ಮಾಧುರ್ಯವನ್ನು ಚೆಲ್ಲುತ್ತ ನನ್ನಂತಹವನ ಮಾತುಗಳ ಗುಂಭ ಬಹುವಾಗಿ ಉಜ್ಜೃಂಭಿಸಿದೆ. ಇದು ನ್ಯಾಯವೆ ; ನೀನು ಸಾರಿದೆ ; ಚಪಲವಾಗಿದ್ದ ಜನ್ಮ ಸಫಲವಾದವು.

ಪ್ರೇಮದಂ ಚ ಮೇ ಕಾಮದಂ ಚ ಮೇ
ವೇದನಂ ಚ ಮೇ ವೈಭವಂ ಚ ಮೇ
ಜೀವನಂ ಚ ಮೇ ಜೀವಿತಂ ಚ ಮೇ
ದೈವತಂ ಚ ಮೇ ದೇವ ನಾಪರಂ

ಮಾಧುರ್ಯೇಣ ವಿಜೃಂಭಂತಾಂ ವಾಚೋ ನಸ್ತವ ವೈಭವೇ
ಚಾಪಲ್ಯೇನ ವಿವರ್ಧಂತಾಂ ಚಿಂತಾನಸ್ತವ ಶೈಶವೇ

ಯಾನಿ ತ್ವಚ್ಚರಿತಾಮೃತಾನಿ ರಸನಾಲೇಹ್ಯಾನಿ ಧನ್ಯಾತ್ಮನಾಂ
ಯೇ ವಾ ಶೈಶವ ಚಾಪಲವ್ಯತಿಕರಾ ರಾಧಾಪರಾಧೋನ್ಮುಖಾಃ
ಯಾ ವಾ ಭಾವಿತವೇಣುಗೀತಗತಯೋ ಲೀಲಾಮುಖಾಂಭೋರು
ಧಾರಾವಾಹಿಕಯಾ ವಹನ್ತು ಹೃದಯೇ ತಾನ್ಯೇವ ತಾನ್ಯೇವ ಮೇ

ಭಕ್ತಿಸ್ತ್ವಯಿ ಸ್ಥಿರತಯಾ ಭಗವನ್ ಯದಿಸ್ಯಾತ್
ದೈವೇನ ನಃ ಫಲಿತ ದಿವ್ಯ ಕಿಶೋರ ವೇಷೇ
ಮುಕ್ತಿಃಸ್ವಯಂ ಮುಕುಲಿತಾಂಜಲಿಸೇವತೇಽಸ್ಮಾನ್
ಧರ್ಮಾರ್ಥಕಾಮಗತಯಃ ಸಮಯಪ್ರತೀಕ್ಷಾಃ

ಜಯ ಜಯ ಜಯ ದೇವ ದೇವ ದೇವ
ಶ್ರವಣಮನೋನಯನಾಮೃತಾವತಾರ
ಜಯ ಜಯ ಜಯ ದೇವ ದೇವ ದೇವ
ತ್ರಿಭುವನ ಮಂಗಲ ದಿವ್ಯನಾಮಧೇಯ

ನನಗೆ ಪ್ರೇಮವನ್ನು ನೀಡುವ, ಕಾಮವನ್ನು ನೀಡುವ, ಕಾಮರೂಪವಾದ, ವೈಭವರೂಪವಾದ, ಜೀವನವೂ ಅದರ ಆಧಾರವೂ ಆದ ದೈವತ, ಓ ದೇವ, ಬೇರೆ ಇಲ್ಲ.

ನಿನ್ನ ವೈಭವದ (ವರ್ಣನೆಯ)ಲ್ಲಿ ನನ್ನ ಮಾತು ಮಾಧುರ್ಯದಿಂದ ವಿಜೃಂಭಿಸಲಿ; ನಿನ್ನ ಎಳೆತನದಲ್ಲಿ (ಆಸಕ್ತವಾದ) ನನ್ನ ಚಿಂತೆ ಚಾಪಲ್ಯದಿಂದ ವೃದ್ಧಿ ಹೊಂದಲಿ.

ಧನ್ಯಾತ್ಮರಾದವರ ನಾಲಗೆಗಳಿಗೆ ರುಚಿಕರಗಳಾದ ನಿನ್ನ ಚರಿತಾಮೃತಗಳು ಯಾವವು, ಬೇರೆ ಯಾವುವು ಬಾಲ್ಯದ ಚಾಪಲ್ಯದಿಂದ ಕೈಮೀರಿ ನಡೆದು ರಾಧೆಗೆ ಕೋಪವನ್ನು ತರಹೊರಟವು, ತಾವರೆಯೇ ತಾನೆಂಬಂಥ ನಿನ್ನ ಮುಖದಿಂದ ಮೂಡಿದ ವೇಣುಗೀತಗತಿಗಳು ಯಾವುವು, ಅವೇ ಚರಿತ ಅವೇ ಗತಿಗಳು ನನ್ನ ಹೃದಯದಲ್ಲಿ ಧಾರವಾಹಿಯಾಗಿ ಪ್ರವಹಿಸಲಿ.

ದೇವ, ಫಲಿತವಾದ ದಿವ್ಯ ಕಿಶೋರವೇಷದ ನಿನ್ನಲ್ಲಿ ನನ್ನ ಅದೃಷ್ಟದಿಂದ ನಿಶ್ಚಲವಾಗಿ ಭಕ್ತಿಯೇನಾದರೂ ಹುಟ್ಟಿತೋ ಮುಕ್ತಿ ಮುಗಿದ ಕೈಯಿಂದ ತಾನಾಗಿ ನನ್ನನ್ನು ಓಲಗಿಸುತ್ತದೆ, ಧರ್ಮಾರ್ಥಕಾಮಗಳ ಬರು ಹೋಗು ನನ್ನ ಹೊತ್ತನ್ನು ಕಾಯುತ್ತವೆ.

ಜಯ ನಿನಗೆ ದೇವ, ಜಯ ದೇವ ದೇವ, ಕಿವಿ ಮನ ಕಣ್ಣುಗಳಿಗೆ ಅಮೃತವಾಗಿ ರೂಪಾಂತವನೆ; ಜಯ, ದೇವ, ದೇವ ದೇವ ನಿನಗೆ ಜಯ, ಮೂರು ಲೋಕಕ್ಕೆ ಮಂಗಳವನ್ನು ನೀಡುವ ದಿವ್ಯವಾದ ಹೆಸರುಳ್ಳವನೆ.

ತುಭ್ಯಂ ನಿರ್ಭರ ಹರ್ಷ ಹರ್ಷವಿವಶಾವೇಶಸ್ಫುಟಾವಿರ್ಭವತ್
ಭೂಯಶ್ಚಾಪಲಭೂಷಿತೇಷು ಸುಕೃತಾಂ ಭಾವೇಷು ನಿರ್ಭಾಸತೇ
ಶ್ರೀಮದ್ಗೋಕುಲಮಂಡನಾಯ ಮಹತೇ ವಾಚಾಂ ವಿದೂರಾಯ
ಮಾಧುರ್ಯೈಕರಸಾರ್ಣವಾಯ ಮಹಸೇ ಕಸ್ಮೈ ಚಿದಸ್ಮೈ ನವ

ಈಶಾನದೇವಚರಣಾಭರಣೇನ ನೀವೀ
ದಾಮೋದರಸ್ಥಿರಯಶಃಸ್ತಬಕೋದ್ಗಮೇನ
ಲೀಲಾಶುಕೇನ ರಚಿತಂ ತವ ದೇವ ಕೃಷ್ಣ
ಕರ್ಣಾಮೃತಂ ವಹತು ಕಲ್ಪಶತಾಂತರೇಽಪಿ

ಧನ್ಯಾನಾಂ ಸರಸಾನುಲಾಪಸರಣೀ ಸೌಭಾಗ್ಯಮಭ್ಯಸ್ಯತಾಂ
ಕರ್ಣಾನಾಂ ವಿವರೇಷು ಕಾಮಪಿ ಸುಧಾವೃಷ್ಟಿಂ ದುಹಾನಂ ಮುಹ
ಪಶ್ಯಾನಾಂ ಸುದೃಶಾಂ ಮನೋನಯನಯೋರ್ಮಗ್ನಸ್ಯ ದೇವಸ್ಯ
ಕರ್ಣಾನಾಂ ವಚಸಾಂ ವಿಜೃಂಭಿತಮಹೋ ಕೃಷ್ಣಸ್ಯ ಕರ್ಣಾಮೃತ

ಅನುಗ್ರಹದ್ವಿಗುಣ ವಿಶಾಲಲೋಚನೈಃ
ಅನುಸ್ವನದ್ವೇಣುಗಲದ್ರಸಾಮೃತೈಃ
ಯತೋಯತಃ ಪ್ರಸರತಿ ಮೇ ವಿಲೋಚನಂ
ತತಸ್ತತಃ ಸ್ಫುರತು ತವೈವ ವೈಭವಂ

ಪ್ರಥಮ ಆಶ್ವಾಸಃ

ತುಂಬಿದ ಹರ್ಷದ ವರ್ಷದಿಂದ ವಿವಶವಾದ ಆವೇಶದಲ್ಲಿ ಸ್ಫುಟವಾಗಿ ಆವಿರ್ಭವಿಸಿ ಮತ್ತೆ ಚಾಪಲ್ಯದಿಂದ ಭೂಷಿತಗಳಾದ ಸಜ್ಜನರ ಭಾವಗಳಲ್ಲಿ ತುಂಬ ಪ್ರಕಾಶಿಸುವವನೇ, ಸಂಪದ್ಯುಕ್ತವಾದ ನಂದ ಗೋಕುಲದ ಹಿರಿಯ ಅಲಂಕಾರವೇ, ಮಾತಿಗೆ ದೂರವಾದವನೇ, ಮಾಧುರ್ಯರಸದ ಏಕಮಾತ್ರ ಅರ್ಣವವೇ, ಅವರ್ಣನೀಯ ಚಿದ್ರೂಪವಾದ ಬೆಳಕೇ, ನಿನಗೆ ನಮನ.

ಮಹಾದೇವನ ಚರಣವನ್ನು ಆಭರಣವಾಗಿ ಉಳ್ಳವನಾಗಿದ್ದು, ಮೂಲಭೂತ ವಾದ ದಾಮೋದರನ ಸ್ಥಿರ ಯಶದ ಗೊಂಚಲಕಡೆ ಉದ್ಗಮಿಸಿರುವನಾದ (ಈ) ನಿನ್ನ ಲೀಲಾಶುಕನಿಂದ ರಚಿತವಾದ ಕರ್ಣಾಮೃತ, ಓ ದೇವ, ಓ ಕೃಷ್ಣ, ಕಲ್ಪಶತ ಬೇರೆಯಾದರೂ ಪ್ರವಹಿಸುತ್ತಿರಲಿ.

ಸರಸವಾದ ಅನುಲಾಪದ ಸರಣಿಯೆಂಬ ಸೌಭಾಗ್ಯವನ್ನು ಅಭ್ಯಾಸಮಾಡುವ ಧನ್ಯವಾದ ಕಿವಿಗಳ ವಿವರದಲ್ಲಿ ಅವರ್ಣನೀಯ ಸುಧಾವೃಷ್ಟಿಯನ್ನು ಪುನಃ ಪುನಃ ಸುರಿಯುವುದಾಗಿ, ವಶಿಗಳ ಜ್ಞಾನಿಗಳ ಮನನಯನಗಳಲ್ಲಿ ಮಗ್ನ ನಾಗಿರುವ ನಮ್ಮ ದೇವ ಕೃಷ್ಣನ ಕರ್ಣಾಮೃತವಿದು, ಆಹಾ, ಕಿವಿಗಳ ನುಡಿಗಳ ವಿಜೃಂಭಣವಾಗಿದೆ.

ಯಾವ ಯಾವ ದಿಕ್ಕಿಗೆ ನನ್ನ ಕಣ್ಣ ನೋಟ ಪ್ರಸರಿಸುತ್ತದೆ ಅತ್ತತ್ತಣಿಂದ ನಿನ್ನದೆ ವೈಭವ, ನನ್ನಲ್ಲಿ ಅನುಗ್ರಹ ತೋರುವ ಸಲುವಾಗಿ ಎರಡು ಪಟ್ಟು ಅಗಲವಾಗಿರುವ ಕಣ್ಣುಗಳಿಂದಲೂ, ಅನುಸರಿಸಿ ಹಾಡುತ್ತಿರುವ ವೇಣುವಿನಿಂದ ಸುರಿದ ಗಾನಸುಧೆಯಿಂದಲೂ, ಸ್ಫುರಿಸುವುದಾಗಲಿ.

ಮೊದಲ ಆಶ್ವಾಸ

॥ ದ್ವಿತೀಯ ಆಶ್ವಾಸಃ ॥

ಅಭಿನವ ನವನೀತ ಸ್ನಿಗ್ಧಮಾಪೀತ ದುಗ್ಧಂ
ದಧಿಕಣ ಪರಿದಿಗ್ಧಂ ಮುಗ್ಧಮಂಗಂ ಮುರಾರೇಃ
ದಿಶತು ಭುವನ ಕೃಚ್ಛ್ರಚ್ಛೇದಿ ತಾಪಿಂಛಗುಚ್ಛ
ಚ್ಛವಿ ನವಶಿಖಿಪಿಂಛಾ ಲಾಂಛಿತಂ ವಾಂಛಿತಂ ನಃ

ಯಾಂದೃಷ್ಟ್ವಾ ಯಮುನಾಂ ಪಿಪಾಸುರನಿಶಂವ್ಯೂಹೋ ಗವಾಂ ಗಾ
ವಿದ್ಯುತ್ವಾನಿತಿ ನೀಲಕಂಠನಿವಹೋ ಯಾಂದ್ರಷ್ಟುಮುತ್ಕಂಠತೇ
ಉತ್ತಂಸಾಯ ತಮಾಲಪಲ್ಲವಮಿತಿಚ್ಛಿಂದಂತಿ ಯಾಂ ಗೋಪಿಕಾಃ
ಕಾನ್ತಿಃ ಕಾಲಿಯಶಾಸನಸ್ಯ ವಪುಷಃ ಸಾ ಪಾವನೀ ಪಾತುನಃ

ದೇವಃಪಾಯಾತ್ ಪಯಸಿ ವಿಮಲೇ ಯಾಮುನೇ ಮಜ್ಜತೀನಾಂ
ಯಾಚಂತೀನಾಮನುನಯಪದೈಃ ವಂಚಿತಾನ್ಯಂಶುಕಾನಿ
ಲಜ್ಜಾ ಲೋಲೈರಲಸವಿಲಸೈರುನ್ಮಿ ಷತ್ಪಂಚಬಾಣೈಃ
ಗೋಪಸ್ತ್ರೀಣಾಂ ನಯನಕುಸುಮೈರರ್ಚಿತಃ ಕೇಶವೋ ನಃ

ಮಾತರ್ನಾತಃಪರಮನುಚಿತಂ ಯತ್ಖಲಾನಾಂಪುರಸ್ತಾತ್
ಅಸ್ತಾಶಂಕಂ ಜಠರಪಿಠರೀಪೂರ್ತಯೇ ನರ್ತಿತಾಸಿ
ತತ್ ಕ್ಷಂತವ್ಯಂ ಸಹಜಸರಲೇ ವತ್ಸಲೇ ವಾಣಿ ಕುರ್ಯಾಂ
ಪ್ರಾಯಶ್ಚಿತ್ತಂ ಗುಣಗಣನಯಾ ಗೋಪವೇಷಸ್ಯವಿಷ್ಣೋಃ

॥ ಎರಡನೆಯ ಆಶ್ವಾಸ ॥

ಸ್ವಲ್ಪ ಹಳದಿಯಾದ ಹಾಲ (ಹನಿಗಳ) ನ್ನುಳ್ಳದ್ದಾಗಿ ಹೊಸ ಬೆಣ್ಣೆ ಸವರಿ ಸೊಸರಿಂದ ರೂಷಿತವಾಗಿ ಹೊಳೆಯುತ್ತಿರುವುದಾದ, ತಮಾಲದ ಗೊಂಚಲ ಹೊಗರಿನದಾಗಿ ನವಿಲಗರಿಯಿಂದ ಲಾಂಛಿತವಾದ, ಲೋಕದ ಕಷ್ಟವನ್ನು ನಿವಾ ರಿಸತಕ್ಕದಾದ, ಮುರಾರಿಯ ಮೈ ನಮ್ಮ ಇಷ್ಟಾರ್ಥವನ್ನು ಸಲ್ಲಿಸಲಿ.

ದಾಹಗೊಂಡ ದನಗಳ ಮಂದೆ ಯಾವುದನ್ನು ನೋಡಿ ಇದು ಯಮುನೆಯೆಂದು ಭ್ರಮಿಸಿ ಪ್ರವೇಶಿಸುತ್ತವೋ, ಇದು ಮೋಡವೆಂದು ಭ್ರಮಿಸಿ ನವಿಲುಗಳು ಯಾವುದನ್ನು ನೋಡಲು ಹಂಬಲಿಸುತ್ತವೋ, ಗೊಲ್ಲತಿಯರು ಯಾವುದನ್ನು ಇದು ತಮಾಲಪಲ್ಲವ ಎಂಬ ಭ್ರಮೆಯಿಂದ ಉತ್ತಂಸಕ್ಕೆ ಎಂದು ಕೀಳು ತ್ತಾರೋ, ಕಾಲಿಯಶಾಸನನ ಮೆಯ್ಯ ಆ ಪಾವನ ಕಾಂತಿ ನಮ್ಮನ್ನು ರಕ್ಷಿಸಲಿ.

ಯಮುನೆಯ ವಿಮಲ ಜಲದಲ್ಲಿ ಸ್ನಾನಕ್ಕೆ ಇಳಿದು, ಕಳವಾದ ತಮ್ಮ ವಸ್ತ್ರಗಳನ್ನು ನಯವಾದ ಮಾತುಗಳಿಂದ ಬೇಡಿ ಕೇಳುತ್ತಿರುವ ಗೋಪಸ್ತ್ರೀಯರ ಲಜ್ಜಾ ಲೋಲವೂ ಅಲಸ ವಿಲಸವೂ ಅಭಿಲಾಷೆಯನ್ನು ಪ್ರಕಟಮಾಡುವುವೂ ಆದ ಕಣ್ಣುಗಳೆಂಬ ಹೂಗಳಿಂದ ಅರ್ಚಿತನಾದ ದೇವ ಕೇಶವನು ನಮ್ಮನ್ನು ಕಾಪಾಡಲಿ.

ತಾಯಿ, ವಾಣಿ, ಜಠರ ಪಿಠರದ ಪೂರಣಕ್ಕಾಗಿ ನಾನು ಶಂಕೆಯನ್ನು ತೊರೆದು ಖಲರ ಎದುರು ನಿನ್ನನ್ನು ಕುಣಿಸಿದೆನಲ್ಲ ಇದಕ್ಕಿಂತ ಹೆಚ್ಚಿನ ಅನುಚಿತವರ್ತನೆ ಇಲ್ಲ. ಸಹಜಸರಳೇ, ವಾತ್ಸಲ್ಯವತಿ, ಈ ತಪ್ಪನ್ನು ಮನ್ನಿಸು. ಗೋಪವೇಷದ ವಿಷ್ಣುವಿನ ಗುಣವನ್ನು ಹೊಗಳಿ ಪ್ರಾಯಶ್ಚಿತ್ತ ಮಾಡುತ್ತೇನೆ.

ಅಂಗುಲ್ಯಗ್ರೈರರುಣಕಿರಣೈರ್ಮುಕ್ತ ಸಂರುದ್ಧ ರಂಧ್ರಂ
ವಾರಂವಾರಂ ವದನಮರುತಾ ವೇಣುಮಾಪೂರಯಂತಂ
ವ್ಯತ್ಯಸ್ತಾಂಘ್ರಿಂ ವಿಕಚ ಕಮಲಚ್ಛಾಯ ವಿಸ್ತಾರ ನೇತ್ರಂ
ವಂದೇ ವೃಂದಾವನ ಸುಚರಿತಂ ನಂವಗೋಪಾಲ ಸೂನುಂ

ಮಂದಂಮಂದಂ ಮಧುರನಿನದೈಃ ವೇಣುಮಾಪೂರಯಂತಂ
ವೃಂದಂ ವೃಂದಾವನ ಭುವಿ ಗವಾಂ ಚಾರಯಂತಂ ಚರಂತಂ
ಛಂದೋಭಾಗೇ ಶತಮುಖಮುಖಧ್ವಂಸಿನಾಂ ದಾನವಾನಾಂ
ಹಂತಾರಂ ತಂ ಕಥಯ ರಸನೇ ಗೋಪಕನ್ಯಾ ಭುಜಂಗಂ

ವೇಣೀಮೂಲೇ ವಿರಚಿತ ಘನಶ್ಯಾಮಪಿಂಛಾವಚೂಡೇ
ವಿದ್ಯುಲ್ಲೇಖಾವಲಯಿತ ಇವ ಸ್ನಿಗ್ಧ ಪೀತಾಂಬರೇಣ
ಮಾಮಾಲಿಂಗನ್ ಮರಕತಮಣಿಸ್ತಂಭ ಗಂಭೀರಬಾಹುಃ
ಸ್ವಪ್ನೇ ದೃಷ್ಟಸ್ತರುಣತುಲಸೀ ಭೂಷಣೋ ನೀಲಮೇಘಃ

ಕೃಷ್ಣೇ ಹೃತ್ವಾ ಸಿಚಯನಿಚಯಂ ಕೂಲ ಕುಂಜಾಧಿರೂಢೇ
ಮುಗ್ಧಾ ಕಾಚಿನ್ಮುಹುರನುನಯೈಃ ಕಿಂನ್ವಿತಿ ವ್ಯಾಹರಂತೀ
ಸಭ್ರೂಭಂಗಂ ಸದರಹಸಿತಂ ಸತ್ರಪಂ ಸಾನುರಾಗಂ
ಛಾಯಾಶೌರೇಃ ಕರತಲಗತಾನ್ಯಂಶುಕಾನ್ಯಾಚಕರ್ಷ

ಅಪಿ ಜನುಷಿ ಪರಸ್ಮಿನ್ನಾತ್ತಪುಣ್ಯೋ ಭವೇಯಂ
ತಟಭುವಿ ಯಮುನಾಯಾಃ ತಾದೃಶೋವಂಶನಾಲಃ
ಅನುಭವತಿ ಯದೇಷಶ್ರೀಮದಾಭೀರಸೂನೋಃ
ಅಧರಮಣಿ ಸಮೀಪನ್ಯಾಸ ಧನ್ಯಾಮವಸ್ಥಾಂ

ಚೆಂಬೊಗರ ಬೆರಳಕೊನೆಗಳಿಂದ ತೆರೆದ ತಡೆದ ರಂಧ್ರದ ಕೊಳಲನ್ನು ಮರಳಿ ಮರಳಿ ಬಾಯುಗಾಳಿಯಿಂದ ತುಂಬುತ್ತ ಎಡಪಾದ ಬಲಕ್ಕೆ ಬಲಪಾದ ಎಡಕ್ಕೆ ಇರುವಂತೆ ನಿಂತಿರುವ, ಅರಳಿದ ಕಮಲದ ಬಣ್ಣದ ಮತ್ತು ವಿಸ್ತಾರದ ಕಣ್ಣಿನ, ವೃಂದಾವನ ಸಂಚಾರಿಯಾದ ನಂದಗೋಪನ ಕುಮಾರನಿಗೆ ವಂದನೆ ಮಾಡುತ್ತೇನೆ.

ಮೆಲಿತು ಮೆಲಿತಾಗಿ ಮಧುರ ನಿನದಗಳಿಂದ ಕೊಳಲನ್ನು ತೀರ ತುಂಬುವಂಥ, ಗೋವಿನ ಮಂದೆಯನ್ನು ನಡೆಸುತ್ತ ವೃಂದಾವನದ ಪ್ರದೇಶದಲ್ಲಿ ಚರಿಸುವಂಥ, ಇಂದ್ರನು ಆಳುವವರನ್ನು ಧ್ವಂಸ ಮಾಡುವರಾದ ದಾನವರನ್ನು ನಾಶಮಾಡುವ ಆ ಗೋಪಕನ್ಯಾ ಭುಜಂಗನನ್ನು, ವೇದವೇ ಭಾಗ್ಯವಾದ ಓ ನಾಲಗೆ, ನೀನು ಹೆಸರೆತ್ತಿ ಹೇಳು.

ಜಡೆಯ ಮೊದಲಲ್ಲಿ ಇರಿಸಿದ ಮೇಘಶ್ಯಾಮವಾದ ನವಿಲಗರಿಯ ಶಿರೋಭೂಷಣವುಳ್ಳವನಾಗಿ, ಎಳೆತುಳಸಿಯಿಂದ ಅಲಂಕೃತನಾದ ನೀಲಮೇಘಮೂರ್ತಿ, ಹೊಳೆಯುವ ಪೀತಾಂಬರವನ್ನು ಹೊದೆದು ಮಿಂಚಿನ ಬಳ್ಳಿಯಿಂದ ವಲಯಿತನಾದಂತೆ ತೋರುತ್ತ, ಮರಕತಮಣಿಯ ಸ್ತಂಭದಂತೆ ಗಂಭೀರವಾದ ತೋಳುಗಳಿಂದ ರುಕ್ಮಿಣಿಯನ್ನು ಅಪ್ಪಿ ಕನಸಿನಲ್ಲಿ ಕಂಡನು.

ಕೃಷ್ಣನು ವಸ್ತ್ರಗಳನ್ನೆಲ್ಲ ಅಪಹರಿಸಿಕೊಂಡು ತೀರದ ಮರವನ್ನೇರಿ ಕುಳಿತಿರಲಾಗಿ ಒಬ್ಬಾಕೆ ಮುಗ್ಧೆ, ಮರಳಿಮರಳಿ ನಯದಿಂದ ಬೇಡಿ ಫಲವೇನೆಂದು ಹುಬ್ಬನ್ನು ಗಂಟಿಕ್ಕಿ (ಯೂ) ಮುಗುಳ್ನಗೆ ನಗುತ್ತ, ನಾಚಿ (ಯೂ) ಅನುರಾಗಯುಕ್ತಳಾಗಿ ನೆಳಲಕೃಷ್ಣನ ಕೈಯಲ್ಲಿದ್ದ ವಸ್ತ್ರಗಳನ್ನು (ಬಿಡಿಸಿಕೊಳ್ಳಲು) ಸೆಳೆದಳು.

ಪುಣ್ಯಸಂಚಯದ ಫಲವಾಗಿ ಮುಂದಿನ ಜನ್ಮದಲ್ಲಿ ನಾನು, ಈಗ ಶ್ರೀಗೋಪಕುಮಾರನ ತುಟಿರನ್ನದ ಬಳಿ ನ್ಯಸ್ತವಾಗಿರೋಣವೆಂಬ ಧನ್ಯವಾದ ಪದವಿಯನ್ನು ಅನುಭವಿಸುತ್ತಿರುವ, ಇದರಂಥ ಒಂದು ಬಿದಿರ ಕೊಳವೆಯಾಗಿ ಯಮುನಾ ನದಿಯ ತೀರಪ್ರದೇಶದಲ್ಲಿ ಹುಟ್ಟುಯೇನೋ ?

ಅಯಿ ಪರಿಚಿನು ಚೇತಃ ಪ್ರಾತರಂಭೋಜನೇತ್ರಂ
ಕಬರ ಕಲಿತ ಚಂಚತ್ಪಿಂಛ ದಾಮಾಭಿರಾಮಂ
ಬಲಭಿದುಪಲನೀಲಂ ವಲ್ಲವೀಭಾಗಧೇಯಂ
ನಿಖಿಲ ನಿಗಮವಲ್ಲೀ ಮೂಲಕಂದಂ ಮುಕುಂದಂ ೧

ಅಯಿ ಮುರಲಿ ಮುಕುಂದಸ್ಮೇರವಕ್ತ್ರಾರವಿಂದ
ಶ್ವಸನ ಮಧು ರಸಜ್ಞೇ ತ್ವಾಂ ಪ್ರಣಮ್ಯಾದ್ಯ ಯಾಚೇ
ಅಧರಮಣಿಸಮೀಪಂ ಪ್ರಾಪ್ತವತ್ಯಾಂ ಭವತ್ಯಾಂ
ಕಥಯ ರಹಸಿ ಕರ್ಣೇ ಮದ್ದಶಾಂ ನಂದಸೂನೋಃ ೧

ಸಜಲ ಜಲದ ನೀಲಂ ವಲ್ಲವೀ ಕೇಲಿಲೋಲಂ
ಶ್ರಿತ ಸುರತರುಮೂಲಂ ವಿದ್ಯುದುಲ್ಲಾಸಿಚೇಲಂ
ನತ ಸುರಮುನಿಜಾಲಂ ಸನ್ಮನೋಬಿಂಬಲೀಲಂ
ಸುರರಿಪುಕುಲ ಕಾಲಂ ನೌಮಿ ಗೋಪಾಲಬಾಲಂ ೧

ಅಧರಬಿಂಬ ವಿಡಂಬಿತ ವಿದ್ರುಮಂ
ಮಧುರ ವೇಣು ನಿನಾದ ವಿನೋದಿನಂ
ಕಮಲ ಕೋಮಲ ಕಮ್ರ ಮುಖಾಂಬುಜಂ
ಕಮಪಿ ಗೋಪಕುಮಾರಮುಪಾಸ್ಮಹೇ ೧

ಅಧರೇ ವಿನಿವೇಶ್ಯ ವಂಶನಾಲಂ
ವಿವರಾಣ್ಯಸ್ಯ ಸಲೀಲಮಂಗುಲೀಭಿಃ
ಮುಹುರಂತರಯನ್ ಮುಹುರ್ವಿವೃಣ್ವನ್
ಮಧುರಂ ಗಾಯತಿ ಮಾಧವೋ ವನಾಂತೇ ೧

ಮುಂಬೆಳಗ ತಾವರೆಯ ತೆರೆದ ಕಣ್ಣುಳ್ಳವನಾಗಿ ಹೆರಳಲ್ಲಿ ಸಿಕ್ಕಿರುವ ಹೊಳೆವ ನವಿಲ್ಗರಿ ತೊಡಬೆಯಿಂದ ಅಭಿರಾಮನಾದ, ಗೊಲ್ಲಹೆಣ್ಣುಗಳ ಭಾಗ್ಯಸ್ವರೂಪ ಇಂದ್ರನೀಲಮಣಿಯ ನೀಲವರ್ಣದ ಮೂರ್ತಿ, ಎಲ್ಲ ವೇದಗಳ ಬಳ್ಳಿಗೆ ತಾಯಿ ಕಂದಾದ ಮುಕುಂದನನ್ನು, ಓ ನನ್ನ ಚೇತನವೇ, ಅರಸಿ ನೋಡು.

ಓ ಕೊಳಲೆ, ಮುಕುಂದನ ನಗೆಮೊಗವೆಂಬ ಅರವಿಂದದ ಉಸಿರ ಸವಿಯ ಸುಖವನ್ನು ಬಲ್ಲ ನಿನಗೆ ನಮಿಸಿ, ಅವನ ತುಟಿ ರನ್ನದ ಸಮೀಪವನ್ನು ಸಾರಿರುವ ನಿನ್ನಲ್ಲಿ ಕೇಳಿಕೊಳ್ಳುತ್ತೇನೆ : ಆ ನಂದಸೂನುವಿನ ಕಿವಿಯಲ್ಲಿ ರಹಸ್ಯವಾಗಿ ನನ್ನ ಅವಸ್ಥೆಯನ್ನು ಅರಿಕೆಮಾಡು.

ನೀರುಳ್ಳ ಮೋಡದಂತೆ ನೀಲನು, ಗೊಲ್ಲತಿಯರೊಡನಾಟದಲ್ಲಿ ಲೋಲನು, ಆಶ್ರಿತರಿಗೆ ಕಲ್ಪತರುಮೂಲನು, ಮಿಂಚಿನಂತೆ ಹೊಳೆಯುವ ಚೇಲವುಳ್ಳವನು, ಸುರಮುನಿಜಾಲದಿಂದ ನಮಿತನಾದವನು, ಸನ್ಮನಸ್ಕರ ಅಂತರ್ಯದಲ್ಲಿ ಬಿಂಬವಾಗಿ ಲೀಲೆಮಾಡುವನು, ಸುರವಿರೋಧಿ ರಾಕ್ಷಸರ ವಂಶಕ್ಕೆ ಕಾಲಸ್ವರೂಪನು, ಆದ ಗೋಪಾಲಬಾಲನಿಗೆ ನಮಸ್ಕಾರ ಮಾಡುತ್ತೇನೆ.

ಅಧರಬಿಂಬದಿಂದ ಹವಳವನ್ನು ವಿಡಂಬಿಸುವನು, ಮಧುರವಾದ ಕೊಳಲ ಗಾನದಿಂದ ವಿನೋದ ಪಡುವವನು, ಕಮಲಕೋಮಲವೂ ಕಾಂತಿಯುತವೂ ಆದ ಅಬ್ಜಸಮಮುಖವುಳ್ಳವನು, ಆದ ಆ ಅನಿರ್ದೇಶ್ಯನಾದ ಗೋಪಾಲಕುಮಾರನನ್ನು ಉಪಾಸಿಸುತ್ತೇನೆ.

ಬಿದಿರ ಕೊಳವೆಯನ್ನು ತುಟಿಯೆಡೆ ಇರಿಸಿ, ಬೆರಲುಗಳಿಂದ ಅದರ ವಿವರಗಳನ್ನು ಸಲೀಲವಾಗಿ ಮರಳಿ ಮುಚ್ಚಿ ಮರಳಿ ತೆರೆದು, ವನಾಂತದಲ್ಲಿ ಮಾಧವನು ಮಧುರವಾಗಿ ಹಾಡುತ್ತಾನೆ.

ವದನೇ ನವನೀತ ಗಂಧವಾಹಂ
ವಚನೇ ತಸ್ಕರ ಚಾತುರೀ ಧುರೀಣಂ
ನಯನೇ ಕುಹನಾಶ್ರುಮಾಶ್ರಯೇಥಾಃ
ಚರಣೇ ಕೋಮಲ ತಾಂಡವಂ ಕುಮಾರಂ ೧೫

ಅಮುನಾಽಖಿಲ ಗೋಪಗೋಪನಾರ್ಥಂ
ಯಮುನಾರೋಧಸಿ ನಂದನಂದನೇನ
ದಮುನಾ ವನಸಂಭವಃ ಪಪೇ ನಃ
ಕಿಮುನಾಸೌ ಶರಣಾರ್ಥಿನಾಂ ಶರಣ್ಯಃ ೧೬

ಜಗದಾದರಣೀಯ ಚಾರಭಾವಂ
ಜಲಜಾಪತ್ಯ ವಚೋವಿಚಾರ ಗಮ್ಯಂ
ತನುತಾಂ ತನುತಾಂ ಶಿವೇತರಾಣಾಂ
ಸುರನಾಥೋಪಲ ಸುಂದರಂ ಮಹೋ ನಃ ೧೭

ಸಾ ಕಾಪಿ ಸರ್ವ ಜಗತಾಮಭಿರಾಮಸೀಮಾ
ಕಾಮಾಯ ನೋ ಭವತು ಗೋಪ ಕಿಶೋರ ಮೂರ್ತಿಃ
ಯಾ ಶೇಖರೇ ಶ್ರುತಿಗಿರಾಂ ಹೃದಿ ಯೋಗಭಾಜಾಂ
ಪಾದಾಂಬುಜೇಚ ಸುಲಭಾ ವ್ರಜಸುಂದರೀಣಾಂ ೧೮

ಅತ್ಯಂತ ಬಾಲಮತಸೀ ಕುಸುಮ ಪ್ರಕಾಶಂ
ದಿಗ್ವಾಸಸಂ ಕನಕಭೂಷಣ ಭೂಷಿತಾಂಗಂ
ವಿಸ್ರಸ್ತ ಕೇಶಮರುಣಾಧರಮಾಯತಾಕ್ಷಂ
ಕೃಷ್ಣಂ ನಮಾಮಿ ಶಿರಸಾ ವಸುದೇವಸೂನುಂ ೧೯

ಬಾಯಲ್ಲಿ ಬೆಣ್ಣೆಯ ಕಂಪನ್ನು ಧರಿಸಿರುವ, ಮಾತಿನಲ್ಲಿ ಕಳ್ಳನ ಚತುರತೆಯಲ್ಲಿ ಧುರೀಣನಾದ, ಮೋಸದ ಅಶ್ರುವನ್ನುಳ್ಳ ಕಣ್ಣಿನ, ಕಾಲಲ್ಲಿ ಮನೋಹರವಾಗಿ ನೃತ್ಯಮಾಡುವ ಕುಮಾರನನ್ನು ಆಶ್ರಯಿಸು.

ಈ ನಂದನಂದನನು ಗೋಪಾಲರನ್ನು ರಕ್ಷಿಸುವ ಸಲುವಾಗಿ ಯಮುನಾ ತೀರದಲ್ಲಿ ಕಾಡುಕಿಚ್ಚನ್ನು ಹೀರಿದನಲ್ಲ. ಶರಣಾರ್ಥಿಗಳಾದ ನಮಗೆ ಕೂಡ ಇವನೇ ದಿಕ್ಕಾಗನೆ ?

ಲೋಕಮೆಚ್ಚುವ ಜಾರಭಾವದ, ಕಮಲಸಂಭವನ ನುಡಿಯ ಗುರಿಯಾದ ಇಂದ್ರನೀಲಮಣಿಯಂತೆ ಸುಂದರವಾದ, ತೇಜಸ್ಸು ನಮ್ಮ ಅಶಿವದ ಕಾರ್ಶ್ಯವನ್ನು ಅನುಗ್ರಹಿಸಲಿ.

ಶ್ರುತಿವಚನಗಳ ಶಿರಸ್ಸಿನಲ್ಲಿ, ಯೋಗಸಿದ್ಧರ ಮನಸ್ಸಿನಲ್ಲಿ, ಗೊಲ್ಲ ಚೆಲುವೆಯರ ಪಾದಾಂಬುಜಗಳಲ್ಲಿ, ಕಷ್ಟವಿಲ್ಲದೆ ದೊರೆಯುವುದಾದ ಸಕಲ ಲೋಕಗಳ ಅಭಿರಾಮ ಸೀಮೆಯಾದ ಆ ಅವರ್ಣನೀಯವಾದ ಗೋಪಾಲಬಾಲ ಮೂರ್ತಿ ನಮ್ಮ ಇಷ್ಟವನ್ನು ಅನುಗ್ರಹಿಸುವುದಾಗಲಿ.

ಅಗಸೆಯ ಹೂವಿನಂತೆ ಹೊಳೆಯುವ, ಚಿನ್ನದ ತೊಡವಿನಿಂದ ಭೂಷಿತವಾದ ಒಡಲ, ಬಿಚ್ಚಿದ ಕೂದಲ, ಕೆಂದುಟಿಯ, ಹರಹ ಕಣ್ಣಿನ, ವಸುದೇವಸೂನು ಎಳೆ ಹಸುಳೆ ಕೃಷ್ಣನ ದಿಗಂಬರಮೂರ್ತಿಗೆ ತಲೆಬಾಗಿ ನಮಸ್ಕಾರ ಮಾಡುತ್ತೇನೆ.

ಹಸ್ತಾಂಘ್ರಿ ನಿಕ್ವಣಿತ ಕಂಕಣ ಕಿಂಕಿಣೀಕಂ
ಮಧ್ಯೇ ನಿತಂಬಮವಲಂಬಿತ ಹೇಮಸೂತ್ರಂ
ಮುಕ್ತಾ ಕಲಾಪ ಮುಕುಲೀಕೃತ ಕಾಕಪಕ್ಷಂ
ವಂದಾಮಹೇ ವ್ರಜಹರಂ ವಸುದೇವಭಾಗ್ಯಂ ೨೦

ಬೃಂದಾವನ ದ್ರುಮತಲೇಷು ಗವಾಂಗಣೇಷು
ವೇದಾವಸಾನಸಮಯೇಷು ಚ ದೃಶ್ಯತೇ ಯತ್
ತದ್ವೇಣುವಾದನಪರಂ ಶಿಖಿಪಿಂಛಚೂಡಂ
ಬ್ರಹ್ಮ ಸ್ಮರಾಮಿ ಕಮಲೇಕ್ಷಣಮಭ್ರನೀಲಂ ೨೦

ವ್ಯತ್ಯಸ್ತಪಾದಮವತಂಸಿತ ಬರ್ಹಿ ಬರ್ಹಂ
ಸಾಚೀಕೃತಾನನ ನಿವೇಶಿತ ವೇಣುರಂಧ್ರಂ
ತೇಜಃಪರಂ ಪರಮ ಕಾರುಣಿಕಂ ಪುರಸ್ತಾತ್
ಪ್ರಾಣಪ್ರಯಾಣಸಮಯೇ ಮಮ ಸನ್ನಿಧತ್ತಾಂ ೨೨

ಘೋಷಪ್ರಘೋಷ ಶಮನಾಯ ಮಥೋಗುಣೇನ
ಮಧ್ಯೇ ಬಬಂಧ ಜನನೀ ನವನೀತ ಚೋರಂ
ತದ್ಬಂಧನಂ ತ್ರಿಜಗತಾಮುದರಾಶ್ರಯಾಣಾಂ
ಆಕ್ರೋಶಕಾರಣಮಹೋ ನಿತರಾಂ ಬಭೂವ ೨೩

ಶೈವಾ ವಯಂ ನ ಖಲು ತತ್ರ ವಿಚಾರಣೀಯಂ
ಪಂಚಾಕ್ಷರೀ ಜಪಪರಾ ನಿತರಾಂ ತಥಾಪಿ
ಚೇತೋ ಮದೀಯಮತಸೀ ಕುಸುಮಾವಭಾಸಂ
ಸ್ಮೇರಾನನಂ ಸ್ಮರತಿ ಗೋಪವಧೂ ಕಿಶೋರಂ ೨೪

ಕೈಯಲ್ಲಿ ಕಾಲಲ್ಲಿ ಘಲಿರೆನ್ನುವ ಕಂಕಣ ಕಿಂಕಿಣಿ, ಮಧ್ಯೆ ನಿತಂಬವನ್ನವಲಂಬಿಸಿದ ಹೇಮಸೂತ್ರ, ಮುತ್ತಿನ ಹಾರದಿಂದ ಕಟ್ಟಿರುವ ಕಾಕಪಕ್ಷ, ಇವುಗಳನ್ನುಳ್ಳ ವಸುದೇವಭಾಗ್ಯರೂಪಿ ವ್ರಜವಿಹಾರಿಯನ್ನು ವಂದಿಸುತ್ತೇನೆ.

ಬೃಂದಾವನದ ಮರಗಳ ಅಡಿಗಳಲ್ಲಿ, ದನಗಳ ಮಂದೆಗಳಲ್ಲಿ, ವೇದಾಂತ ಸಿದ್ಧಾಂತಗಳಲ್ಲಿ, ಕಾಣುವುದಾದ, ಆ ವೇಣುವಾದನದಲ್ಲಿ ಆಸಕ್ತವಾದ ಮತ್ತು ನವಿಲಗರಿಯ ತಲೆದೊಡವನ್ನುಳ್ಳ, ಕಮಲನಯನದ ಅಭ್ರನೀಲವಾದ ಬ್ರಹ್ಮವನ್ನು ಸ್ಮರಿಸುತ್ತೇನೆ.

ಎಡಪಾದ ಬಲವಾಗಿ ಬಲಪಾದ ಎಡವಾಗಿ ಇರುವಂತೆ ನಿಂತು ನವಿಲುಗರಿಯನ್ನು ತಲೆದೊಡವಾಗಿ ಧರಿಸಿ, ಪಕ್ಕಕ್ಕೆ ತಿರುಹಿದ ಬಾಯಿಗೆ ಕೊಳಲರಂಧ್ರವನ್ನಿರಿಸಿದ, ಪರಮ ಕಾರುಣಿಕವಾದ ಉತ್ಕೃಷ್ಟ ತೇಜಸ್ಸು ನನಗೆ ಪ್ರಾಣ ಪ್ರಯಾಣ ಸಮಯದಲ್ಲಿ ಎದುರಲ್ಲಿ ಸನ್ನಿಹಿತವಾಗಲಿ.

ಗೋಕುಲದ ಕೂಗಾಟವನ್ನು ಸಮಾಧಾನಪಡಿಸಲೋಸುಗ, ಬೆಣ್ಣೆಯ ಕಳ್ಳನನ್ನು ತಾಯಿ ಸೊಂಟಕ್ಕೆ ಕಡೆಗೋಲಕಣ್ಣಿಯನ್ನು ಹಾಕಿ ಕಟ್ಟಿದಳು. ಆ ಕಟ್ಟು, ಏನೆನ್ನುವುದು, ಮೂರು ಲೋಕದ ಒಳಗೆ ಇರುವ ಜೀವಿಗಳ ಕೂಗಿಗೆ ಚೆನ್ನಾದ ಕಾರಣವಾಯಿತು.

ನಾವು ಶೈವರು : ಆ ವಿಷಯದಲ್ಲಿ ಸಂದೇಹ ಬೇಡ ಬಿಡಿ. ಪಂಚಾಕ್ಷರೀ ಜಪದಲ್ಲಿ ತೀರ ನಿಷ್ಠರಾದವರು. ಹೀಗಿದ್ದೂ ನನ್ನ ತೇಜಸ್ಸು ಅತಸೀ ಕುಸುಮದ ವರ್ಣದ ನಗೆಮೊಗದ ಗೋಪಿಕುಮಾರನನ್ನು ನೆನೆಯುತ್ತದೆ.

ಶ್ರೀಕೃಷ್ಣಕರ್ಣಾಮೃತಂ

ರಾಧಾ ಪ್ರನಾತಂ ಜಗದಚ್ಯುತದತ್ತ ಚಿತ್ತಾ
ಮಂಥಾನಮಾಕಲಯತೀ ದಧಿರಿಕ್ತ ಪಾತ್ರೇ
ತಸ್ಯಾಃಸ್ತನಸ್ತಬಕ ಚಂಚಲಲೋಲದೃಷ್ಟಿಃ
ದೇವೋಽಪಿ ದೋಹನಧಿಯಾ ವೃಷಭಂನಿರುಂದ್ಧೇ

ಗೋಧೂಲಿ ಧೂಸರಿತ ಕೋಮಲಕುಂತಲಾಗ್ರಂ
ಗೋವರ್ಧನೋದ್ಧರಣ ಕೇಲಿಕೃತ ಪ್ರಯಾಸಂ
ಗೋಪಿಜನಸ್ಯ ಕುಚಕುಂಕುಮ ಮುದ್ರಿತಾಂಗಂ
ಗೋವಿಂದಮಿಂದುವದನಂ ಶರಣಂ ವ್ರಜಾಮಃ

ಯದ್ರೋಮರಂಧ್ರ ಪರಿಪೂರ್ತಿ ವಿಧಾವದಕ್ಷಾ
ವಾರಾಹ ಜನ್ಮನಿ ಬಭೂವುರಮೀ ಸಮುದ್ರಾಃ
ತಂ ನಾಮ ನಾಥಮರವಿಂದದೃಶಂ ಯಶೋದಾ
ಪಾಣಿದ್ವಯಾಂತರಜಲೇ ಸ್ನಪಯಾಂ ಬಭೂವ

ಪರಮಿಮಮುಪದೇಶಮಾದ್ರಿಯಧ್ವಂ
ನಿಗಮ ವನೇಷು ನಿತಾಂತ ಚಾರ ಖಿನ್ನಾಃ
ವಿಚಿನುತ ಭವನೇಷು ವಲ್ಲವೀನಾಂ
ಉಪನಿಷದರ್ಥಮುಲೂಖಲೇ ನಿಬದ್ಧಂ

ದೇವಕೀತನಯ ಪೂಜನಪೂತಃ
ಪೂತನಾರಿಚರಣೋದಕ ಧೌತಃ
ಯದ್ಯಹಂ ಸ್ಮೃತಧನಂಜಯಸೂತಃ
ಕಿಂ ಕರಿಷ್ಯತಿ ಸ ಮೇ ಯಮದೂತಃ

ಕೃಷ್ಣನಿಗೆ ಮನಸ್ಸು ಕೊಟ್ಟವಳಾಗಿ ಮೊಸರಿಲ್ಲದ ಬರಿ ಪಾತ್ರೆಯಲ್ಲಿ ಕಡೆ ಗೋಲನ್ನು ಆಡಿಸಿದ ರಾಧೆ ಜಗತ್ತನ್ನು ಪಾವನ ಮಾಡಲಿ ; ಅವಳ ಎದೆ ಗೊಂಚಲತ್ತ ಆಸಕ್ತಿಯಿಂದ ಪುನಃ ಪುನಃ ನೋಟವೆಸೆಯುತ್ತ, ಹಾಲು ಕರೆಯಲು ಎತ್ತನ್ನು ಗೊತ್ತಿಗೆ ಕಟ್ಟಿದ ದೇವನೂ ಹಾಗೆಯೇ.

ಗೋಧೂಲಿಯಿಂದ ಧೂಸರಿತವಾದ ಕುರುಳ ಕೊನೆಯುಳ್ಳವನು, ಗೋವರ್ಧನ ವನ್ನು ಎತ್ತುವ ಆಟದಿಂದ ಉಂಟಾದ ಪ್ರಯಾಸದಿಂದ ಕೂಡಿದವನು, ಗೋಪೀ ಜನರ ಎದೆಯ ಕುಂಕುಮದಿಂದ ಗುರುತು ಪಡೆದಿರುವ ಮೈಯವನು, ಆದ ಇಂದುವದನ ಗೋವಿಂದನನ್ನು ಶರಣು ಹೊಗುತ್ತೇವೆ.

ವರಾಹಾವತಾರದಲ್ಲಿ ಯಾರ ರೋಮ ರಂಧ್ರವನ್ನು ತುಂಬಲು ಈ ಸಮುದ್ರಗಳು ಸಾಮರ್ಥ್ಯ ಸಾಲದೆ ಇದ್ದವು ಆ ನಮ್ಮ ನಾಥ ಅರವಿಂದಲೋಚನನಾದ ಕೃಷ್ಣನನ್ನು ಯಶೋದೆ ಎರಡು ಕೈಗಳಲ್ಲಿ ಹಿಡಿದಷ್ಟು ನೀರಿನಿಂದ ಸ್ನಾನ ಮಾಡಿಸುವಳಾದಳು.

ವೇದದ ಕಾಡುಗಳಲ್ಲಿ ಬಹು ಸುತ್ತಿ ಸೋತಿರುವವರೇ, ಈ ಅತ್ಯುತ್ತಮ ಉಪ ದೇಶವನ್ನು ಆದರಿಸಿರಿ. ಉಪನಿಷತ್ತುಗಳ ಉದ್ದಿಷ್ಟವಸ್ತುವನ್ನು ಗೊಲ್ಲತಿಯರ ಮನೆಗಳಲ್ಲಿ ಒರಳಿಗೆ ಕಟ್ಟಿಹಾಕಿದೆ ; ಅದನ್ನು ಅಲ್ಲಿ ಅರಸುವರಾಗಿ.

ನಾನು ದೇವಕೀತನಯನ ಪೂಜನದಿಂದ ಪೂತನೂ ಪೂತನೆಯ ಹಗೆಯ ಚರಣೋದಕದಿಂದ ಶುದ್ಧನೂ ಧನಂಜಯನ ಸಾರಥಿಯನ್ನು ನೆನೆದವನೂ ಅಹುದಾದರೆ ಆ ಯಮದೂತನು ನನ್ನನ್ನು ಏನು ಮಾಡುವನು ?

ಭಾಸತಾಂ ಭವಭಯೈಕ ಭೇಷಜಂ
ಮಾನಸೇ ಮಮ ಮುಹುರ್ಮುಹುರ್ಮುಹುಃ
ಗೋಪವೇಷಮುಪಸೇದುಷಃ ಸ್ವಯಂ
ಯಾಪಿ ಕಾಪಿ ರಮಣೀಯತಾ ವಿಭೋಃ ೩೦

ಕರ್ಣಲಂಬಿತ ಕದಂಬಮಂಜರೀ
ಕೇಸರಾರುಣ ಕಪೋಲಮಂಡಲಂ
ನಿರ್ಮಲಂ ನಿಗಮವಾಗಗೋಚರಂ
ನೀಲಿಮಾನಮವಲೋಕಯಾಮಹೇ ೩೧

ಸಾಚಿ ಸಂಚಲಿತ ಲೋಚನೋತ್ಪಲಂ
ಸಾಮಿ ಕುಟ್ಮಲಿತ ಕೋಮಲಾಧರಂ
ವೇಗ ವಲ್ಗಿತ ಕರಾಂಗುಲೀಮುಖಂ
ವೇಣುನಾದ ರಸಿಕಂ ಭಜಾಮಹೇ ೩೨

ಸ್ಯಂದನೇ ಗರುಡಮಂಡಿತ ಧ್ವಜೇ
ಕುಂಡಿನೇಶ ತನಯಾಧಿರೋಪಿತಾ
ಕೇನಚಿನ್ನವ ತಮಾಲ ಪಲ್ಲವ
ಶ್ಯಾಮಲೇನ ಪುರುಷೇಣ ನೀಯತೇ ೩೩

ಮಾ ಯಾತ ಪಾಂಥಾಃ ಪಥಿ ಭೀಮರಥ್ಯಾಃ
ದಿಗಂಬರಃ ಕೋಽಪಿ ತಮಾಲ ನೀಲಃ
ವಿನ್ಯಸ್ತ ಹಸ್ತೋಽಪಿ ನಿತಂಬ ಬಿಂಬೇ
ಧೂರ್ತಃ ಸಮಾಕರ್ಷತಿ ಚಿತ್ತವಿತ್ತಂ ೩೪

ತಾನಾಗಿ ಗೋಪಾಲವೇಷವನ್ನು ಧರಿಸಿದ ಒಡೆಯನ ಯಾವುದೋ ಆ ಅವರ್ಣ ನೀಯ ರಮಣೀಯತೆ, ಭವಭಯಕ್ಕೆ ಏಕಮಾತ್ರ ಔಷಧವಾದದ್ದು, ನನ್ನ ಮನಸ್ಸಿನಲ್ಲಿ ಮರಮರಳಿ ಮರಳಿ ಪ್ರಕಾಶಿಸಲಿ.

ಕಿವಿಯಿಂದ ಜೋಲುವ ಕದಂಬಮಂಜರಿಯ ಕೇಸರದಿಂದ ಅರುಣವಾಗಿರುವ ಕಪೋಲಮಂಡಲವುಳ್ಳದಾದ, ವೇದಗಳ ಶಬ್ದಗಳಿಗೆ ಅಗೋಚರವಾದ, ನಿರ್ಮಲ ನೀಲಮೂರ್ತಿಯನ್ನು ನೋಡುತ್ತೇನೆ.

ಓರೆಯಾಗಿ ಆಡಿಸಿದ ಉತ್ಪಲದಂಥ ಕಣ್ಣಿನ, ಅರೆಮುಗುಳಾದ ಕೋಮಲವಾದ ತುಟಿಯ, ಬೇಗನೆ ಎತ್ತಿ ಇರಿಸುವ ಕೈ ಬೆರಳಕೊನೆಯ, ವೇಣುನಾದ ರಸಿಕ ನನ್ನು ಭಜಿಸುತ್ತೇನೆ.

ಗರುಡನಿಂದ ಅಲಂಕೃತವಾದ ಧ್ವಜದ ತೇರಿನಲ್ಲಿ ಏರಿಸಿ ಕುಂಡಿನಪುರದ ಅರಸನ ಮಗಳನ್ನು ಯಾರೋ ಒಬ್ಬ ತಮಾಲಪಲ್ಲವಶ್ಯಾಮಲನಾದ ಪುರುಷನು ಕರೆದು ಕೊಂಡು ಹೋಗುತ್ತಿದಾನೆ.

ಓ ಪಾಂಥರೇ, ಭೀಮರಥಿಯ ದಾರಿಯಲ್ಲಿ ನಡೆಯಬೇಡಿರಿ. ಯಾರೋ ಒಬ್ಬ ತಮಾಲನೀಲನಾದ ದಿಗಂಬರ ಧೂರ್ತನು ತನ್ನ ನಿತಂಬದ ಮೇಲೆ ಕೈಗಳನ್ನಿರಿಸಿ ಕೊಂಡು ನಿಂತಿದ್ದೇ ಚಿತ್ತವೆಂಬ ವಿತ್ತವನ್ನು ಕಸಿದುಕೊಳ್ಳುತ್ತಾನೆ.

ಅಂಗನಾಮಂಗನಾಮಂತರೇ ಮಾಧವೋ
ಮಾಧವಂ ಮಾಧವಂಚಾಂತರೇಣಾಂಗನಾ
ಇತ್ಥಮಾಕಲ್ಪಿತೇ ಮಂಡಲೇ ಮಧ್ಯಗಃ
ಸಂಜಗೌ ವೇಣುನಾ ದೇವಕೀನಂದನಃ ೩೫

ಕೇಕಿ ಕೇಕಾದೃತಾನೇಕ ಪಂಕೇರುಹಾ
ಲೀನ ಹಂಸಾವಲೀ ಹೃದ್ಯತಾ ಹೃದ್ಯತಾ
ಕಂಸ ವಂಶಾಟವೀ ದಾಹ ದಾವಾನಲಃ
ಸಂಜಗೌ ವೇಣುನಾ ದೇವಕೀನಂದನಃ ೩೬

ಕ್ವಾಪಿ ವೀಣಾಭಿರಾರಾವಿಣಾ ಕಂಪಿತಃ
ಕ್ವಾಪಿ ವೀಣಾಭಿರಾಕಿಂಕಿಣೀ ನರ್ತಿತಃ
ಕ್ವಾಪಿ ವೀಣಾಭಿರಾಮಾಂತರಂ ಗಾಪಿತಃ
ಸಂಜಗೌ ವೇಣುನಾ ದೇವಕೀನಂದನಃ ೩೭

ಚಾರು ಚಂದ್ರಾವಲೀ ಲೋಚನೈಶ್ಚುಂಬಿತಃ
ಗೋಪ ಗೋವೃಂದ ಗೋಪಾಲಿಕಾ ವಲ್ಲಭಃ
ವಲ್ಲವೀಬೃಂದ ಬೃಂದಾರಕಃ ಕಾಮುಕಃ
ಸಂಜಗೌ ವೇಣುನಾ ದೇವಕೀನಂದನಃ ೩೮

ಮೌಲಿಮಾಲಾ ಲಸನ್ಮತ್ತಭೃಂಗೀ ಲತಾ
ಭೀತ ಭೀತಪ್ರಿಯಾ ವಿಭ್ರಮಾಲಿಂಗಿತಃ
ಸ್ರಸ್ತ ಗೋಪೀಕುಚಾಭೋಗ ಸಮ್ಮೇಲಿತಃ
ಸಂಜಗೌ ವೇಣುನಾ ದೇವಕೀನಂದನಃ ೩೯

ಅಂಗನೆಗೆ ಅಂಗನೆಗೆ ಮಧ್ಯದಲ್ಲಿ ಮಾಧವ, ಮಾಧವ ಮಾಧವನ ಮಧ್ಯದಲ್ಲಿ ಅಂಗನೆ, ಹೀಗೆ ರಚಿತವಾದ ಮಂಡಲದ ಮಧ್ಯದಲ್ಲಿ ನಿಂತು ದೇವಕೀನಂದನನು ಕೊಳಲಿಂದ ಚೆನ್ನ ಹಾಡಿದನು.

ನವಿಲುಗಳ ಕೇಕೆಯಿಂದ ಆದೃತವಾದ ಅನೇಕ ಕಮಲಗಳಲ್ಲಿ ಅಡಗಿದ್ದ ಹಂಸಗಳ ಸಾಲಿನ ಆನಂದವನ್ನು ಮೂಡಿಸಿ, ಕಂಸವಂಶದ ಕಾಡಿನ ಕಿಚ್ಚಾದ ದೇವಕೀನಂದ ನನು ವೇಣುವಿನಿಂದ ಚೆನ್ನ ಹಾಡಿದನು.

ಒಂದು ಕಡೆ ನುಡಿಯುವ ವೀಣೆಯಿಂದ ಕುಪಿತನಾಗಿ, ಒಂದು ಕಡೆ ವೀಣೆಗೆ ಅನುಗುಣವಾಗಿ ಧ್ವನಿ ಮಾಡುವ ಕಿಂಕಿಣಿಯಿಂದ ನರ್ತಿತನಾಗಿ, ಒಂದು ಕಡೆ ವೀಣೆಯು ಮನೋಹರ ಗಾನ ವಿಶೇಷವನ್ನು ಪಡೆದು, ದೇವಕೀನಂದನನು ವೇಣುವಿನಿಂದ ಚೆನ್ನ ಹಾಡಿದನು.

ಗೋಪ ಗೋವೃಂದ ಗೋಪಾಲಿಕೆಯರ ವಲ್ಲಭ, ವಲ್ಲವೀವೃಂದದ ದೇವರು, ಕಾಮುಕ, ಆದ ದೇವಕೀನಂದನನು ಸುಂದರಿಯರಾದ ಗೋಪಿಯರ ನೋಟ ಗಳಿಂದ ಚುಂಬಿತನಾಗಿ ಕೊಳಲಿಂದ ಚೆನ್ನ ಹಾಡಿದನು.

ವಹೌಲಿಯ ಮಾಲೆಯಲ್ಲಿ ಮಿನುಗುವ ಮದಿಸಿದ ಹೆಣ್ದುಂಬಿಗಳ ಸಾಲಿಂದ ಬಹಳ ವಾಗಿ ಹೆದರಿದ ಪ್ರಿಯೆಯರ ವಿಭ್ರಮದಿಂದ ಆಲಂಗಿತನಾಗಿ, ಮೇಲುದು ಸರಿದು ಬಿದ್ದ ಆ ಗೋಪಿಯರ ಕುಚಾಭೋಗದಲ್ಲಿ ಸೇರಿ ದೇವಕೀನಂದನನು ಕೊಳಲಿಂದ ಚೆನ್ನ ಹಾಡಿದನು.

ಚಾರು ಚಾಮೀಕರಾಭಾಸ ಭಾಮಾವಿಭುಃ
ವೈಜಯಂತೀ ಲತಾ ಭಾಸಿತೋರಃಸ್ಥಲಃ
ನಂದಬೃಂದಾವನೇ ವಾಸಿತಾ ಮಧ್ಯಗಃ
ಸಂಜಗೌ ವೇಣುನಾ ದೇವಕೀನಂದನಃ ೪೦

ಬಾಲಿಕಾ ತಾಲಿಕಾ ತಾಲ ಲೀಲಾಲಯಾ
ಸಂಗಸಂದರ್ಶಿತ ಭ್ರೂಲತಾ ವಿಭ್ರಮಃ
ಗೋಪಿಕಾ ಗೀತದತ್ತಾವಧಾನಃ ಸ್ವಯಂ
ಸಂಜಗೌ ವೇಣುನಾ ದೇವಕೀನಂದನಃ ೪೧

ಪಾರಿಜಾತಂ ಸಮುದ್ಧೃತ್ಯ ರಾಧಾವರೋ
ರೋಪಯಾಮಾಸ ಭಾಮಾಗೃಹಸ್ಯಾಂಗಣೇ
ಶೀತಶೀತೇ ವಟೇ ಯಾಮುನೀಯೇ ತಟೇ
ಸಂಜಗೌ ವೇಣುನಾ ದೇವಕೀನಂದನಃ ೪೨

ಅಗ್ರೇ ದೀರ್ಘತರೋsಯಮರ್ಜುನತರು ಸ್ತಸ್ಯಾಗ್ರತೋವರ್ತನೀ
ಸಾ ಘೋಷಂ ಸಮುಪೈತಿ ತತ್ಪರಿಸರೇ ದೇಶೇ ಕಲಿಂದಾತ್ಮಜಾ
ತಸ್ಯಾಸ್ತೀರ ತಮಾಲಕಾನನ ತಲೇ ಚಕ್ರಂ ಗವಾಂ ಚಾರಯನ್
ಗೋಪಃ ಕ್ರೀಡತಿ ದರ್ಶಯಿಷ್ಯತಿ ಸಖೇ ಪಂಥಾನಮವ್ಯಾಹತಂ ೪೩

ಗೋಧೂಲಿ ಧೂಸರಿತ ಕೋಮಲ ಗೋಪವೇಷಂ
ಗೋಪಾಲ ಬಾಲಕ ಶತೈರನುಗಮ್ಯಮಾನಂ
ಸಾಯಂತನೇ ಪ್ರತಿಗೃಹಂ ಪಶುಬಂಧನಾರ್ಥಂ
ಗಚ್ಛಂತಮಚ್ಯುತಶಿಶುಂ ಪ್ರಣತೋsಸ್ಮಿನಿತ್ಯಂ ೪೪

ಚಂದವಾದ ಹೊನ್ನ ಹೊಳಪಿನ ಭಾಮೆಯ ವಿಭು, ವೈಜಯಂತಿ ಮಾಲೆಯಿಂದ ಮೆರೆಯುವ ವಕ್ಷಃಸ್ಥಲವುಳ್ಳವನಾಗಿ, ನಂದವೃಂದಾವನದಲ್ಲಿ ವಾಸ ಮಾಡುವವರ ಮಧ್ಯೆ ನಿಂತು, ದೇವಕೀನಂದನನು ಕೊಳಲಿಂದ ಚೆನ್ನ ಹಾಡಿದನು.

ತಾಲ ಹಿಡಿದ ಬಾಲೆಯರ ಆ ತಾಲಲೀಲೆಯ ಲಯದಲ್ಲಿಯ ಆಸಕ್ತಿಯಿಂದ ಹುಬ್ಬಿನ ಕುಡಿಯ ವಿಭ್ರಮವನ್ನು ತೋರಿಸುತ್ತ, ಗೋಪಿಕೆಯರ ಹಾಡಿನಲ್ಲಿ ಮನಸ್ಸಿಟ್ಟವನಾಗಿ, ದೇವಕೀನಂದನನು ತಾನೂ ಕೊಳಲಿಂದ ಚೆನ್ನ ಹಾಡಿದನು.

ಪಾರಿಜಾತವನ್ನು ಎತ್ತಿತಂದು ಭಾಮೆಯ ಮನೆಯ ಅಂಗಳದಲ್ಲಿ ಸ್ಥಾಪಿಸಿ ರಾಧಾವರ ದೇವಕೀನಂದನನು ಯಮುನಾತೀರದ ಅತ್ಯಂತ ಶೀತಲಚ್ಛಾಯೆಯ ವಟವೃಕ್ಷದಡಿಯಲ್ಲಿ ಕೊಳಲಿಂದ ಚೆನ್ನ ಹಾಡಿದನು.

ಮುಂದೆ ಬಹು ಎತ್ತರವಾದ ಈ ಅರ್ಜುನವೃಕ್ಷ ಇದೆಯಲ್ಲ, ಅದರ ಎದುರಲ್ಲಿ ಕಾಲುದಾರಿ ಇದೆ. ಅದು ಗೊಲ್ಲವಾಡಿಯನ್ನು ಸೇರುತ್ತದೆ. ಅದರ ಹತ್ತಿರದ ಪ್ರದೇಶದಲ್ಲಿ ಯಮುನೆ ಇದೆ. ಅದರ ತೀರದ ತಮಾಲಕಾನನದ ಅಡಿಯಲ್ಲಿ ದನಗಳ ಮಂದೆಯನ್ನು ನಡೆಸುತ್ತ ಶ್ರೀಕೃಷ್ಣನು ಆಡುತ್ತಿದ್ದಾನೆ. ಅವನು, ಓ ಸಖಿ, ಅವ್ಯಾಹತವಾದ ಪಂಥವನ್ನು ತೋರಿಸುತ್ತಾನೆ.

ನೂರು ಜನ ಗೋಪಾಲಬಾಲಕರು ಅನುಸರಿಸಿ ಬರುತ್ತಿರಲಾಗಿ, ಸಂಜೆಯವೇಳೆ ಹಸುಗಳನ್ನು ಕಟ್ಟುವುದಕ್ಕಾಗಿ ಮನೆ ಮನೆಯನ್ನು ಪ್ರವೇಶಿಸುವವನಾದ, ಗೋಧೂಳಿಯಿಂದ ಧೂಸರಿತವಾದ ಕೋಮಲ ಗೋಪವೇಷದ ಅಚ್ಯುತ ಶಿಶುವಿಗೆ ಸದಾ ಪ್ರಣಾಮ ಮಾಡುತ್ತೇನೆ.

ನಿಧಿಂ ಲಾವಣ್ಯಾನಾಂ ನಿಖಿಲಜಗದಾಶ್ಚರ್ಯ ನಿಲಯಂ
ನಿಜವಾಸಂ ಭಾಸಾಂ ನಿರವಧಿಕ ನಿಃಶ್ರೇಯಸ ರಸಂ
ಸುಧಾಧಾರಾಸಾರಂ ಸುಕೃತ ಪರಿಪಾಕಂ ಮೃಗದೃಶಾಂ
ಪ್ರಪದ್ಯೇ ಮಾಂಗಲ್ಯಂ ಪ್ರಥಮಮಧಿದೈವಂ ಕೃತಧಿಯಾಂ ೪೫

ಆತಾಮ್ರ ಪಾಣಿಕಮಲ ಪ್ರಣಯ ಪ್ರತೋದಂ
ಆಲೋಲ ಹಾರ ಮಣಿಕುಂಡಲ ಹೇಮಸೂತ್ರಂ
ಆವಿಃ ಶ್ರಮಾಂಬುಕಣಮಂಬುದನೀಲಮವ್ಯಾತ್
ಆದ್ಯಂ ಧನಂಜಯ ರಥಾಭರಣಂ ಮಹೋ ನಃ ೪೬

ನಖ ನಿಯಮಿತ ಕಂಡೂನ್ ಪಾಂಡವಸ್ಯಂದನಾಶ್ವಾನ್
ಅನುದಿನಮಭಿಷಿಂಚನ್ ಅಂಜಲಿಸ್ತೈಃ ಪಯೋಭಿಃ
ಅವತು ವಿತತಗಾತ್ರಸ್ತೋತ್ರಸಂಸ್ಯೂತ ಮೌಲಿಃ
ದಶನ ವಿಧೃತ ರಶ್ಮಿಃ ದೇವಕೀಪುಣ್ಯರಾಶಿಃ ೪೭

ವ್ರಜಯುವತಿ ಸಹಾಯೇ ಯೌವನೋಲ್ಲಾಸಿ ಕಾಯೇ
ಸಕಲ ಶುಭ ವಿಲಾಸೇ ಕುಂದ ಮಂದಾರ ಹಾಸೇ
ನಿವಸತ ಮಮಚಿತ್ತಂ ತತ್ಪದಾಯತ್ತ ವೃತ್ತಂ
ಮುನಿಸರಸಿಜ ಭಾನೌ ನಂದಗೋಪಸ್ಯ ಸೂನೌ ೪೮

ಅರಣ್ಯಾನೀಮಾರ್ದ್ರ ಸ್ಮಿತ ಮಧುರ ಬಿಂಬಾಧರ ಸುಧಾ
ಸರಣ್ಯಾ ಸಂಕ್ರಾಂತ್ಯೈಃ ಸಪದಿ ಮದಯನ್ ವೇಣುನಿನದೈಃ
ಧರಣ್ಯಾ ಸಾನಂದೋತ್ಪುಲಕಮುಪಗೂಢಾಂಘ್ರಿಕಮಲಃ
ಶರಣ್ಯಾನಾಮಾದ್ಯಃ ಸ ಜಯತು ಶರೀರೀ ಮಧುರಿಮಾ ೪೯

ಲಾವಣ್ಯವೆಲ್ಲದರ ನಿಧಿ, ಸಮಸ್ತ ಜಗತ್ತಿನ ಆಶ್ಚರ್ಯಗಳ ನಿಲಯು, ಎಲ್ಲ ಹೊಳಪಿನ ನಿಜಾವಾಸ, ಅವಧಿ ಇಲ್ಲದ ಮುಕ್ತಿಸುಖದ ರಸ, ಅಮೃತ ಧಾರೆಯ ಆಸಾರ, ಮೃಗಾಕ್ಷಿಯರ ಸುಕೃತದ ಪರಿಪಾಕ, ಸಿದ್ಧಿ ಹೊಂದಿದವರ ಪ್ರಥಮ ಅಧಿದೈವ, ಇದೆಲ್ಲ ಆದ ಮಂಗಲ ಮೂರ್ತಿಯನ್ನು ಸಾರುತ್ತೇನೆ.

ತುಂಬುಗೆಂಪಿನ ಕೈತಾವರೆಯಲ್ಲಿ ಹಿಡಿದ ಚಮ್ಮಟಿಗೆ, ಓಲಾಡುವ ಹಾರ ಮಣಿ ಕುಂಡಲ ಹೇಮಸೂತ್ರ, ಬೆವರ ಕಣದಿಂದ ಕೂಡಿ ಮೇಘದಂತೆ ಶ್ಯಾಮವಾದ ಒಡಲು, ಇವುಗಳ ಆ ಆದ್ಯ ಮಹವು, ಅರ್ಜುನನ ರಥಕ್ಕೆ ಆಭರಣ ಆದದ್ದು, ನಮ್ಮನ್ನು ಸಲಹಲಿ.

ಅರ್ಜುನನ ರಥದ ಕುದುರೆಗಳ ನವೆಯನ್ನು ತನ್ನ ಕೈಬೆರಳ ಉಗುರುಗಳಿಂದ ನಿವಾರಿಸಿ ದಿನದಿನವೂ ಬೊಗಸೆಯ ನೀರಿಂದ ಅವನ್ನು ತೊಳೆದದ್ದು, ತಲೆಯಲ್ಲಿ ಸೆಕ್ಕಿದ ಚಮ್ಮಟಿಗೆಯು, ಹಲ್ಲಲ್ಲಿ ಹಿಡಿದ ವಾಘೆಯು, ಆ ವಿತತಗಾತ್ರ, ತಾಯಿ ದೇವಕಿಯ ಪುಣ್ಯರಾಶಿಯಾದದ್ದು, ರಕ್ಷಿಸಲಿ.

ಗೋಕುಲದ ತರುಣಿಯರಿಗೆ ನೆರವಾಗಿ ಯೌವನೋಲ್ಲಾಸಿಯಾದ, ಕುಂದ ಮಂದಾರ ಹಾಸದಿಂದ ಕೂಡಿ ಸಕಲಶುಭವಿಲಾಸಿಯಾದ, ಮುನಿಗಳೆಂಬ ತಾವರೆಗಳಿಗೆ ನೇಸರಾದ, ನಂದಗೋಪಕುಮಾರನಲ್ಲಿ ನನ್ನ ಚಿತ್ತ ಪದಾಧೀನ ವೃತ್ತಿಯಿಂದ ನಿಲ್ಲಲಿ.

ತೇವವೂ ಮೆಲುನಗೆಯಿಂದ ಮಧುರವೂ ಆದ ಬಿಂಬಾಧರದ ಸುಧಾಸರಣಿಯಿಂದ ಒಗೆದ ಕೊಳಲನಿನದದಿಂದ ಅರಣ್ಯಾನಿಯನ್ನು ಆಗಲೆ ಮೋಹಗೊಳಿಸಿದ, ಆದ್ಯ ಶರಣ್ಯ ಮಧುರಿಮಶರೀರಿ, ಧರಣಿ ಆನಂದದಿಂದ ಉತ್ಪುಲಕವಾಗಿ ಅಪ್ಪಿಕೊಂಡ ಪಾದಕಮಲದಾತ, ವಿಜಯಿಯಾಗಲಿ.

ಮುಗ್ಧಂ ಸ್ನಿಗ್ಧಂ ಮಧುರ ಮುರಲೀ ಮಾಧುರೀ ಧೀರನಾದೈಃ
ಕಾರಂ ಕಾರಂ ಕರಣ ವಿವಶಂ ಗೋಕುಲಂ ವ್ಯಾಕುಲತ್ವಂ
ಶ್ಯಾಮಂ ಕಾಮಂ ಯುವಜನ ಮನೋಮೋಹನಂ ಮೋಹನತ್ವಂ
ಚಿತ್ತೇ ನಿತ್ಯಂ ನಿವಸತು ಮಹೋ ವಲ್ಲವೀವಲ್ಲಭಂ ನಃ ೫೦

ವಿದಗ್ಧ ಗೋಪಾಲ ವಿಲಾಸಿನೀನಾಂ
ಸಂಭೋಗ ಚಿಹ್ನಾಂಕಿತ ಸರ್ವಗಾತ್ರಂ
ಪವಿತ್ರಮಾಮ್ನಾಯಗಿರಾಮಗಮ್ಯಂ
ಬ್ರಹ್ಮ ಪ್ರಪದ್ಯೇ ನವನೀತ ಚೋರಂ ೫೧

ಆನಂದೇನ ಯಶೋದಯಾ ಸಮದನಂ ಗೋಪಾಂಗನಾಭಿಶ್ಚಿರಂ
ಸಾಶಂಕಂ ಬಲವಿದ್ವಿಷಾ ಸಕುಸುಮೈಃ ಸಿದ್ಧೈಃಪಥಿ ವ್ಯಾಕುಲಂ
ಸೇರ್ಷ್ಯಂ ಗೋಪಕುಮಾರಕೈಃ ಸಕರುಣಂ ಪೌರೈರ್ಜನೈಃ ಸಸ್ಮಿತಂ
ಯೋದೃಷ್ಟಃ ಸ ಪುನಾತು ನೋ ಮುರರಿಪುಃ ಪ್ರೋಕ್ಷಿಪ್ತ
ಗೋವರ್ಧನಃ ೫೨

ಅಂತರ್ಗೃಹೇ ಕೃಷ್ಣಮವೇಕ್ಷ್ಯ ಚೋರಂ
ಬಧ್ವಾ ಕವಾಟಂ ಜನನೀ ಗತೈಕಾ
ಉಲೂಖಲೇ ದಾಮ ನಿಬದ್ಧಮೇನಂ
ತತ್ರಾಪಿ ದೃಷ್ಟ್ವಾ ಸ್ತಿಮಿತಾ ಬಭೂವ ೫೩

ರತ್ನಸ್ಥಲೇ ಜಾನುಚರಃ ಕುಮಾರಃ
ಸಂಕ್ರಾಂತಮಾತ್ಮೀಯ ಮುಖಾರವಿಂದಂ
ಆದಾತು ಕಾಮಸ್ತದಲಾಭ ಖೇದಾತ್
ವಿಲೋಕ್ಯ ಧಾತ್ರೀವದನಂ ರುರೋದ ೫೪

ಮಧುರ ಮುರಲೀಮಾಧುರೀ ಧೀರನಾದದಿಂದ ಗೋಕುಲವನ್ನು ಇಂದ್ರಿಯ ಪರವಶವಾಗಿ ಮಾಡಿದ, ಮುಗ್ಧವೂ ಸ್ನಿಗ್ಧವೂ ಆದ ವ್ಯಾಕುಲತ್ವ, ಯುವಜನದ ಮನಸ್ಸನ್ನು ತೀರ ಮೋಹಗೊಳಿಸಿದ ಶ್ಯಾಮ ಮೋಹನತ್ವ, ಗೋಪಸ್ತ್ರೀಯರಿಗೆ ಪ್ರಿಯವಾದ ಆ ಮಹಸ್ಸು ನಮ್ಮ ಚಿತ್ತದಲ್ಲಿ ನಿತ್ಯವಾಗಿ ನಿಲ್ಲಲಿ.

ಪ್ರೌಢೆಯರಾದ ಗೋಪಾಲ ವಿಲಾಸಿನಿಯರ ಸಂಭೋಗ ಚಿಹ್ನದಿಂದ ಅಂಕಿತವಾದ ಸರ್ವಗಾತ್ರವುಳ್ಳ, ಪವಿತ್ರವಾದ, ವೇದವಾಣಿಗೆ ಅಗಮ್ಯವಾದ ನವನೀತಚೋರ ಬ್ರಹ್ಮವನ್ನು ಆಶ್ರಯಿಸುತ್ತೇನೆ.

ಗೋವರ್ಧನವನ್ನು ಮೇಲೆತ್ತಿದ ವೇಳೆ ಯಶೋದೆ ಆನಂದದಿಂದ, ಗೋಪಸ್ತ್ರೀಯರು ದೀರ್ಘಕಾಲ ಪ್ರಣಯದಿಂದ, ಇಂದ್ರನು ತುಂಬುಭಯದಿಂದ, ತಮ್ಮ ಮಾರ್ಗದಲ್ಲಿದ್ದ ಸಿದ್ಧರು ಪ್ರಪ್ಪಾರ್ಜನೆಯಿಂದ, ಗೋಪಕುಮಾರಕರು ವ್ಯಾಕುಲರಾಗಿ ಈರ್ಷೆಯಿಂದ, ಪೌರಜನರು ಕರುಣೆಯ ಎಳನಗೆಯಿಂದ, ನೋಡಿದ ಆ ಮುರರಿಪು ನಮ್ಮನ್ನು ಪಾವನ ಮಾಡಲಿ.

ತನ್ನ ಮನೆಯೊಳಗಡೆ ಕಳವು ಮಾಡಲು ಬಂದಿದ್ದ ಕೃಷ್ಣನನ್ನು ಕಂಡು ಕದ ಹಾಕಿ ಅವನ ತಾಯ ಬಳಿಗೆ ಹೋದ ಒಬ್ಬ ಸ್ತ್ರೀ, ಅಲ್ಲಿ ಅವನನ್ನು ಒರಲಿಗೆ ಹಗ್ಗದಿಂದ ಕಟ್ಟಿಹಾಕಿದ್ದುದನ್ನು ಕಂಡು ಸ್ತಿಮಿತಳಾದಳು.

ಅಂಬೆಗಾಲಿಡುವ ಹೊತ್ತು ಕುಮಾರನು ಮಣಿಗಟ್ಟಿನ ನೆಲದಲ್ಲಿ ಸೇರಿದ ತನ್ನ ಮುಖಾರವಿಂದವನ್ನು ಕಂಡು, ಅದನ್ನು ಹಿಡಿಯ ಹೋಗಿ ಅದು ದೊರೆಯದ ಕಾರಣದಿಂದ ದಾದಿಯ ಮುಖ ನೋಡಿ ಅತ್ತನು.

ಉಪಾಸತಾಮಾತ್ಮವಿದಃ ಪುರಾಣಾಃ
ಪರಂಪರಸ್ಮಾನ್ನಿಹಿತಂ ಗುಹಾಯಾಂ
ವಯಂ ಯಶೋದಾಶಿಶು ಬಾಲಲೀಲಾ
ಕಥಾಸುಧಾ ಸಿಂಧುಷು ಲೀಲಯಾಮಃ ೫೫

ವಿಕ್ರೇತುಕಾಮಾ ಕಿಲ ಗೋಪಕನ್ಯಾ
ಮುರಾರಿಪಾದಾರ್ಪಿತ ಚಿತ್ತವೃತ್ತಿಃ
ದಧ್ಯಾದಿಕಂ ಮೋಹವಶಾದವೋಚತ್
ಗೋವಿಂದ ದಾಮೋದರ ಮಾಧವೇತಿ ೫೬

ಉಲೂಖಲಂ ವಾ ಯಮಿನಾಂ ಮನೋ ವಾ
ಗೋಪಾಂಗನಾನಾಂ ಕುಚಕುಟ್ಮಲಂ ವಾ
ಮುರಾರಿನಾಮ್ನಃ ಕಲಭಸ್ಯ ನೂನಂ
ಆಲಾನಮಾಸೀತ್ ತ್ರಯಮೇವ ಭೂಮೌ ೫೭

ಕರಾರವಿಂದೇನ ಪದಾರವಿಂದಂ
ಮುಖಾರವಿಂದೇ ವಿನಿವೇಶಯಂತಂ
ವಟಸ್ಯ ಪತ್ರಸ್ಯ ಪುಟೇ ಶಯಾನಂ
ಬಾಲಂ ಮುಕುಂದಂ ಮನಸಾಸ್ಮರಾಮಿ ೫೮

ಶಂಭೋ ಸ್ವಾಗತಮಾಸ್ಯತಾಮಿತಇತೋ ವಾಮೇನ ಪದ್ಮಾಸನ
ಕ್ರೌಂಚಾರೇ ಕುಶಲಂ ಸುಖಂ ಸುರಪತೇ ವಿತ್ತೇಶ ನೋದೃಶ್ಯಸೇ
ಇತ್ಥಂ ಸ್ವಪ್ನಗತಸ್ಯ ಕೈಟಭಜಿತಃ ಶ್ರುತ್ವಾ ಯಶೋದಾ ಗಿರಃ
ಕಿಂ ಕಿಂ ಬಾಲಕ ಜಲ್ಪಸೀತಿ ರಚಿತಂ ಧೂಧೂಕೃತಂ ಪಾತು ನಃ ೫೯

ಆತ್ಮವಿದರಾದ ಹಿರಿಯರು ಹೃದಯ ಗುಹೆಯಲ್ಲಿ ಅಡಗಿರುವ ಪರಾತ್ಪರವನ್ನು ಉಪಾಸನೆ ಮಾಡಲಿ: ನಾವು ಯಶೋದೆಯ ಶಿಶುವಿನ ಬಾಲಲೀಲಾ ಕಥಾ ಸಿಂಧುವಿನಲ್ಲಿ ಕ್ರೀಡಿಸೋಣ.

ಹಾಲು ಮೊಸರನ್ನು ಮಾರ ಹೊರಟಳು ದಿಟ. ಗೋಪಕನ್ಯೆ ; ಮನಸ್ಸು ಮುರಾರಿಯ ಪಾದದಲ್ಲಿ ನೆಟ್ಟ ಕಾರಣ ಅವಳು ಮರವಿನಿಂದ ಗೋವಿಂದ ದಾಮೋದರ ಮಾಧವ ಎಂದು ಕೂಗಿದಳು.

ಇಲ್ಲ ಒರಳು, ಇಲ್ಲ ಯಮಿಗಳ ಮನಸ್ಸು. ಅದೂ ಇಲ್ಲವಾದರೆ ಗೋಪಾಂಗನೆಯರ ಕುಚಕುಟ್ಮಲ, ಇವು ಮೂರೇ ಭೂಮಿಯಲ್ಲಿ ಮುರಾರಿ ಎಂಬ ಮರಿಯಾನೆಯನ್ನು ಕಟ್ಟುವ ಸ್ಥಲಗಳಾದವು.

ಅರವಿಂದದಂಥ ಕರದಿಂದ ಅರವಿಂದದಂಥ ಪಾದವನ್ನು ಹಿಡಿದು ಅರವಿಂದದಂಥ ಬಾಯೊಳಗೆ ಇರಿಸುತ್ತ ವಟಪತ್ರ ಪುಟದಲ್ಲಿ ಮಲಗಿರುವ ಬಾಲ ಮುಕುಂದನನ್ನು ಮನಸಾ ನೆನೆಯುತ್ತೇನೆ.

ಶಂಭು, ನಿನಗೆ ಸ್ವಾಗತ ; ಕಮಲಾಸನ, ಇತ್ತ ಇತ್ತ ಎಡಗಡೆ ಕುಳ್ಳಿರು ; ಷಣ್ಮುಖ, ಕುಶಲವೆ ? ಇಂದ್ರ ಸುಖವೇ ? ಕುಬೇರ, ನೀನು ಕಾಣಲಿಲ್ಲ : ಹೀಗೆಂದು ಮಗು ನಿದ್ರೆಯಲ್ಲಿ ನುಡಿದದ್ದನ್ನು ಕೇಳಿ ಯಶೋದೆ, "ಮಗು ಇದೇನಿದು, ಇದೇನು ಒರಲುತ್ತೀ," ಎಂದು ಅನಿಷ್ಟನಿವಾರಣೆಯನ್ನೆಸಗಿದಳಲ್ಲ, ಅದು ನಮ್ಮನ್ನು ಸಲಹಲಿ.

ಮಾತಃ ಕಿಂ ಯದುನಾಥ ದೇಹಿ ಚಷಕಂ ಕಿಂ ತೇನ ಪಾತುಂ ಪಯಃ
ತನ್ನಾಸ್ತ್ಯದ್ಯ ಕದಾಸ್ತಿವಾ ನಿಶಿ ನಿಶಾ ಕಿಂ ವಾಂಧಕಾರೋದಯೇ
ಅಮಿಾಲ್ಯಾಕ್ಷಿಯುಗಂ ನಿಶಾಪ್ಯುಪಗತಾ ದೇಹೀತಿ ಮಾತುರ್ಮುಹುಃ
ವಕ್ಷೋಜಾಂಬರ ಕರ್ಷಣೋದ್ಯತ ಕರಃ ಕೃಷ್ಣಃ ಸ ಪುಷ್ಣಾತು ನಃ ೬೦

ಕಾಲಿಂದೀ ಪುಲಿನೋದರೇಷು ಮುಸಲೀ ಯಾವದ್ಗತಃ ಖೇಲಿತುಂ
ತಾವತ್ಕರ್ಬುರಿಕಾ ಪಯಃ ಪಿಬ ಹರೇ ವರ್ಧಿಷ್ಯತೇ ತೇ ಶಿಖಾ
ಇತ್ಥಂ ಬಾಲತಯಾ ಪ್ರತಾರಣಪರಾಃ ಶ್ರುತ್ವಾ ಯಶೋದಾಗಿರಃ
ಪಾಯಾನ್ನಃ ಸ್ವಶಿಖಾಂ ಸ್ಪೃಶನ್ಪ್ರಮುದಿತಃ ಕ್ಷೀರೇಽರ್ಧಪೀತೇ
ಹರಿಃ ೬೧

ಕೈಲಾಸೇ ನವನೀತತಿ ಕ್ಷಿತಿತಲೇ ಪ್ರಾಗ್ಜಗ್ಧಮೃಲ್ಲೋಷ್ಟತಿ
ಕ್ಷೀರೋದೇಽಪಿ ನಿಪೀತದುಗ್ಧತಿ ಲಸತ್ ಸ್ಮೇರ ಪ್ರಫುಲ್ಲೇಮುಖೇ
ಮಾತ್ರಾ ಜೀರ್ಣಧಿಯಾ ದೃಢಂ ಚಕಿತಯಾ ನಷ್ಟಾಸ್ಮಿ ದೃಷ್ಟಃ ಕಯಾ
ಧೂ ಧೂ ವತ್ಸಕ ಜೀವ ಜೀವ ಚಿರಮಿತ್ಯುಕ್ತೋಽವತಾದ್ವೋ
ಹರಿಃ ೬೨

ಕಿಂಚಿತ್ಕುಂಚಿತ ಲೋಚನಸ್ಯ ಪಿಬತಃ ಪರ್ಯಾಯ ಪೀತಂ ಸ್ತನಂ
ಸದ್ಯಃ ಪ್ರಸ್ನುತ ದುಗ್ಧಬಿಂದುಮಪರಂ ಹಸ್ತೇನ ಸಂಮಾರ್ಜತಃ
ಮಾತ್ರೈಕಾಂಗುಲಿ ಲಾಲಿತಸ್ಯ ಚುಬುಕೇ ಸ್ಮೇರಾನನಸ್ಯಾಧರೇ
ಶೌರೇಃ ಕ್ಷೀರಕಣಾನ್ವಿತಾ ನಿಪತಿತಾ ದಂತದ್ಯುತಿಃ ಪಾತು ನಃ ೬೩

ಉತ್ತುಂಗ ಸ್ತನಮಂಡಲೋಪರಿ ಲಸತ್ಪ್ರಾಲಂಬ ಮುಕ್ತಾಮಣೇಃ
ಅನ್ತರ್ಬಿಂಬಿತಮಿಂದ್ರನೀಲ ನಿಕರಚ್ಛಾಯಾನುಕಾರಿ ದ್ಯುತಿ
ಲಜ್ಜಾ ವ್ಯಾಜಮುಪೇತ್ಯ ನಮ್ರವದನಾ ಸ್ಪಷ್ಟಂ ಮುರಾರೇರ್ವಪುಃ
ಪಶ್ಯನ್ತೀ ಮುದಿತಾ ಮುದೇಽಸ್ತುಭವತಾಂ ಲಕ್ಷ್ಮೀ
ವಿವಾಹೋತ್ಸವೇ ೬೪

"ಅಪ್ಪಾ!" "ಏನು ಕಂದ?" "ಬಟ್ಟಲು ಕೊಡು" "ಅದು ಏಕೆ?" "ಹಾಲು ಕುಡಿಯಬೇಕು." "ಅದು ಈಗ ಅಲ್ಲ." "ಇನ್ನು ಯಾವಾಗ" "ರಾತ್ರಿ" "ರಾತ್ರಿ ಎಂದರೆ?" "ಕತ್ತಲಾದ ಮೇಲೆ" "ಹಾಗೆಯೆ?" ಎಂದು ತನ್ನ ಎರಡೂ ಕಣ್ಣನ್ನು ಮುಚ್ಚಿಕೊಂಡು, "ಕತ್ತಲು ಆಯಿತು, ಕೊಡು," ಎಂದು ಒಂದೇ ಸಮ ತಾಯ ಎದೆಯ ಸೆರಗನ್ನು ಸೆಳೆಯತೊಡಗಿದ ಆ ಕೃಷ್ಣ ನಮ್ಮನ್ನು ಪೋಷಿಸಲಿ.

"ಕಾಲಿಂದಿಯ ಮಳಲೊಟ್ಟಿನಲ್ಲಿ ಬಲರಾಮ ಆಡಹೋಗಿರುವ ವೇಳೆ, ಅವನು ಬರುವ ಮುನ್ನ ಬಣ್ಣದ ಹಸುವಿನ ಈ ಹಾಲನ್ನು ಕುಡಿದುಬಿಡಪ್ಪ. ನಿನ್ನ ಶಿಖೆ ಬೆಳೆಯುತ್ತದೆ," ಎಂದು ಬಾಲಕನನ್ನು ಏಮಾರಿಸಲು ಯಶೋದೆ ಹೇಳಲು, ಕೊಟ್ಟ ಹಾಲಿನಲ್ಲಿ ಅರ್ಧವನ್ನು ಕುಡಿದವನೆ ತನ್ನ ಶಿಖೆ ಬೆಳೆದಿದೆಯೆಂದು ಮುಟ್ಟಿ ನೋಡಿಕೊಂಡು ಸಂತೋಷಪಟ್ಟ ಹರಿ ನಮ್ಮನ್ನು ಪಾಲಿಸಲಿ.

ನಗೆಯಿಂದ ತೆರೆದ ಹೊಳೆವ ಬಾಯಲ್ಲಿ, ಕೈಲಾಸ ಇಷ್ಟು ಬೆಣ್ಣೆ, ಭೂತಲ ಆ ಮೊದಲು ತಿಂದ ಅಷ್ಟು ಮಣ್ಣು, ಕ್ಷೀರಸಾಗರ ಕುಡಿಸಿದ್ದ ಇಷ್ಟು ಹಾಲು, ಎಂಬಂತೆ ಕಾಣಲು, ಮಗುವಿಗೆ ಜೀರ್ಣವಾಗಿಲ್ಲ ಎಂಬ ಶಂಕೆಯಿಂದ ಯಶೋದೆ ಬಹು ಕಳವಳಪಟ್ಟು, "ಕೆಟ್ಟೆನೋ ಕಂದ, ನಿನಗೆ ಯಾರ ದೃಷ್ಟಿ ತಾಗಿತೋ, ಥೂ, ಥೂ, ಚಿರಂಜೀವಿಯಾಗು, ಚಿರಂಜೀವಿಯಾಗು," ಎಂದು ಆಶೀರ್ವದಿಸಿ ದಳೇ ಆ ಹರಿ ನಮ್ಮನ್ನು ರಕ್ಷಿಸಲಿ.

ಕಣ್ಣನ್ನು ಸ್ವಲ್ಪ ಮುಚ್ಚಿ ಮೊದಲಾಗಿ ಒಂದು ಮೊಲೆಯನ್ನು ಕುಡಿಯುತ್ತ ಆಗಲೆ ತೊರೆದ ಹಾಲ ಕಣದ ಇನ್ನೊಂದು ಮೊಲೆಯನ್ನು ಕೈಯಿಂದ ನೇವರಿ ಸುತ್ತ, ತಾಯಿ ಕೈ ಬೆರಳೊಂದರಿಂದ ಗದ್ದವನ್ನು ಮುದ್ದಿಸುತ್ತಿರಲಾಗಿ, ಸ್ಮೇರಾನನನಾದ ಶೌರಿಯ ತುಟಿಯಲ್ಲಿ ಹಾಲ ತುಂತುರೊಂದಿಗೆ ಬಿದ್ದಿರುವ ಅವನ ಮೊಳೆಹಲ್ಲ ಕಾಂತಿ ನಮ್ಮನ್ನು ಪಾಲಿಸಲಿ.

ವಿವಾಹೋತ್ಸವದಲ್ಲಿ ಉತ್ತುಂಗವಾದ ಸ್ತನಮಂಡಲದ ಮೇಲೆ ಹೊಳೆದ ನಿಡು ಹಾರದ ಮುಕ್ತಾಮಣಿಯ ಒಳಗೆ ಬಿಂಬಿತವಾದ ಮುರಾರಿಯ ದೇಹ ಸುರನೀಲ ಮಣಿಯ ಸಮುದಾಯ ಒಂದರ ಛಾಯೆಯನ್ನು ಅನುಕರಿಸುತ್ತಿದ್ದದ್ದನ್ನು, ಲಜ್ಜೆಯೆಂಬ ವ್ಯಾಜದಿಂದ ತಲೆತಗ್ಗಿಸಿ ಧಾರಾಳವಾಗಿ ನೋಡಿ ಲಕ್ಷ್ಮೀದೇವಿ ಸಂತೋಷಪಟ್ಟಳು. ಆಕೆ ನಿಮಗೆ ಸಂತೋಷವನ್ನು ನೀಡಲಿ.

ಕೃಷ್ಣೇನಾಂಬ ಗತೇನ ರಂತುಮಧುನಾ ಮೃದ್ಭಕ್ಷಿತಾ ಸ್ವೇಚ್ಛಯಾ
ತಥ್ಯಂ ಕೃಷ್ಣ ಕ ಏವಮಾಹ ಮುಸಲೀ ಮಿಥ್ಯಾಂಬ ಪಶ್ಯಾನನಂ
ವ್ಯಾದೇಹೀತಿ ವಿದಾರಿತೇ ಚ ವದನೇ ದೃಷ್ಟ್ವಾ ಸಮಸ್ತಂ ಜಗತ್
ಮಾತಾ ಯಸ್ಯ ಜಗಾಮ ವಿಸ್ಮಯಪದಂ ಪಾಯಾತ್ಸ ನಃ ಕೇಶವಃ ೬೫

ಸ್ವಾತೀ ಸಪತ್ನೀ ಕಿಲ ತಾರಕಾಣಾಂ
ಮುಕ್ತಾಫಲಾನಾಂ ಜನನೀತಿ ರೋಷಾತ್
ಸಾ ರೋಹಿಣೀ ನೀಲಮಸೂತ ರತ್ನಂ
ಕೃತಾಸ್ಪದಂ ಗೋಪವಧೂ ಕುಚೇಷು ೬೬

ನೃತ್ಯಂತಮತ್ಯಂತ ವಿಲೋಕನೀಯಂ
ಕೃಷ್ಣಂ ಮಣಿಸ್ತಂಭಗತಂ ಮೃಗಾಕ್ಷೀ
ನಿರೀಕ್ಷ್ಯ ಸಾಕ್ಷಾದಿವ ಕೃಷ್ಣಮಗ್ರೇ
ದ್ವಿಧಾ ವಿತೇನೇ ನವನೀತಮೇಕಂ ೬೭

ವತ್ಸ ಜಾಗೃಹಿ ವಿಭಾತಮಾಗತಂ
ಜೀವ ಕೃಷ್ಣ ಶರದಾಂ ಶತಂಶತಂ
ಇತ್ಯುದೀರ್ಯ ಸುಚಿರಂ ಯಶೋದಯಾ
ದೃಶ್ಯಮಾನ ವದನಂ ಭಜಾಮಹೇ ೬೮

ಓಷ್ಠಂ ಜಿಘ್ರನ್ ಶಿಶುರಿತಿ ಧಿಯಾ ಚುಂಬಿತೋ ವಲ್ಲವೀಭಿಃ
ಕಂಠಂ ಗೃಹ್ಣನ್ನರುಣಿತ ಪದಂ ಗಾಢಮಾಲಿಂಗಿತಾಂಗಃ
ದೋಷ್ಣಾ ಲಜ್ಜಾಪದಮಭಿಮೃಶನ್ನಂಕಮಾರೋಪಿತಾತ್ಮಾ
ಧೂರ್ತಸ್ವಾಮೀ ಹರತು ದುರಿತಂ ದೂರತೋ ಬಾಲಕೃಷ್ಣಃ ೬೯

"ಅವ್ವಾ ಕೃಷ್ಣ ಈಗ ಆಡುವುದಕ್ಕೆ ಹೋದವನು ಸಿಕ್ಕಿದ ಹಾಗೆ ಮಣ್ಣು ತಿಂದ." "ಹೌದೇ ಕೃಷ್ಣ ?" ಯಾರು ಹೇಳಿದರವ್ವ ?" "ಬಲರಾಮ." "ಸುಳ್ಳವ್ವ, ಬಾಯಿ ನೋಡು." "ಎಲ್ಲಿ ತೆರೆ." ಎಂದು ಮಗನ ಬಾಯನ್ನು ತೆರೆದು ಯಾರ ತಾಯಿ ಅದರಲ್ಲಿ ಸಮಸ್ತ ಜಗತ್ತನ್ನು ಕಂಡು ಆಶ್ಚರ್ಯವನ್ನು ಸಾರಿದಳೋ ಆ ಕೇಶವ ನಮ್ಮನ್ನು ಸಂರಕ್ಷಿಸಲಿ.

ನಕ್ಷತ್ರಗಳಲ್ಲಿ ಈ ಸವತಿ ಸ್ವಾತಿ ಮುಕ್ತಾಫಲವನ್ನು ಪಡೆದವಳಲ್ಲವೆ ಎಂಬ ರೋಷದಿಂದ ಆ ಸವತಿ ರೋಹಿಣಿ ಗೋಪ ತರುಣಿಯರ ಕುಚಗಳಲ್ಲಿ ಎಡೆ ಮಾಡಿಕೊಂಡ ನೀಲರತ್ನವನ್ನು ಹಡೆದಳು.

ಕೃಷ್ಣ ಕುಣಿಯುತ್ತ ಮಣಿಸ್ತಂಭದಲ್ಲಿ ಪ್ರತಿಬಿಂಬವಾಗಿ ಚೆನ್ನಾಗಿ ಕಾಣಲು ಮೃಗಾಕ್ಷಿ ಯಶೋದೆ ಎದುರಲ್ಲಿ ಸಾಕ್ಷಾತ್ ಇರುವಂತೆ ಕಂಡ ಕೃಷ್ಣನನ್ನು ನೋಡಿ ಒಂದಾಗಿದ್ದ ಬೆಣ್ಣೆಯನ್ನು ಎರಡು ಪಾಲು ಮಾಡಿದಳು.

ಏಳು ಕಂದ ; ಹಗಲು ಸಾರಿದೆ ; ನೂರುನೂರು ಕಾಲ ಬಾಳು ಕೃಷ್ಣ ; ಹೀಗೆ ಹೇಳುತ್ತ ಯಶೋದೆ ನಿಟ್ಟಿಸಿ ನೋಡಿದ ಮುಖದಾತನನ್ನು ಭಜಿಸುವೆವು.

ಹಸುಳೆಯೆಂದು ತಿಳಿದು ಗೋಪ ತರುಣಿಯರು ಮುತ್ತಿಕ್ಕಿದರೆ ಅವರ ತುಟಿಯನ್ನು ಪಾನಮಾಡಿ, ಅಪ್ಪಿಕೊಂಡರೆ ಅವರ ಕೊರಳನ್ನು ಹಿಡಿದಪ್ಪಿ, ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳಲು ಕೈಯಿಂದ ಅವರ ಒಳಮೈಯನ್ನು ಸೋಕಿದ, ಮೋಸಗಾರರೊಡೆಯ ಬಾಲಕೃಷ್ಣ ದೂರದಿಂದಲೇ ದುರಿತವನ್ನು ನಿವಾರಿಸಲಿ.

ಏತೇ ಲಕ್ಷ್ಮಣ ಜಾನಕೀವಿರಹಿತಂ ಮಾಂ ಖೇದಯಂತ್ಯಂಬುದಾ
ಮರ್ಮಾಣೀವ ಚ ಘಟ್ಟಯಂತ್ಯಲಮಮೀ ಕ್ರೂರಾಃ ಕದಂಬಾನಿಲಾಃ
ಇತ್ಥಂ ವ್ಯಾಹೃತ ಪೂರ್ವಜನ್ಮ ಚರಿತೋ ಯೋ ರಾಧಯಾ ವೀಕ್ಷಿತಃ
ಸೈರ್ಷ್ಯಂ ಶಂಕಿತಯಾ ಸ ನಃ ಸುಖಯತು ಸ್ವಪ್ನಾಯಮಾನೋ ಹರಿಃ

ಓಷ್ಠಂ ಮುಂಚ ಹರೇ ಬಿಭೇಮಿ ಭವತಾ ಪಾನೈರ್ಹತಾ ಪೂತನಾ
ಕಂಠಾಶ್ಲೇಷಮಮುಂ ಜಹೀಹಿ ದಲಿತಾವಾಲಿಂಗನೇನಾರ್ಜುನೌ
ಮಾದೇಹಿಚ್ಛುರಿತಂ ಹಿರಣ್ಯಕಶಿಪುರ್ನೀತೋ ನಖೈಃ ಪಂಚತಾಂ
ಇತ್ಥಂ ವಾರಿತ ರಾತ್ರಿಕೇಲಿರವತಾಲ್ಲಕ್ಷ್ಮ್ಯುಪಹಾಸಾದ್ಧರಿಃ ೭೧

ರಾಮೋ ನಾಮ ಬಭೂವ ಹುಂ ತದಬಲಾ ಸೀತೇತಿ ಹುಂ ತೌ ಪಿತುಃ
ವಾಚಾ ಪಂಚವಟೀವನೇ ವಿಹರತಸ್ತಾಮಾಹರದ್ರಾವಣಃ
ನಿದ್ರಾರ್ಥಂ ಜನನೀಂ ಕಥಾಮಿತಿ ಹರೇರ್ಹುಂಕಾರತಃ ಶೃಣ್ವತಃ
ಸೌಮಿತ್ರೇ ಕ್ವ ಧನುರ್ಧನುರ್ಧನುರಿತಿ ವ್ಯಗ್ರಾಗಿರಃ ಪಾತು ನಃ ೭೨

ಬಾಲೋಽಪಿ ಶೈಲೋದ್ಧರಣಾಗ್ರಪಾಣಿಃ
ನೀಲೋಽಪಿ ನೀರಂಧ್ರತಮಃ ಪ್ರದೀಪಃ
ಧೀರೋಽಪಿ ರಾಧಾನಯನಾವಬದ್ಧೋ
ಜಾರೋಽಪಿ ಸಂಸಾರಹರಃ ಕುತಸ್ತ್ವಂ ೭೩

ಬಾಲಾಯ ನೀಲವಪುಷೇ ನವಕಿಂಕಿಣೀಕ
ಜಾಲಾಭಿರಾಮ ಜಘನಾಯ ದಿಗಂಬರಾಯ
ಶಾರ್ದೂಲ ದಿವ್ಯನಖ ಭೂಷಣ ಭೂಷಿತಾಯ
ನಂದಾತ್ಮಜಾಯ ನವನೀತ ಮುಷೇ ನಮಸ್ತೇ ೭೪

ಲಕ್ಷ್ಮಣ, ಜಾನಕಿಯನ್ನು ಕಳೆದುಕೊಂಡ ನನ್ನನ್ನು ಈ ಮೋಡಗಳು ಖೇದ ಗೊಳಿಸುತ್ತವೆ. ಕದಂಬಾನಿಲಗಳು ಕ್ರೂರವಾಗಿ ಅಂತರ್ಯವನ್ನು ಮರ್ದಿಸು ವಂತಿವೆ. ಹೀಗೆಂದು ಪೂರ್ವಜನ್ಮ ಚರಿತವನ್ನು ನುಡಿದು, ರಾಧೆ ಈರ್ಷೆಯಿಂದ ಶಂಕೆಗೊಂಡು ತನ್ನನ್ನು ನೋಡುವಂತೆ ಮಾಡಿದ, ಸ್ವಪ್ನಾಯಮಾನ ಹರಿ ನಮ್ಮನ್ನು ಸುಖಪಡಿಸಲಿ.

ತುಟಿಯನ್ನು ಬಿಡು ಹರಿ, ಕುಡಿದು ಪೂತನಿಯನ್ನು ಕೊಂದೆ ನೀನು ; ಕೊರಳ ಪ್ಪುಗೆಯನ್ನು ಒಡನೆ ಬಿಡು. ಅಪ್ಪಿ ಅರ್ಜುನ ವೃಕ್ಷಗಳನ್ನು ನೀನು ಮುರಿದೆ ; ಉಗುರಿಂದ ಕೀಸದಿರು, ಹಿರಣ್ಯಕಶಿಪು ನಿನ್ನುಗುರಿಂದ ಸಾವಿಗೆ ಸಾರಿದನು ; ಹೀಗೆಂದು ಲಕ್ಷ್ಮಿ ರಾತ್ರಿಕೇಲಿಯಲ್ಲಿ ಅಪಹಾಸ್ಯದಲ್ಲಿ ತಡೆದ ಹರಿ ರಕ್ಷಿಸಲಿ.

"ರಾಮ ಎಂಬಾತ ಇದ್ದನು." "ಹುಂ." "ಸೀತೆ ಎಂಬಾಕೆ ಅವನ ಸತಿ." "ಹುಂ." "ತಂದೆಯ ಮಾತಿನಂತೆ ಅವರು ಪಂಚವಟೀ ವನದಲ್ಲಿ ವಿಹರಿಸು ತ್ತಿದ್ದರು. ಆಕೆಯನ್ನು ರಾವಣ ಅಪಹರಿಸಿದನು." ನಿದ್ದೆ ಮಾಡಿಸಲು ತಾಯಿ ಹೇಳುತ್ತಿದ್ದ ಕಥೆಯನ್ನು ಹೀಗೆ ಹುಂ ಹುಂ ಎಂದು ಕೇಳುತ್ತಿದ್ದ ಹರಿಯು "ಸೌಮಿತ್ರಿ, ಬಿಲ್ಲೆಲ್ಲಿ ? ಬಿಲ್ಲೆಲ್ಲಿ ? ಬಿಲ್ಲೆಲ್ಲಿ ?" ಎಂದ ವ್ಯಗ್ರವಾದ ನುಡಿಗಳು ನಮ್ಮನ್ನು ಪಾಲಿಸಲಿ.

ಇದು ಹೇಗೆ, ನೀನು ಬಾಲನಾದರೂ ಕೈಯ ಕೊನೆಯಲ್ಲಿ ಗೋವರ್ಧನನನ್ನು ಎತ್ತಿ ಹಿಡಿದಿರುವೆ, ಕರಿಯ ಬಣ್ಣದವನಾದರೂ ಎಡೆಯಿಲ್ಲದ ಕಗ್ಗತ್ತಲಲ್ಲಿ ದೀಪ ವಾಗಿರುವೆ, ಧೀರನಾದರೂ ರಾಧೆಯ ಕಣ್ಣಿಗೆ ಕಟ್ಟುಬಿದ್ದಿರುವೆ, ಜಾರನಾದರೂ ಸಂಸಾರದಿಂದ ಬಿಡಿಸುವನಾಗಿರುವೆ ?

ನೀಲ ವಿಗ್ರಹನಾದ ಬಾಲ, ಹೊಸವಾದ ಕಿರಗಂಟೆಗಳ ಸಾಲಿಂದ ಸುಂದರ ವಾಗಿರುವ ಸೊಂಟದ ದಿಗಂಬರ, ಚೆಂದದ ಹುಲಿಯುಗುರ ತೊಡವಿನಿಂದ ಭೂಷಿತನಾದ ನಂದಕುಮಾರ, ನವನೀತಚೋರ, ನಿನಗೆ ನಮಸ್ಕಾರ.

ಸವ್ಯೇ ಪಾಯಸಭಕ್ತಮಾಹಿತರಸಂ ಬಿಭ್ರನ್ಮುದಾ ದಕ್ಷಿಣೇ
ಪಾಣೌ ಶಾರದಚಂದ್ರಮಂಡಲನಿಭಂ ಹೈಯಂಗವೀನಂ ವರ್ಹ
ಕಂಠೇ ಕಲ್ಪಿತ ಪುಂಡರೀಕನಖಮಪ್ಯುದ್ದಾಮದೀಪ್ತಂ ದಧತ್
ದೇವೋ ದಿವ್ಯದಿಗಂಬರೋ ದಿಶತು ನಃ ಸೌಖ್ಯಂ ಯಶೋದಾಶಿಶುಃ ೭೫

ಕಿಂಕಿಣಿ ಕಿಣಿಕಿಣಿ ರಭಸೈಃ
ಅಂಗಣಭುವಿ ರಿಂಗಣೈಃ ಸದಾಟನ್ತಂ
ಕುಂಕುಣುಕುಣು ಪದಯುಗಲಂ
ಕಂಕಣ ಕರಭೂಷಣಂ ಹರಿಂ ವಂದೇ ೭೬

ಸಂಬಾಧೇ ಸುರಭೀಣಾಂ
ಅಂಬಾಮಾಯಾಸಯಂತಮನುಯಾಂತೀಂ
ಲಂಬಾಲಕಮವಲಂಬೇ
ತಂ ಬಾಲಂ ತನುವಿಲಗ್ನ ಜಂಬಾಲಂ ೭೭

ಅಂಚಿತ ಪಿಂಛಾಚೂಡಂ
ಸಂಚಿತ ಸೌಜನ್ಯ ವಲ್ಲವೀವಲಯಂ
ಅಧರಮಣಿ ನಿಹಿತ ವೇಣುಂ
ಬಾಲಂ ಗೋಪಾಲಮನಿಶಮವಲಂಬೇ ೭೮

ಪ್ರಹ್ಲಾದ ಭಾಗಧೇಯಂ
ನಿಗಮಾಂತ ಮಹಾಗುಹಾಂತರಾಧೇಯಂ
ನರಹರಿ ಪದಾಭಿಧೇಯಂ
ವಿಬುಧವಿಧೇಯಂ ಮಮಾನುಸಂಧೇಯಂ ೭೯

ಎಡಗೈಯಲ್ಲಿ ರಸಬೆರಸಿದ ಹಾಲೋಗರವನ್ನೂ ಬಲಗೈಯಲ್ಲಿ ಶರತ್ಕಾಲದ ಚಂದ್ರನ ಮಂಡಲದಂತೆಸೆವ ಹಸುವಿನ ಹಾಲ ಬೆಣ್ಣೆಯನ್ನೂ ಸಂತುಷ್ಟನಾಗಿ ಹಿಡಿದು ಉದ್ದಾಮ ದೀಪ್ತಿಯ ವ್ಯಾಘ್ರನಖಾಭರಣವನ್ನು ಕೊರಳಲ್ಲಿ ಧರಿಸಿದ ದಿವ್ಯ ದಿಗಂಬರದೇವ, ಯಶೋದಾಶಿಶು, ನಮಗೆ ಸೌಖ್ಯವನ್ನು ನೀಡಲಿ.

ಕಿಂಕಿಣಿಯ ಕಿಣಿಕಿಣಿ ರಭಸದಿಂದ ಅಂಗಳದ ನೆಲದಲ್ಲಿ ಸದಾ ಸುತ್ತಿಸುಳಿಯುವ, ಕುಂಕುಣುಕುಣು ಎಂಬ ಗೆಜ್ಜೆಯ ಕಾಲುಗಳ, ಕಂಕಣ ಕರಭೂಷಣನಾದ ಹರಿಯನ್ನು ವಂದಿಸುತ್ತೇನೆ.

ಅಟ್ಟಿಬರುವ ತಾಯನ್ನು ಹಸುಗಳು ಗುಂಪಿನಲ್ಲಿ ಆಯಾಸಪಡಿಸುವ, ಆ ಕೊಳೆಯಂಟಿದ ಮೈಯ, ನಿಡುಗುರುಳ, ಎಳೆಯನನ್ನು ಆಶ್ರಯಿಸುತ್ತೇನೆ,

ನವಿಲಗರಿ ತಲೆತೊಡವನ್ನುಧರಿಸಿ, ತುಟಿಯ ಕೆನ್ನಮಣಿಯಲ್ಲಿ ಕೊಳಲನ್ನಿರಿಸಿ, ಸೌಜನ್ಯಸಂಗ್ರಹವಾದ ಗೊಲ್ಲ ಚೆಲುವೆಯರಿಂದ ಆವೃತನಾದ, ಗೋಪಾಲನಾದ ಬಾಲನನ್ನು ಅನಿಶ ಆಶ್ರಯಿಸುತ್ತೇನೆ.

ಪ್ರಹ್ಲಾದನ ಸಂಪತ್ತು, ವೇದಾಂತದ ಮಹಾಗುಹೆಯ ಒಳಗಿನೊಳಗೆ ಉಕ್ತವಾದ ವಸ್ತು, ನರಹರಿ ಎಂಬ ಪದದಿಂದ ಹೆಸರಿಸುವಂಥದು, ದೇವತೆಗಳಿಂದ ಓಲಗಿಸಿಕೊಳ್ಳುವುದು ಯಾವುದು, ಅದು ನನಗೆ ಉಪಾಸನಾರ್ಹ ತತ್ವ.

ಸಂಸಾರೇ ಕಿಂ ಸಾರಂ
ಕಂಸಾರೇಶ್ಚರಣ ಯುಗಲ ಪರಿವಸನಂ
ಜ್ಯೋತಿಃ ಕಿಮಂಧಕಾರೇ
ಯದಂಧಕಾರೇರನುಸ್ಮರಣಂ ೮೦

ಕಲಶ ನವನೀತ ಚೋರೇ
ಕಮಲಾದೃಕ್ಕುಮುದ ಚಂದ್ರಿಕಾ ಪೂರೇ
ವಿಹರತು ನಂದಕುಮಾರೇ
ಚೇತೋ ಮಮ ಗೋಪಸುಂದರೀಜಾರೇ ೮೧

ಕಸ್ತ್ವಂಬಾಲ ಬಲಾನುಜಃ ಕಿಮಿಹ ತೇ ಮನ್ಮಂದಿರಾಶಂಕಯಾ
ಯುಕ್ತಂ ತನ್ನವನೀತಪಾತ್ರವಿವರೇ ಹಸ್ತಂ ಕಿಮರ್ಥಂ ನ್ಯಸೇಃ
ಮಾತಃ ಕಂಚನ ವತ್ಸಕಂ ಮೃಗಯಿತುಂ ಮಾಗಾ ವಿಷಾದಂ ಕ್ಷಣಾತ್
ಇತ್ಯೇವಂ ವರವಲ್ಲವೀ ಪ್ರತಿವಚಃ ಕೃಷ್ಣಸ್ಯ ಪುಷ್ಣಾತುನಃ ೮೨

ಗೋಪಾಲಾಜಿರ ಕರ್ದಮೇ ವಿಹರಸೇ ವಿಪ್ರಾಧ್ವರೇ ಲಜ್ಜಸೇ
ಬ್ರೂಷೇ ಗೋಧನ ಹುಂಕೃತೈಃ ಸ್ತುತಿಶತೈರ್ಮೌನಂ ವಿಧತ್ಸೇ ವಿದಾಂ
ದಾಸ್ಯಂ ಗೋಕುಲಪುಂಶ್ಚಲೀಷು ಕುರುಷೇ ಸ್ವಾಮ್ಯಂ ನ ದಾಂತಾತ್ಮಸು
ಜ್ಞಾತಂ ಕೃಷ್ಣ ತವಾಂಘ್ರಿಪಂಕಜಯುಗಂ ಪ್ರೇಮಾಚಲಂಮಂಜುಲಂ

ನಮಸ್ತಸ್ಮೈ ಯಶೋದಾಯಾ ದಾಯಾದಾಯಾಸ್ತು ತೇಜಸೇ
ಯದ್ಧಿ ರಾಧಾಮುಖಾಂಭೋಜಂ ಭೋಜಂಭೋಜಂ ವ್ಯವರ್ಧತ ೮೪

ಸಂಸಾರದಲ್ಲಿ ಸಾರ ಯಾವುದು ? ಕಂಸಾರಿಯ ಚರಣಯುಗಲದ ಶುಶ್ರೂಷೆ ; ಅಂಧಕಾರದಲ್ಲಿ ಬೆಳಕು ಯಾವುದು ? ಅಂಧಕಾರಿಯ ಅನುಸ್ಮರಣೆ ಎನ್ನುವುದು.

ಗಡಿಗೆಯ ಬೆಣ್ಣೆಯ ಕಳ್ಳ, ಲಕ್ಷ್ಮಿಯ ಕಣ್ಣನೈದಿಲೆಗೆ ತಿಂಗಳ ಹೊಳೆಯಾದವನು, ಗೋಪಸುಂದರಿಯರ ಜಾರ, ನಂದಕುಮಾರನಲ್ಲಿ ನನ್ನ ಚೇತನ ವಿಹರಿಸಲಿ.

"ಯಾರೊ ನೀನು ಹುಡುಗ ?" "ಬಲನ ತಮ್ಮ." "ಇಲ್ಲಿ ನಿನಗೇನು ಕೆಲಸ ?" "ನಮ್ಮ ಮನೆ ಎಂತ ತಿಳಿದೆ." "ಒಳ್ಳೆಯದು, ಆದರೆ ಬೆಣ್ಣೆಯ ಗಡಿಗೆಯ ಬಾಯಲ್ಲಿ ಏಕೆ ಕೈ ಇರಿಸಿದೀಯೆ ?" "ತಾಯಿ, ಬೇರೆ ಏನೂ ಅಲ್ಲ ; ಒಂದು ಕರುವನ್ನು ಹುಡುಕುವುದಕ್ಕಾಗಿ. ಒಂದು ಕ್ಷಣ ವಿಷಾದ ಪಡದೆ ತಡೆ." ಹೀಗೆ ಹಿರಿಯ ಗೊಲ್ಲತಿಗೆ ಕೃಷ್ಣ ಹೇಳಿದ ಉತ್ತರ ನಮ್ಮನ್ನು ಪೋಷಿಸಲಿ.

ಗೋಪಾಲರ ಅಂಗಳದ ಕೆಸರಲ್ಲಿ ವಿಹರಿಸುತ್ತೀಯೆ ; ವಿಪ್ರರ ಅಧ್ವರದಲ್ಲಿ ಸೇರಲು ಸಂಕೋಚಪಡುತ್ತೀಯೆ. ಗೋವುಗಳು ಹುಂ ಎಂದು ಕರೆದರೆ ಮಾತನಾಡುತ್ತೀಯೆ ; ಬಲ್ಲವರೆಂಬವರ ನೂರು ಸ್ತುತಿಗೆ ಮೌನವನ್ನು ಧರಿಸುತ್ತೀಯೆ. ಗೋಕುಲದ ಪುಂಶ್ಚಲಿಯರಲ್ಲಿ ದಾಸ್ಯಮಾಡುತ್ತೀಯೆ ; ದಾಂತಾತ್ಮರಲ್ಲಿ ಒಡೆತನವನೊಲ್ಲೆ. ತಿಳಿಯಿತು, ಕೃಷ್ಣ, ನಿನ್ನ ಅಂಘ್ರಿಪಂಕಜಯುಗ ಮಂಜುಲ ಪ್ರೇಮಾಚಲ.

ರಾಧೆಯ ಮುಖವೆಂಬ ಕಮಲವನ್ನು ಅನುಭವಿಸಿ ಅನುಭವಿಸಿ ವೃದ್ಧಿಹೊಂದುವುದಾದ ಯಶೋದಾಕುಮಾರನಾದ ಆ ತೇಜಸ್ಸಿಗೆ ನಮಸ್ಕಾರ.

ಅವತಾರಾಸ್ಸಂತ್ವನ್ಯೇ
ಸರಸಿಜನಯನಸ್ಯ ಸರ್ವತೋ ಭದ್ರಾಃ
ಕೃಷ್ಣಾದನ್ಯಃ ಕೋ ವಾ
ಪ್ರಭವತಿ ಗೋಗೋಪಗೋಪಿಕಾ ಮುಕ್ತ್ಯೈ‌ ॥ ೮೫

ಮಧ್ಯೇ ಗೋಕುಲಮಂಡಲಂ ಪ್ರತಿದಿಶಂಚಾಂಭಾರವೇಜೃಂಭಿತೇ
ಪ್ರಾತರ್ದೋಹಮಹೋತ್ಸವೇ ನವಘನಶ್ಯಾಮಂ ರಣನ್ನೂಪುರಂ
ಫಾಲೇ ಬಾಲವಿಭೂಷಣಂ ಕಟಿರಣತ್ಸಂಕಿಂಕಿಣೀಮೇಖಲಂ
ಕಂಠೇ ವ್ಯಾಘ್ರನಖಂ ಚ ಶೈಶವಕಲಾಕಲ್ಯಾಣಕಾರ್ತ್ಸ್ನ್ಯಂ ಭಜೇ ೮೬

ಸಜಲ ಜಲದ ನೀಲಂ ದರ್ಶಿತೋದಾರ ಲೀಲಂ
ಕರತಲ ಧೃತ ಶೈಲಂ ವೇಣುವಾದ್ಯೈ ರಸಾಲಂ
ವ್ರಜಜನ ಕುಲಪಾಲಂ ಕಾಮಿನೀ ಕೇಲಿ ಲೋಲಂ
ಕಲಿತ ಲಲಿತ ಮಾಲಂ ನೌಮಿ ಗೋಪಾಲ ಬಾಲಂ ೮೭

ಸ್ಮಿತ ಲಲಿತ ಕಪೋಲಂ ಸ್ನಿಗ್ಧ ಸಂಗೀತ ಲೋಲಂ
ಲಲಿತ ಚಿಕುರಜಾಲಂ ಚೌರ್ಯ ಚಾತುರ್ಯ ಲೀಲಂ
ಶತಮುಖ ರಿಪು ಕಾಲಂ ಶಾತಕುಂಭಾಭ ಚೇಲಂ
ಕುವಲಯದಲ ನೀಲಂ ನೌಮಿ ಗೋಪಾಲ ಬಾಲಂ ೮೮

ಮುರಲಿ ನಿನದ ಲೋಲಂ ಮುಗ್ಧ ಮಾಯೂರ ಚಾಲಂ
ದಲಿತ ದನುಜಜಾಲಂ ಧನ್ಯ ಸೌಜನ್ಯಲೀಲಂ
ಪರಹಿತ ನವ ಹೇಲಂ ಪದ್ಮಸದ್ಮಾನುಕೂಲಂ
ನವ ಜಲಧರ ನೀಲಂ ನೌಮಿ ಗೋಪಾಲ ಬಾಲಂ ೮೯

ಸರ್ವತಃ ಭದ್ರಗಳಾದ ಇತರ ಅವತಾರಗಳು ಸರಸಿಜನಯನ ವಿಷ್ಣುವಿನವು ಇರಲಿ : ಗೋಗೋಪಗೋಪಿಕೆಯರಿಗೆ ಮುಕ್ತಿ ನೀಡಲು ಶಕ್ತವಾದದ್ದು ಕೃಷ್ಣನ ಹೊರತು ಬೇರೆ ಯಾವುದು ?

ಬೆಳಗಾಗ ಹಾಲು ಕರೆಯುವ ವೇಳೆ ದಿಕ್ಕು ದಿಕ್ಕಿನಲ್ಲೂ ಅಂಭಾ ಧ್ವನಿ ಮೊಳಗುತ್ತಿರಲು, ನಂದವ್ರಜದ ಮಧ್ಯೆ, ಸದ್ದು ಮಾಡುವ ನೂಪುರ, ಹಣೆಯಲ್ಲಿ ಹಸುಳೆ ತೊಡವು, ಸೊಂಟದಲ್ಲಿ ಸದ್ದು ಮಾಡುವ ಚೆಲುವ ಕಿರಿಗೆಜ್ಜೆಗಳ ಉಡಿದಾರ, ಕೊರಳಲ್ಲಿ ಹುಲಿಯುಗುರು, ಇವುಗಳ, ಹೊಸ ಮೋಡದ ಶ್ಯಾಮವರ್ಣದ ಎಳೆಯ, ಚೆಲುವ ಮಂಗಳದ ಪೂರ್ಣಮೂರ್ತಿಯನ್ನು ಭಜಿಸುತ್ತೇನೆ.

ಮಳೆಕರೆದಿಲ್ಲದ ಮೋಡದಂತೆ ಕರಿಯ ಬಣ್ಣದವನು, ಉದಾರ ಲೀಲೆಯನ್ನು ತೋರಿದವನು, ಅಂಗೈಯಲ್ಲಿ ಮಲೆಯನ್ನು ಹಿಡಿದವನು, ಕೊಳಲ ನುಡಿಯ ರಸ ತುಂಬಿರುವವನು, ಗೋಕುಲದ ಜನರ ಕುಲವನ್ನು ಪಾಲಿಸುವವನು, ಕಾಮಿನಿಯರೊಡನಾಟದಲ್ಲಿ ಲೋಲನಾಗಿರುವನು, ಲಲಿತ ಮಾಲೆಯನ್ನು ಧರಿಸಿರುವವನು, ಆದ ಗೋಪಾಲನನ್ನು ವಂದಿಸುತ್ತೇನೆ.

ಅರೆನಗೆಯಿಂದ ಚೆಲುವಾದ ಕೆನ್ನೆಯ, ಚೆಲುವ ಕುರುಳನೆರವಿಯ, ಕಳುವ ಚಾತುರ್ಯದ ಆಟದ, ನೈದಿಲೆಯ ದಳದಂತೆ ನೀಲ, ಮಧುರ ಸಂಗೀತ ಲೋಲ ಆದ, ಸುರೇಂದ್ರನ ಹಗೆಗಳ ಮೃತ್ಯು, ಚಿನ್ನದ ಬಣ್ಣದ ವಸ್ತ್ರದ ಗೋಪಾಲ ಬಾಲನನ್ನು ವಂದಿಸುತ್ತೇನೆ.

ಕೊಳಲ ದನಿಯಲ್ಲಿ ಆಸಕ್ತನಾಗಿ ಚೆಂದದ ನವಿಲಗರಿಯನ್ನು ತಳೆದಿರುವವನು, ದನುಜಸಮುದಾಯವನ್ನು ಸೀಳಿ ಧನ್ಯವಾದ ಸೌಜನ್ಯಲೀಲೆಯನ್ನಾಡಿದವನು, ಹೆರವರಿಗೆ ಒಳಿತನ್ನೆಸಗುವುದೇ ವಿಲಾಸ ಆದವನು, ಪದ್ಮಸದ್ಮಳಾದ ಲಕ್ಷ್ಮಿಗೆ ಅನುಕೂಲನಾದವನು, ಹೊಸ ಮೋಡದಂತೆ ನೀಲನು, ಆದ ಗೋಪಾಲಬಾಲನನ್ನು ವಂದಿಸುತ್ತೇನೆ.

ಸರಸ ಗುಣ ನಿಕಾಯಂ ಸಚ್ಚಿದಾನಂದ ಕಾಯಂ
ಶಮಿತ ಸಕಲ ಮಾಯಂ ಸತ್ಯ ಲಕ್ಷ್ಮೀ ಸಹಾಯಂ
ಶಮ ದಮ ಸಮುದಾಯಂ ಶಾಂತ ಸರ್ವಾಂತರಾಯಂ
ಸುಹೃದಯ ಜನದಾಯಂ ನೌಮಿ ಗೋಪಾಲ ರಾಯಂ ೯೦

ಲಕ್ಷ್ಮೀಕಲತ್ರಂ ಲಲಿತಾಬ್ಜನೇತ್ರಂ
ಪೂರ್ಣೇಂದುವಕ್ತ್ರಂ ಪುರುಹೂತಮಿತ್ರಂ
ಕಾರುಣ್ಯಪಾತ್ರಂ ಕಮನೀಯ ಗಾತ್ರಂ
ವಂದೇ ಪವಿತ್ರಂ ವಸುದೇವಪುತ್ರಂ ೯೧

ಮದಮಯಮದಮಯದುರಗಂ
ಯಮುನಾಮವತೀರ್ಯ ವೀರ್ಯಶಾಲೀ (೨ಃ
ಮಮರತಿಮಮರತಿರಸ್ಕೃತಿ
ಶಮನಪರಃ ಸ ಕ್ರಿಯಾತ್ಕೃಷ್ಣಃ ೯೨

ಮೌಲೌ ಮಾಯೂರಬರ್ಹಂ ಮೃಗಮದ ತಿಲಕಂ ಚಾರು ಲಲಾಟಪಟ್ಟೇ
ಕರ್ಣದ್ವಂದ್ವೇ ಚ ತಾಲೀ ದಲಮತಿಮೃದುಲಂ ಮೌಕ್ತಿಕಂ ನಾಸಿಕಾಯಾಂ
ಹಾರೋ ಮಂದಾರಮಾಲಾ ಪರಿಮಳಭರಿತೇ ಕೌಸ್ತುಭಸ್ಯೋಪಕಂಠೇ
ಪಾಣೌ ವೇಣುಶ್ಚ ಯಸ್ಯ ವ್ರಜಯುವತಿಯುತಃ ಪಾತು ಪೀತಾಂಬರೋ ನಃ

ಮುರಾರಿಣಾ ವಾರಿವಿಹಾರಕಾಲೇ
ಮೃಗೇಕ್ಷಣಾನಾಂ ಮೃಷಿತಾಂಶುಕಾನಾಂ
ಕರದ್ವಯಂ ವಾ ಕಚಸಂಹತಿರ್ವಾ
ಪ್ರಮೀಲನಂ ವಾ ಪರಿಧಾನ ಮಾಸೀತ್ ೯೪

ಸಕಸಗುಣ ಸಮುದಾಯನಾದ ಸಚ್ಚಿದಾನಂದಮೂರ್ತಿ, ಸಕಲ ಮಾಯೆಯನ್ನು ಅಡಗಿಸಿದವನು, ಸತ್ಯ ಲಕ್ಷ್ಮಿಗೆ ಸಹಾಯನಾದವನು, ಶಮದಮ ತುಂಬಿರುವನು, ಎಲ್ಲ ಅಂತರಾಯಗಳು ಶಾಂತವಾಗಿರುವವನು, ಒಳ್ಳೆಯ ಮನದ ಜನರ ದಾತನು, ಇದೆಲ್ಲ ಆದ ಗೋಪಾಲರ ಸಂಪತ್ತನ್ನು ವಂದಿಸುತ್ತೇನೆ.

ಲಕ್ಷ್ಮಿಯನ್ನು ಕಲತ್ರವಾಗಿ ಉಳ್ಳ ಚೆಲುವತಾವರೆಗಣ್ಣ, ಪೂರ್ಣಚಂದ್ರನಂತ ಮುಖದ, ಇಂದ್ರನ ಮಿತ್ರ, ಕರುಣೆಯ ಆಕರ, ಕಮನೀಯ ಗಾತ್ರ. ಪವಿತ್ರ, ಆದ ವಸುದೇವ ಪುತ್ರನನ್ನು ವಂದಿಸುತ್ತೇನೆ.

ಮದದಿಂದ ತುಂಬಿದ್ದ ಸರ್ಪನನ್ನು ಯಮುನೆಯೊಳಕ್ಕೆ ಇಳಿದು ದಮಿಸಿದ ವೀರ್ಯಶಾಲಿ, ದೇವತೆಗಳ ತಿರಸ್ಕಾರವನ್ನು ಅಡಗಿಸುವವನು, ಯಾರು ಆ ಕೃಷ್ಣ ನನ್ನ ಚೇತನಕ್ಕೆ ಸುಖವನ್ನೆಸಗಲಿ.

ಮೌಳಿಯಲ್ಲಿ ನವಿಲಗರಿ, ಸುಂದರವಾದ ಹಣೆಯ ಮೇಲೆ ಕಸ್ತೂರಿ ತಿಲಕ, ಎರಡೂ ಕಿವಿಯಲ್ಲಿ ತುಂಬು ಮೃದುವಾದ ತಾಳೆಯದಳ, ಮೂಗಿನಲ್ಲಿ ಮುತ್ತು, ಕೌಸ್ತುಭ ಮಣಿಯ ಪಕ್ಕದಲ್ಲಿ ಮಂದಾರಮಾಲೆಯ ಪರಿಮಲದಿಂದ ತುಂಬಿದ ಹಾರ, ಕೈಯಲ್ಲಿ ಕೊಳಲು, ಉಳ್ಳ ಗೋಪ ತರುಣೀ ಸಮೇತನಾದ ಪೀತಾಂಬರನು ನಮ್ಮನ್ನು ಪಾಲಿಸಲಿ.

ಜಲಕೇಳಿಯ ವೇಳೆ ಮುರಾರಿ ಸೀರೆಗಳನ್ನು ಕದ್ದ ಎರಳೆಗಣ್ಣ ಚೆಲುವೆಯರಿಗೆ ಎರಡು ಕೈ, ಇಲ್ಲ ತಲೆಗೂದಲ ಸಂಹತಿ, ಅಥವಾ ಕಣ್ಣು ಮುಚ್ಚಿಕೊಳ್ಳುವುದು; ಅಷ್ಟೆ ವಸ್ತ್ರ ಆಯಿತು,

ಯಾಸಾಂ ಗೋಪಾಂಗನಾನಾಂ ಲಸದಸಿತತರಾಲೋಲ ಲೀಲಾ ಕಟಾಕ್ಷಾ
ಯನ್ನಾಸಾ ಚಾರು ಮುಕ್ತಾಮಣಿ ರುಚಿನಿಕರ ವ್ಯಾಜಗಂಗಾ ಪ್ರವಾಹೇ
ಮೀನಾಯಂತೇಽಪಿ ತಾಸಾಮತಿರಭಸ ಚಲಚ್ಚಾರು ಲೀಲಾಲಕಾನ್ತಾ
ಭೃಂಗಾಯಂತೇ ಯದಂಘ್ರಿದ್ವಯಸರಸಿರುಹೇ ಪಾತು ಪೀತಾಂಬರೋ ನಃ ೯೫

ಯದ್ವೇಣು ಶ್ರೇಣಿರೂಪಸ್ಥಿತ ಸುಷಿರಮುಖೋದ್ಗೀರ್ಣ ನಾದಪ್ರಭಿನ್ನಾ
ಏಣಾಕ್ಷ್ಯಸ್ತತ್ಕ್ಷಣೇನ ತ್ರುಟಿತ ನಿಜಪತಿಪ್ರೇಮಬಂಧಾ ಬಭೂವುಃ
ಅಸ್ತವ್ಯಸ್ತಾಲಕಾಂತಾಃ ಸ್ಫುರದಧರ ಕುಚದ್ವಂದ್ವ ನಾಭಿ ಪ್ರದೇಶಾಃ
ಕಾಮಾವೇಶ ಪ್ರಕಲ್ಪ್ಯ ಪ್ರಕಟಿತ ಪುಲಕಾಃ ಪಾತು ಪೀತಾಂಬರೋ ನಃ ೯೬

ದೇವಕ್ಯಾ ಜಠರಾಕರೇ ಸಮುದಿತಃ ಕ್ರೀತೋ ಗವಾಂ ಪಾಲಿನಾ
ನಂದೇನಾನಕದುಂದುಭೇರ್ನಿಜಸುತಾ ಪಣ್ಯೇನ ಪುಣ್ಯಾತ್ಮನಾ
ಗೋಪಾಲಾವಲಿ ಮುಗ್ಧ ಹಾರ ತರಲೋ ಗೋಪೀಜನಾಲಂಕೃತಿಃ
ಸ್ಥೇಯಾದ್ವೋ ಹೃದಿ ಸಂತತಂ ಸ ಮಧುರಃ ಕೋಽಪೀಂದ್ರನೀಲೋಮಣಿಃ ೯೭

ಪೀಠೇ ಪೀಠನಿಷಣ್ಣ ಬಾಲಕಗಲೇ ತಿಷ್ಠನ್ ಸ ಗೋಪಾಲಕೋ
ಯಂತ್ರಾಂತಃ ಸ್ಥಿತ ದುಗ್ಧಭಾಂಡಮಪವಿಧ್ಯಾಚ್ಛಾದ್ಯ ಘಂಟಾರವಂ
ವಕ್ತ್ರೋಪಾಂತ ಕೃತಾಂಜಲಿಃ ಕೃತಶಿರಃಕಂಪಂ ಪಿಬನ್ ಯಃ ಪಯಃ
ಪಾಯಾದಾಗತ ಗೋಪಿಕಾ ನಯನಯೋರ್ಗಂಡೂಷ ಫೂತ್ಕಾರಕೃತ್ ೯೮

ಯಜ್ಞೈರೀಜಿಮಹೇ ಧನಂ ದದಿಮಹೇ ಪಾತ್ರೇಷು ನೂನಂ ವಯಂ
ವೃದ್ಧಾನ್ ಭೋಜಿಮಹೇ ತಪಶ್ಚ ಕೃಮಹೇ ಜನ್ಮಾಂತರೇ ದುಶ್ಚರಂ
ಯೇನಾಸ್ಮಾಕಮಭೂದನನ್ಯಸುಲಭಾ ಭಕ್ತಿರ್ಭವ ದ್ವೇಷಿಣೀ
ಚಾಣೂರದ್ವಿಷಿ ಭಕ್ತಕಲ್ಮಷ ಮುಷಿ ಶ್ರೇಯಃಪುಷಿ ಶ್ರೀಜುಷಿ ೯೯

ಯಾರ ಮೂಗಿನ ಚಾರು ಮುಕ್ತಾಮಣಿಯು ಹೊಳಪಿನ ಸ್ತೋಮದ ವ್ಯೋಮ ಗಂಗಾ ಪ್ರವಾಹದಲ್ಲಿ ಯಾವ ಆ ಗೋಪಾಂಗನೆಯರ ಹೊಳೆಯುವ ತುಂಬು ಕಪ್ಪಿನ ಆ ಲೋಲಲೀಲಾ ಕಟಾಕ್ಷಗಳು ಮೀನುಗಳಾದವು, ಹಾಗೆಯೇ ಅತಿ ರಭಸದಿಂದ ಅಲೆಯುವ ಅವರ ಚೆಂದದ ಲೀಲಾಲಕಗಳ ಕೊನೆಗಳು ಯಾರ ಪಾದದ್ವಯದ ಕಮಲದಲ್ಲಿ ತುಂಬಿಗಳಾದವು, ಆ ಪೀತಾಂಬರನು ನಮ್ಮನ್ನು ಪಾಲಿಸಲಿ.

ಯಾರ ಕೊಳಲ ಸಾಲಾಗಿ ರೂಪುಗೊಂಡ ರಂಧ್ರಗಳ ಮುಖದಿಂದ ಹೊರಟ ಸ್ವರದಿಂದ ಉಬ್ಬಿ ಏಣಾಕ್ಷಿಯರು ಆ ಕ್ಷಣವೇ ತಮ್ಮ ಪುರುಷರ ಮೇಲಣ ಪ್ರೇಮವೆಂಬ ಬಂಧದಿಂದ ಬಿಡುಗಡೆ ಹೊಂದಿ. ಅಸ್ತವ್ಯಸ್ತವಾದ ಮುಂಗುರುಳು, ಅದುರುವ ತುಟಿ, ಕುಚದ್ವಂದ್ವ, ನಾಭಿಪ್ರದೇಶ, ಕಾಮಾವೇಶದಿಂದ ಅತಿಶಯ ವಾಗಿ ಪುಲಕ, ಇವನ್ನು ಪಡೆದರು, ಆ ಪೀತಾಂಬರನು ನಮ್ಮನ್ನು ಪಾಲಿಸಲಿ.

ದೇವಕೀದೇವಿಯು ಗರ್ಭಸಾಗರದಲ್ಲಿ ಉದಿಸಿದ್ದು, ಗೋಗಳ ಪಾಲಕ ಪುಣ್ಯಾತ್ಮ ನಾದ ನಂದನು ತನ್ನ ಮಗಳನ್ನು ಕೊಟ್ಟು ವಸುದೇವನಿಂದ ಕೊಂಡದ್ದು, ಗೋಪಳ ಬಾಲರ ಚೆಂದದ ಹಾರದ ನಾಯಕ ಮಣಿಯಾದದ್ದು, ಗೋಪಿಯರಿಗೆ ಅಲಂಕಾರ ವಾದದ್ದು, ಅದು ಯಾವುದೋ ಇಂದ್ರನೀಲಮಣಿ ಉಂಟಲ್ಲ, ಹೃದ್ಯವಾದದ್ದು, ಅದು ನಿಮ್ಮ ಹೃದಯದಲ್ಲಿ ಸ್ಥಿರವಾಗಿ ನಿಲ್ಲಲಿ.

ನಾಗಾಲಿಯ ಮೇಲೆ ನಾಗಾಲಿ. ಅದರ ಮೇಲೆ ಜೊತೆಯ ಹುಡುಗ, ಅವನ ಭುಜದ ಮೇಲೆ ಇವನು, ಹೀಗೆ ಉರಿಯ ಮೇಲಿದ್ದ ಪಾತ್ರೆಯನ್ನು ನಿಲುಕಿಸಿ ಕೊಂಡು, ಕಂಡಿ ಮಾಡಿ. ಘಂಟೆ ಸದ್ದು ಮಾಡದಂತೆ ಮುಚ್ಚಿ, ಬಾಯ ಬಳಿಗೆ ಕೈ ಜೋಡಿಸಿಟ್ಟು, ತಲೆಯಾಡಿಸುತ್ತ, ಹಾಲನ್ನು ಕುಡಿದು, ಆ ವೇಳೆಗೆ ಬಂದ ಮನೆಯ ಗೊಲ್ಲತಿಯ ಕಣ್ಣುಗಳಿಗೆ ಎಂಜಲು ಹಾಲನ್ನು ಫೂ ಎಂದು ಉಗಿ ದವನು, ಅವನು ರಕ್ಷಿಸಲಿ.

ನಾವು ಜನ್ಮಾಂತರದಲ್ಲಿ ಯಜ್ಞಗಳಿಂದ ಹವನ ಮಾಡಿದ್ದೇವೆ, ಧನವನ್ನು ಸತ್ಪಾತ್ರ ದಾನ ಮಾಡಿದ್ದೇವೆ, ವೃದ್ಧರಿಗೆ ಸೇವೆ ಮಾಡಿದ್ದೇವೆ, ದುಶ್ಚರವಾದ ತಪಸ್ಸನ್ನು ಆಚರಿಸಿದ್ದೇವೆ, ಸಂಶಯವಿಲ್ಲ. ಆದ್ದರಿಂದ ನಮಗೆ ಚಾಣೂರ ದ್ವೇಷಿ, ಭಕ್ತರ ಪಾಪನಾಶಕ, ಶ್ರೇಯಃಪೋಷಕ, ಲಕ್ಷ್ಮೀ ಸೇವಿತನಲ್ಲಿ ಅನನ್ಯ ಸುಲಭವಾದ ಭಕ್ತಿ, ಪುನರ್ಜನ್ಮವಿಲ್ಲದಂತೆ ಮಾಡತಕ್ಕದ್ದು, ಉಂಟಾಯಿತು.

ತ್ವಯಿ ಪ್ರಸನ್ನೇ ಮಮ ಕಿಂ ಗುಣೇನ
ತ್ವಯ್ಯಪ್ರಸನ್ನೇ ಮಮ ಕಿಂ ಗುಣೇನ
ರಕ್ತೇ ವಿರಕ್ತೇ ಚ ವರೇ ವಧೂನಾಂ
ನಿರರ್ಥಕಃ ಕುಂಕುಮ ಪತ್ರಭಂಗಃ ೧೦೦

ಗಾಯಂತಿ ಕ್ಷಣದಾವಸಾನ ಸಮಯೇ ಸಾನಂದಮಿಂದು ಪ್ರಭಾ
ರುಂಧತ್ಯೋ ನಿಜದಂತಕಾಂತಿ ನಿವಹೈಃ ಗೋಪಾಂಗನಾ ಗೋಕುಲೇ
ಮಥ್ನತ್ಯೋದಧಿ ಪಾಣಿ ಕಂಕಣ ಝಣತ್ಕಾರಾನುಕಾರಂ ಜವಾತ್
ವ್ಯಾವಲ್ಗ ದ್ವಸನಾಂಚಲಾಯಮನಿಶಂ ಪೀತಾಂಬರೋಽವ್ಯಾತ್ಸ ನಃ ೧೦೧

ಅಂಸಾಲಂಬಿತ ವಾಮ ಕುಂಡಲ ಭರಂ ಮಂದೋನ್ನತ ಭ್ರೂಲತಂ
ಕಿಂಚಿಕ್ಕುಂಚಿತ ಕೋಮಲಾಧರಪುಟಂ ಸಾಚಿ ಪ್ರಸಾರೇಕ್ಷಣಂ
ಆಲೋಲಾಂಗುಲಿ ಪಲ್ಲವೈರ್ಮುರಲಿಕಾಮಾಪೂರಯನ್ತಂ ಮುದಾ
ಮೂಲೇ ಕಲ್ಪತರೋಸ್ತ್ರಿ ಭಂಗಿಲಲಿತಂ ಜಾನೇ ಜಗನ್ಮೋಹನಂ ೧೦೨

ಮಲ್ಲೈಃ ಶೈಲೇಂದ್ರ ಕಲ್ಪಃ ಶಿಶುರಿತರಜನ್ಯೈಃ ಪುಷ್ಪಚಾಪೋಽಂಗನಾಭಿಃ
ಗೋಪೈಸ್ತು ಪ್ರಾಕೃತಾತ್ಮಾ ದಿವಿ ಕುಲಿಶಭೃತಾ ವಿಶ್ವಕಾಯೋಽಪ್ರಮೇಯಃ
ಕ್ರುದ್ಧಃ ಕಂಸೇನ ಕಾಲೋ ಭಯಚಕಿತದೃಶಾ ಯೋಗಿಭಿರ್ಧ್ಯೇಯ ಮೂರ್ತಿಃ
ದೃಷ್ಟೋ ರಂಗಾವತಾರೇ ಹರಿರಮರ ಗಣಾನಂದಕೃತ್ ಪಾತು ಯುಷ್ಮಾನ್ ೧೦೩

ಸಂವಿಷ್ಟೋ ಫಣಿವಿಷ್ಟರೇಽಂಕತಲ ಮಧ್ಯಾಸೀನ ಲಕ್ಷ್ಮೀಮುಖೇ
ಕಸ್ತೂರೀತಿಲಕಂ ಮುದಾ ವಿರಚಯನ್ ಹರ್ಷಾತ್ಕುಚೌ ಸಂಸ್ಪೃಶನ್
ಅನ್ಯೋನ್ಯ ಸ್ಮಿತಚಂದ್ರಿಕಾ ಕಿಸಲಯೈ ರಾರಾಧಯನ್ಮನ್ಮಥಂ
ಗೋಪೀ ಗೋಪ ಪರೀವೃತೋ ಯದುಪತಿಃ ಪಾಯಾಜ್ಜಗನ್ಮೋಹನಃ ೧೦೪

ನೀನು ಪ್ರಸನ್ನನಾಗಿರುವಲ್ಲಿ ನನ್ನ ಗುಣದಿಂದ ಆಗಬೇಕಾದದ್ದೇನು ? ನೀನು ಪ್ರಸನ್ನ ನಾಗಿಲ್ಲ ; ನನ್ನ ಗುಣದಿಂದ ಆಗುವುದೇನು ? ನಲ್ಲ ಒಲಿದಿದ್ದರೂ ಸರಿ, ಒಲ್ಲದೆ ಇದ್ದರೂ ಸರಿ, ವಧುಗಳಿಗೆ ತಿಲಕ ಅಲಂಕಾರಗಳು ನಿರರ್ಥಕ.

ಇರುಳು ಕಳೆಯುವ ಸಮಯದಲ್ಲಿ ಗೋಕುಲದಲ್ಲಿ ತಮ್ಮ ಹಲ್ಲ ಹೊಳಪಿಂದ ಚಂದ್ರನ ಬೆಳಕನ್ನು ಸೋಲಿಸುವ ಗೋಪಸ್ತ್ರೀಯರು ಕೈಗಳ ಕಂಕಣದ ಝಣ ತ್ಕಾರಕ್ಕೆ ಅನುಗುಣವಾಗಿ ಮೊಸರು ಕಡೆಯುತ್ತ, ಕಡೆಯುವ ವೇಗದಿಂದ ಸೀರೆಯ ಸೆರಗು ಜಾರುತ್ತಿರಲು, ಯಾರನ್ನು ಆನಂದದಿಂದ ಹಾಡುವರು, ಆ ಪೀತಾಂಬರನು ಸದಾ ನಮ್ಮನ್ನು ರಕ್ಷಿಸಲಿ.

ಎಡದ ಕುಂಡಲದ ಭಾರ ಭುಜದ ಮೇಲಿರುತ್ತ, ಸ್ವಲ್ಪ ಎತ್ತಿದ ಹುಬ್ಬಿನ ಬಳ್ಳಿ, ಇಷ್ಟೇ ತೆರೆದ ಕೋಮಲವಾದ ತುಟಿಗಳ ಪುಟ, ಓರೆ ಹರಿಯುವ ನೋಟ, ಉಳ್ಳವನಾಗಿ ಕಲ್ಪತರುವಿನ ಅಡಿಯಲ್ಲಿ ತ್ರಿಭಂಗಿ ಲಲಿತನಾಗಿ ನಿಂತು, ಧಾರಾಳ ವಾಗಿ ಓಡುವ ತಳಿರು ಬೆರಳುಗಳಿಂದ ಕೊಳಲನ್ನು ಸಂತೋಷದಿಂದ ತುಂಬುವ ಜಗನ್ಮೋಹನನನ್ನು ಬಲ್ಲೆನು.

ಕಾಳಗದ ಕಣಕ್ಕೆ ಇಳಿದಾಗ ಮಲ್ಲರಿಗೆ ಪರ್ವತರಾಜ ಸಮಾನ, ಇತರರಿಗೆ ಎಳೆಯ, ಹೆಂಗಳಿಗೆ ಮನ್ಮಥ ಆಗಿ, ಗೋಪಾಲರಿಗೆ ಸಾಮಾನ್ಯ ಮನುಷ್ಯ, ಸ್ವರ್ಗದಲ್ಲಿ ಇಂದ್ರನಿಗೆ ಅಪ್ರಮೇಯ ವಿಶ್ವಕಾಯ, ಭಯದಿಂದ ಬೆದರಿದ ಕಣ್ಣು ಗಳ ಕಂಸನಿಗೆ ಕೋಪಗೊಂಡ ಯಮ, ಯೋಗಿಗಳಿಗೆ ತಮ್ಮ ಧ್ಯಾನದ ಮೂರ್ತಿ, ಆಗಿ ಕಂಡ ಹರಿ, ದೇವಗಣಗಳ ಆನಂದದಾಯಕ, ನಿಮ್ಮನ್ನು ಪಾಲಿಸಲಿ.

ರತ್ನ ಪೀಠದಲ್ಲಿ ಕುಳಿತು, ತೊಡೆಯ ಮೇಲೆ ಕುಳಿತಿರುವ ಲಕ್ಷ್ಮೀದೇವಿಯ ಮುಖದಲ್ಲಿ ಕಸ್ತೂರೀ ತಿಲಕವನ್ನು ಸಂತೋಷದಿಂದ ವಿರಚಿಸುತ್ತ, ಹರ್ಷದಿಂದ ಕುಚಗಳನ್ನು ಸಂಸ್ಪರ್ಶಿಸುತ್ತ, ಒಬ್ಬರನ್ನು ಕುರಿತು ಒಬ್ಬರು ನಗುವ ನಗೆಯ ಬೆಳುದಿಂಗಳ ತಳಿರಿಂದ ಮನ್ಮಥನನ್ನು ಆರಾಧಿಸುತ್ತ, ಇರುವ ಗೋಪೀಗೋಪ ಪರಿವೃತ ಜಗನ್ಮೋಹನ ಯದುಪತಿ ರಕ್ಷಿಸಲಿ.

ಆಕೃಷ್ಟೇ ವಸನಾಂಚಲೇ ಕುವಲಯ ಶ್ಯಾಮಾ ತ್ರಪಾಧಃ ಕೃತಾ
ದೃಷ್ಟಿಃ ಸಂವಲಿತಾ ರುಚಾ ಕುಚಯುಗೇ ಸ್ವರ್ಣಪ್ರಭೇ ಶ್ರೀಮಂತಿ
ಬಾಲಃ ಕಶ್ಚನ ಚೂತಪಲ್ಲವ ಇತಿ ಪ್ರಾನ್ತಸ್ಮಿತಾಸ್ಯಶ್ರಿಯಂ
ಶ್ಲಿಷ್ಯಂ ಸ್ತ್ಯಾಮಥ ರುಕ್ಮಿಣೀಂ ನತಮುಖೀಂ ಕೃಷ್ಣಃ ಸ ಪುಷ್ಣಾತು ನಃ ೧೦೫

ಉರ್ವ್ಯಾಂ ಕೋಽಪಿ ಮಹೀಧರೋ ಲಘುತರೋ ದೋರ್ಭ್ಯಾಂ ಧೃತೋ ಲೀಲಯಾ
ತೇನ ತ್ವಂ ದಿವಿ ಭೂತಲೇ ಚ ಸತತಂ ಗೋವರ್ಧನೋ ಗೀಯಸೇ
ತ್ವಾಂ ತ್ರೈಲೋಕ್ಯಧರಂ ವಹಾಮಿ ಕುಚಯೋರಗ್ರೇ ನ ತದ್ಗಣ್ಯತೇ
ಕಿಂ ವಾ ಕೇಶವ ಭಾಷಣೇನ ಬಹುನಾ ಪುಣ್ಯೈರ್ಯಶೋ ಲಭ್ಯತೇ ೧೦೬

ಸಂಧ್ಯಾವಂದನ ಭದ್ರಮಸ್ತು ಭವತೇ ಭೋಃ ಸ್ನಾನ ತುಭ್ಯಂ ನಮೋ
ಭೋ ದೇವಾಃ ಪಿತರಶ್ಚ ತರ್ಪಣ ವಿಧೌ ನಾಹಂ ಕ್ಷಮಃ ಕ್ಷಮ್ಯತಾಂ
ಯತ್ರ ಕ್ವಾಪಿ ನಿಷೀದ್ಯ ಯಾದವಕುಲೋತ್ತಂಸಸ್ಯ ಕಂಸದ್ವಿಷಃ
ಸ್ಮಾರಂ ಸ್ಮಾರಮಘಂ ಹರಾಮಿ ತದಲಂ ಮನ್ಯೇ ಕಿಮನ್ಯೇನ ಮೇ ೧೦೭

ಹೇ ಗೋಪಾಲಕ ಹೇ ಕೃಪಾ ಜಲನಿಧೇ ಹೇ ಸಿಂಧುಕನ್ಯಾಪತೇ
ಹೇ ಕಂಸಾಂತಕ ಹೇ ಗಜೇಂದ್ರ ಕರುಣಾಪಾರೀಣ ಹೇ ಮಾಧವ
ಹೇ ರಾಮಾನುಜ ಹೇ ಜಗತ್ರಯ ಗುರೋ ಹೇ ಪುಂಡರೀಕಾಕ್ಷ ಮಾಂ
ಹೇ ಗೋಪೀಜನನಾಥ ಪಾಲಯ ಪರಂ ಜಾನಾಮಿ ನ ತ್ವಾಂ ವಿನಾ ೧೦೮

ಕಸ್ತೂರೀ ತಿಲಕಂ ಲಲಾಟಫಲಕೇ ವಕ್ಷಃಸ್ಥಲೇ ಕೌಸ್ತುಭಂ
ನಾಸಾಗ್ರೇ ನವಮೌಕ್ತಿಕಂ ಕರತಲೇ ವೇಣುಂ ಕರೇ ಕಂಕಣಂ
ಸರ್ವಾಂಗೇ ಹರಿಚಂದನಂ ಚ ಕಲಯನ್ ಕಂಠೇ ಚ ಮುಕ್ತಾವಲಿಂ
ಗೋಪಸ್ತ್ರೀ ಪರಿವೇಷ್ಟಿತೋ ವಿಜಯತೇ ಗೋಪಾಲ ಚೂಡಾಮಣಿಃ ೧೦೯

ೇಲೆಯ ಸೆರಗನ್ನು ಎಳೆಯಲಾಗಿ, ನಾಣಿಂದ ಕೆಳಮುಖವಾದ ಕನ್ನೈದಿಲೆಯ
ಪ್ಪಿನ ದೃಷ್ಟಿ, ಹೊನ್ನ ಹೊಗರ ಚೆಂದದ ಕುಚಯುಗದಲ್ಲಿ ಬೆಳಗಿ ಬಿದ್ದಿತು.
ೂನೆ ನಗೆಯಿಂದ ಕೂಡಿದ ಮುಖಶ್ರೀಯ ನತಮುಖಿ ರುಕ್ಮಿಣಿಯನ್ನು ಆಗ
ಾವಿನ ಯಾವುದೋ ಎಳೆ ತಳಿರೆಂದು ಅಪ್ಪಿದ ಆ ಕೃಷ್ಣ, ನಮ್ಮನ್ನು
ೋಷಿಸಲಿ.

ರ್ವಿಯಲ್ಲಿ ಯಾವುದೋ ಬಹು ಹಗುರವಾದ ಒಂದು ಮಲೆಯನ್ನು ಸುಲಭ
ಾಗಿ ತೋಳುಗಳಿಂದ ಎತ್ತಿದೆ. ಅದರಿಂದ ಸ್ವರ್ಗಲೋಕ ಭೂಲೋಕಗಳಲ್ಲಿ
ತತವೂ ಗೋವರ್ಧನನೆಂದು ನಿನ್ನ ಕೀರ್ತಿಯನ್ನೇ ಹಾಡುತ್ತಾರೆ. ಮೂರು
ೋಕವನ್ನು ಹೊತ್ತ ನಿನ್ನನ್ನು ಕುಚಾಗ್ರದಲ್ಲಿ ವಹಿಸುತ್ತೇನೆ. ಇದು ಲೆಕ್ಕಕ್ಕೆ
ರಲಿಲ್ಲ. ಬಹಳ ಮಾತಿನಿಂದ ಫಲವೇನು ಕೇಶವ ? ಯಶಸ್ಸು ಬರುವುದಕ್ಕೆ
ಣ್ಯ ಇರಬೇಕು.

ಸಂಧ್ಯಾವಂದನವೆ, ನಿನಗೆ ಒಳಿತಾಗಲಿ ; ಓ ಸ್ನಾನವೇ, ನಿನಗೆ ನಮಸ್ಕಾರ ;
ದೇವತೆಗಳೆ, ಪಿತೃಗಳೆ, ನಿಮ್ಮನ್ನು ತಣಿಸುವ ಕರ್ಮದಲ್ಲಿ ನಾನು ಶಕ್ತನಲ್ಲ ;
ನ್ನನ್ನು ಮನ್ನಿಸಿರಿ. ಯಾವುದೋ ಒಂದು ಸ್ಥಲದಲ್ಲಿ ಕುಳಿತು ಕಂಸಾರಿಯಾದ
ಯಾದವ ಕುಲೋತ್ತಂಸನನ್ನು ನೆನೆನೆನೆದು, ಪಾಪವನ್ನು ಕಳೆದುಕೊಳ್ಳುತ್ತೇನೆ.
ದು ಸಾಕು ಎಂದು ನನ್ನ ತಿಳಿವಳಿಕೆ ; ಬೇರೆಯವರಿಂದ ನನಗೆ ಆಗಬೇಕಾ
ದ್ದೇನು ?

ಗೋಗಳ ಪಾಲಕನೆ, ಓ ಕೃಪಾ ಸಮುದ್ರನೆ, ಓ ಲಕ್ಷ್ಮೀಪತಿ, ಓ ಕಂಸಾಂತಕ,
ಜೇಂದ್ರನಿಗೆ ಕರುಣೆಯ ಪಾರವನ್ನು ತೋರಿದವನೆ, ಓ ಮಾಧವ, ಬಲರಾಮನ
ಮ್ಮನೆ, ಓ ಜಗತ್ರಯದ ಗುರುವೆ, ಪುಂಡರೀಕಾಕ್ಷ, ಓ ಗೋಪೀಜನನಾಥ,

ನ್ನನ್ನು ರಕ್ಷಿಸು : ನಿನ್ನನ್ನು ಬಿಟ್ಟು ಬೇರೆ ಒಂದನ್ನು ನಾನು ಕಾಣೆನು.
ಣೆಯ ಹರಹಿನಲ್ಲಿ ಕಸ್ತೂರೀತಿಲಕ, ವಕ್ಷಃಸ್ಥಲದಲ್ಲಿ ಕೌಸ್ತುಭ ಮಣಿ, ಮೂಗಿನ
ುದಿಯಲ್ಲಿ ಹೊಸ ಮುತ್ತು, ಕೈಯಲ್ಲಿ ಕೊಳಲು, ಮುಂಗೈಯಲ್ಲಿ ಕಂಕಣ,
ೈಯಲ್ಲಿ ಹರಿಚಂದನ, ಕಂಠದಲ್ಲಿ ಮುತ್ತಿನ ಸರ, ಇವನ್ನು ಧರಿಸಿ ಗೋಪ
ತ್ರೀಯರಿಂದ ಪರಿವೇಷ್ಟಿತನಾಗಿರುವ ಗೋಪಾಲ ಚೂಡಾಮಣಿ ವಿಜಯಿ
ಯಾಗಿದ್ದಾನೆ.

ಕಾಲಿಂದೀ ಬಹುಲ ಪ್ರವಾಹ ರಭಸಂ ಸಂಸ್ತಂಭಯಂಸ್ತತ್ ಕ್ಷಣಾತ್
ಶೈಲಾನ್ವಿ ದ್ರವಯನ್ ಮೃಗಾನ್ವಿವಶಯನ್ ಗೋವೃಂದಮಾನಂದಯನ್
ಗೋಪಾನ್ ಸಂಭ್ರಮಯನ್ ಮುನೀನ್ ಮುಕುಲಯನ್ ಸಪ್ತಸ್ವರಾನ್ ಜೃಂಭಯ
ಓಂಕಾರಾರ್ಥಮುದೀರಯನ್ ವಿಜಯತೇ ವಂಶೀನಿನಾದಃ ಶಿಶೋಃ ೧೧

ದ್ವಿತೀಯ ಆಶ್ವಾಸಃ

ಅದೇ ಕ್ಷಣ ಯಮುನೆಯ ತುಂಬು ಹೊಳೆಯ ರಭಸವನ್ನು ತಡೆದು, ಗಿರಿಗಳನ್ನು ರಗಿಸಿ, ಮೃಗಗಳನ್ನು ಮೈಮರೆಯಿಸಿ, ಗೋವುಗಳ ಮಂದೆಯನ್ನು ಆನಂದ ಡಿಸಿ, ಗೋಪಾಲರನ್ನು ಸಂಭ್ರಮಗೊಳಿಸಿ, ಮುನಿಗಳನ್ನು ಮುಗುಳುಗಳನ್ನು ಮಾಡಿ, ಬಾಲ ಗೋಪಾಲನ ಕೊಳಲ ದನಿ ಸಪ್ತಸ್ವರಗಳನ್ನು ಪ್ರಕಟಿಸಿ ಂಕಾರಾರ್ಥವನ್ನು ಪ್ರತಿಪಾದಿಸುತ್ತಾ ವಿಜಯಿಯಾಗಿದೆ.

ಎರಡನೆಯ ಆಶ್ವಾಸ

॥ ತೃತೀಯ ಆಶ್ವಾಸಃ ॥

ಅಸ್ತಿ ಸ್ವಸ್ತ್ಯಯನಂ ಸಮಸ್ತಜಗತಾಮಭ್ಯಸ್ತ ಲಕ್ಷ್ಮೀಸ್ತನಂ
ವಸ್ತುಧ್ವಸ್ತ ರಜಸ್ತಮೋಭಿರನಿಶಂ ನ್ಯಸ್ತಂ ಪುರಸ್ತಾದಿವ
ಹಸ್ತೋದ್ವಸ್ತಗಿರೀನ್ದ್ರ ಮಸ್ತಕ ತರು ಪ್ರಸ್ತಾರ ವಿಸ್ತಾರಿತ
ಸ್ರಸ್ತ ಸ್ವಸ್ತರು ಸೂನ ಸಂಸ್ತರ ಲಜತ್ಪ್ರಸ್ತಾವಿ ರಾಧಾಸ್ತುತಂ

ರಾಧಾರಾಧಿತ ವಿಭ್ರಮೊದ್ಭುತ ರಸಂ ಲಾಲಿತ್ಯ ರತ್ನಾಕರಂ
ಸಾಧಾರಣ್ಯ ಪದ ವ್ಯತೀತ ಸಹಜ ಸ್ಮೇರಾನನಾಂಭೋರುಹಂ
ಆಲಂಬೇ ಹರಿನೀಲ ಗರ್ವಗುರುತಾಂ ಸರ್ವಸ್ವ ನಿರ್ವಾಪಣಂ
ಬಾಲಂ ವೈಣವಿಕಂ ವಿಮುಗ್ಧ ಮಧುರಂ ಮೂರ್ಧಾಭಿಷಿಕ್ತಂ ಮಹಃ

ಕರಿಣಾಮಲಂಘ್ಯಗತಿವೈಭವಂ ಭಜೇ
ಕರುಣಾವಲಂಬಿತ ಕಿಶೋರ ವಿಗ್ರಹಂ
ಯಮಿನಾಮನಾರತವಿಹಾರಿ ಮಾನಸೇ
ಯಮುನಾ ವನಾಂತ ರಸಿಕಂ ಪರಂ ಮಹಃ

ಅತಂತ್ರಿತ ತ್ರಿಜಗದಪಿ ವ್ರಜಾಂಗನಾ
ನಿಯಂತ್ರಿತಂ ವಿಪುಲ ವಿಲೋಚನಾಜ್ಞಯಾ
ಸಮಂತತಃ ಸರಸತರಂ ವಿಜೃಂಭತಾಂ
ನಿರಂತರಂ ಮಮ ಹೃದಯೇ ಪರಂ ಮಹಃ

॥ ಮೂರನೆಯ ಆಶ್ವಾಸ ॥

ಸಮಸ್ತ ಜಗತ್ತಿನ ಸ್ವಸ್ಥ್ಯಯುನ, ಅಭ್ಯಸ್ತ ಲಕ್ಷ್ಮೀಸ್ತನ, ರಜೋಗುಣ ತಮೋ ಗುಣಗಳನ್ನು ಧ್ವಂಸ ಮಾಡಿದವರಿಂದ ಸದಾ ಎದುರಿಗಿರಿಸಿದಂತೆ ಇರುವುದು, ಕೈಯಿಂದ ಎತ್ತಿದ ಬೆಟ್ಟದ ತಲೆಯ ಮರಗಳ ಪ್ರಸ್ತಾರದಿಂದ ಹರಡಿದ, ಮತ್ತು ಸ್ವರ್ಗದ ಮರಗಳಿಂದ ಜರಿದುಬಿದ್ದ, ಹೂಗಳ ಸಂಸ್ತರದಿಂದ ವಿರಾಜಿಸುತ್ತಿರು ವುದು, ವಸ್ತು, ರಾಧೆಯಿಂದ ಸ್ತುತವಾದದ್ದು, ಇದೆ.

ರಾಧೆ ಆರಾಧಿಸುವ ವಿಭ್ರಮಾದ್ಭುತರಸ, ಲಾಲಿತ್ಯದ ರತ್ನಾಕರ, ಎಣೆ ಎನ್ನ ಬಹುದಾದ ಸ್ಥಿತಿಯನ್ನು ಮೀರಿದ ಸಹಜವಾದ ಮುಗುಳುನಗೆಯ ಮುಖ ಕಮಲವುಳ್ಳದ್ದು, ಇಂದ್ರನೀಲಮಣಿಯ ಹೆಮ್ಮೆಯ ತುಂಬನ್ನು ಪೂರ್ಣವಾಗಿ ಕಳೆಯುತಕ್ಕದ್ದು, ಮಧುರದಲ್ಲಿ ಮಧುರವಾದದ್ದು, ವೇಣುಸಂಬಂಧಿ, ಮೂರ್ಧಾ ಭಿಷಿಕ್ತ ತೇಜಸ್ಸು, ಅದನ್ನು ಆಶ್ರಯಿಸುತ್ತೇನೆ.

ಆನೆಗಳು ಸೋಲಿಸಲಾರದ ಚೆಲುವಿನ ನಡೆಯದು, ಕಾರುಣ್ಯದ ಮೂಲಕ ಎಳೆಯುನ ಆಕಾರವನ್ನು ಧರಿಸಿದ್ದು, ಯಮಿಗಳ ಮನಸ್ಸಿನಲ್ಲಿ ಬಿಡದೆ ವಿಹರಿಸ ತಕ್ಕದ್ದು, ಯಮುನೆಯ ತೀರದ ವನದೊಳಗಿನ ರಸಿಕ, ಆದ ಪರಂಜ್ಯೋತಿ ಯನ್ನು ಭಜಿಸುತ್ತೇನೆ.

ಮೂರು ಜಗತ್ತು ನಡೆಸಲಾರದ್ದಾದರೂ ಗೋಪಿಯರ ಸೇರೆಗಣ್ಣುಗಳ ನೋಟಕ್ಕೆ ಒಳಪಟ್ಟದ್ದು, ಆ ಪರಂಜ್ಯೋತಿ ನಿರಂತರವಾಗಿ ನನ್ನ ಹೃದಯದಲ್ಲಿ ಸಂಪೂರ್ಣವಾಗಿ, ತುಂಬ ಸರಸವಾಗಿ, ವಿಜೃಂಭಿಸಲಿ,

ಕಂದರ್ಪ ಪ್ರತಿಮಲ್ಲ ಕಾಂತಿವಿಭವಂ ಕಾದಂಬಿನೀ ಬಾಂಧವಂ
ವೃಂದಾರಣ್ಯ ವಿಲಾಸಿನೀ ವ್ಯಸನಿನಂ ವೇಷೇಣ ಭೂಷಾಮಯಂ
ಮಂದಸ್ಮೇರ ಮುಖಾಂಬುಜಂ ಮಧುರಿಮ ವ್ಯಾಮೃಷ್ಟ ಬಿಂಬಾಧರಂ
ವಂದೇ ಕಂದಲಿತಾರ್ದ್ರ ಯೌವನವನಂ ಕೈಶೋರಕಂ ಶಾರ್ಙ್ಗಿಣಃ ೫

ಆಮುಕ್ತ ಮಾನುಷಮಮುಕ್ತ ನಿಜಾನುಭಾವಂ
ಆರೂಢವಿಗ್ರಹಮಗೂಢ ವಿದಗ್ಧ ಲೀಲಂ
ಆಮೃಷ್ಟ ಯೌವನಮಮೃಷ್ಟ ಕಿಶೋರ ಭಾವಂ
ಆದ್ಯಂ ಮಹಃ ಕಿಮಪಿ ಮಾದ್ಯತಿ ಮಾನಸೇ ಮೇ ೬

ತೇ ತೇ ಭಾವಾಃ ಸಕಲ ಜಗತೀ ಲೋಭನೀಯ ಪ್ರಭಾವಾಃ
ನಾನಾ ತೃಷ್ಣಾ ಸುಹೃದಿ ಹೃದಿ ಮೇ ಕಾಮಮಾವಿರ್ಭವಂತು
ಲೀಲಾ ವೇಣು ಕ್ವಣಿತ ಲಸಿತ ಸ್ಮೇರ ವಕ್ತ್ರಾರವಿಂದಾತ್
ನಾಹಂ ಜಾನೇ ಮಧುರಮಪರಂ ನಂದಪುಣ್ಯಾಂಬುಪೂರಾತ್ ೭

ಸುಕೃತಿಭಿರಾದೃತೇ ಸರಸವೇಣು ನಿನಾದ ಸುಧಾ
ರಸ ಲಹರೀ ವಿಹಾರ ನಿರವಗ್ರಹ ಕರ್ಣಪುಟೇ
ವ್ರಜ ವರಸುಂದರೀ ಮುಖಸರೋರುಹ ಸಾರಸಿಕೇ
ಮಹಸಿ ಕದಾ ನು ಮಜ್ಜತಿ ಮದೀಯಮಿದಂ ಹೃದಯಂ ೮

ತೃಷ್ಣಾತುರೇ ಚೇತಸಿ ಜೃಂಭಮಾಣೇ
ಮುಷ್ಣನ್ಮುಹುರ್ಮೋಹ ಮಹಾಂಧಕಾರಂ
ಪುಷ್ಣಾತು ನಃ ಪುಣ್ಯದಯೈಕಸಿಂಧೋಃ
ಕೃಷ್ಣಸ್ಯ ಕಾರುಣ್ಯ ಕಟಾಕ್ಷ ಕೇಲಿಃ

ಮನ್ಮಥನಿಗೆ ಪ್ರತಿಸ್ಪರ್ಧಿಯಾದ ಕಾಂತಿವಿಭವದ, ಬೃಂದಾವನದ ಸುಂದರಿಯರಲ್ಲಿ ಅನುರಕ್ತವಾಗಿ ವೇಷದಿಂದ ಅಲಂಕೃತವಾಗಿರತಕ್ಕ ಕಾದಂಬಿನಿಯ ಬಂಧು; ಮುಗುಳನಗೆಯ ಮುಖಕಮಲ, ಮಾಧುರ್ಯದಿಂದ ಸವರಿರುವ ತುಟಿಯ ತೊಂಡೆ, ಇವನ್ನು ಉಳ್ಳದ್ದು ಯಾವುದು; ಶಾರ್ಙಧರನ ಆ ತಳಿರತೆರನ ಮಾರ್ದವದ ಆರಂಭ ಯೌವನವನ್ನು ವಂದಿಸುತ್ತೇನೆ.

ಸ್ವಲ್ಪಮಟ್ಟಿಗೆ ಮಾನುಷ ಆಗಿರುತ್ತ ತನ್ನದಾದ ಮಹಿಮೆಯನ್ನು ಬಿಡದೆ ಇರುವುದು, ಮೈ ಬೆಳೆಯುತ್ತಿರುವಂದೇ ಸ್ಪಷ್ಟವಾಗಿ ಪ್ರೌಢದಶೆಯ ಲೀಲೆಯನ್ನು ಆಡಿದ್ದು, ಯೌವನವನ್ನು ಮುಟ್ಟಿಯೂ ಎಳೆತನದ ಸರಳತೆಯನ್ನು ಬಿಡದ್ದು, ಆದ ಅವರ್ಣನೀಯ ಆದ್ಯ ತೇಜಸ್ಸು ನನ್ನ ಮನಸ್ಸಿನಲ್ಲಿ ಮಾದಕವಾಗಿದೆ.

ಹಲವು ತೆರನ ಆಸೆಗಳಿಗೆ ಅನುಕೂಲವಾದ ನನ್ನ ಹೃದಯದಲ್ಲಿ ಸಕಲ ಲೋಕ ಗಳನ್ನು ಮೋಹಗೊಳಿಸುವ ಶಕ್ತಿಯುಳ್ಳ ಆಯಾಭಾವಗಳು ಯಥೇಷ್ಟ ಉದಿಸಲಿ. ಲೀಲಾವೇಣುವಿನ ಸ್ವರಗಳಿಂದ ಬೆಳಗಿರುವ ನಗೆಮೊಗದ ತಾವರೆ ಯುಳ್ಳ ಆ ನಂದಗೋಪನ ಪುಣ್ಯರಸದ ಪ್ರವಾಹ ಕೃಷ್ಣನನ್ನು ಬಿಟ್ಟು ಬೇರೊಂದು ಮಧುರ ವಸ್ತುವನ್ನು ನಾನರಿಯೆನು.

ಪುಣ್ಯಶಾಲಿಗಳು ಆದರಿಸತಕ್ಕದ್ದು, ಸರಸವೇಣುವಿನ ನಿನಾದವೆಂಬ ಸುಧಾರಸ ಲಹರಿಯಿಂದ ವಿಹರಿಸುವ ತೆರೆದ ಕಿವಿಯದು, ಗೋಕುಲದ ಪರಮ ಸುಂದರಿಯರ ಮೊಗದಾವರೆಯಲ್ಲಿ ಸರಸಮಾಡತಕ್ಕದ್ದು, ಆದ ಆ ತೇಜಸ್ಸಿನಲ್ಲಿ ಅದೆಂದು ಮುಳುಗುವುದು ನನ್ನದಾದ ಈ ಹೃದಯ ?

ಮುರಳಿ ಮುರಳಿ ತಲೆಯೆತ್ತುವ ಆಸೆಗಳಿಂದ ಪೀಡಿತವಾಗಿರುವ ಚೇತನದಲ್ಲಿ ಮೋಹದ ಮಹತ್ತಾದ ಕತ್ತಲನ್ನು ನಿವಾರಿಸಿ, ಪುಣ್ಯದಯೈಕಸಿಂಧುವಾದ ಕೃಷ್ಣನ ಕಾರುಣ್ಯ ಕಟಾಕ್ಷದ ಒಲಿವು ನಮ್ಮನ್ನು ಪೋಷಿಸಲಿ.

ನಿಖಿಲ ನಿಗಮಮೌಲಿ ಲಾಲಿತಂ
ಪದ ಕಮಲಂ ಪರಮಸ್ಯ ತೇಜಸಃ
ವ್ರಜ ಭುವಿ ಬಹುಮನ್ಮಹೇ ತರಾಂ
ಸರಸ ಕರೀಷ ವಿಶೇಷ ರೂಷಿತಂ ೧೦

ಉದಾರ ಮೃದುಲ ಸ್ಮಿತ ವ್ಯತಿಕರಾಭಿರಾಮಾನನಂ
ಮುದಾ ಮುಹುರುದೀರ್ಣಯಾ ಮುನಿಮನೋಂಬುಜಾಮ್ರೇಡಿತಂ
ಮದಾಲಸ ವಿಲೋಚನ ವ್ರಜವಧೂ ಮುಖಾಸ್ವಾದಿತಂ
ಕದಾ ನು ಕಮಲೇಕ್ಷಣಂ ಕಮಪಿ ಬಾಲಮಾಲೋಕಯೇ ೧೧

ವ್ರಜಜನ ಮದಯೋಷಿಲ್ಲೋಚನೋಚ್ಛಿಷ್ಟ ಶೇಷೀ
ಕೃತಮತಿಚಪಲಾಭ್ಯಾಂ ಲೋಚನಾಭ್ಯಾಮುಭಾಭ್ಯಾಮ್
ಸಕೃದಪಿ ಪರಿಪಾತುಂ ತೇ ವಯಂ ಪಾರಯಾಮಃ
ಕುವಲಯದಳ ನೀಲಂ ಕಾಂತಿಪೂರಂ ಕದಾನು ೧೨

ಘೋಷ ಯೋಷಿದನುಗೀತ ಯೌವನಂ
ಕೋಮಲ ಸ್ತನಿತ ವೇಣು ನಿಸ್ವನಮ್
ಸಾರಭೂತಮಭಿರಾಮ ಸಂಪದಾಂ
ಧಾಮ ತಾಮರಸ ಲೋಚನಂ ಭಜೇ ೧೩

ಲೀಲಯಾ ಲಲಿತಯಾವಲಂಬಿತಂ
ಮೂಲ ಗೇಹಮಿವ ಮೂರ್ತಿ ಸಂಪದಾಮ್
ನೀಲ ನೀರದ ವಿಕಾಸ ವಿಭ್ರಮಂ
ಬಾಲಮೇವ ಅಯಮೂದ್ರಿಯಾಮಹೇ ೧೪

ಸಮಸ್ತ ವೇದಗಳ ಶಿರಸ್ಸಿನಿಂದ ಲಾಲಿತವಾದದ್ದೂ, ಗೋಕುಲದ ಆಕಳ ಕರುಗಳ ಹಸಿಯ ಸೆಗಣಿಯಿಂದ ರೂಷಿತವಾದದ್ದೂ, ಆದ ಆ ಪರಾತ್ಪರತೇಜದ ಪಾದ ಮೂಲವನ್ನು ನಾವು ಬಹಳವಾಗಿ ಗೌರವಿಸುತ್ತೇವೆ.

ಉದಾರವೂ ಮೃದುಲವೂ ಆದ ಎಳನಗೆಯ ಸಂಪತ್ತಿನಿಂದ ಆಕರ್ಷಕವಾದ ಮುಖವುಳ್ಳವನು, ಮುನಿಗಳು ಮರಮುರಳಿ ಉಕ್ಕುವ ಆನಂದದಿಂದ ಮನಸ್ಸಿನಲ್ಲಿ ಧ್ಯಾನಮಾಡತಕ್ಕವನು ಮತ್ತು ಪ್ರಣಯಮದದಿಂದ ಸೊಕ್ಕಿದ ಕಣ್ಣುಗಳ ಗೋಪಸುಂದರಿಯರು ಮುದ್ದಿಸಿದವನು, ಆದ ಆ ಕಮಲನಯನನಾದ ಅವರ್ಣ ನೀಯನಾದ ಬಾಲನನ್ನು ಅದೆಂದು ತಾನೆ ಕಂಡೇನು.

ನಂದವ್ರಜದ ಯೌವನಮತ್ತ ತರುಣಿಯರ ಕಣ್ಣುಗಳು ಅನುಭವಿಸಿ ಉಳಿಸಿದ್ದು ಆ ಕುವಲಯದಳ ನೀಲವಾದ ನಿನ್ನ ಕಾಂತಿಪ್ರವಾಹ ಇದೆಯೆ, ಅದನ್ನು ಆತುರದಿಂದ ಅತಿ ಚಪಲವಾಗಿರುವ ಈ ಎರಡೂ ಕಣ್ಣುಗಳಿಂದ ಒಮ್ಮೆ ಯಾದರೂ ಹೀರಲು ನಾವು ಅದೆಂದು ಸಮರ್ಥರಾದೇವು ?

ಗೋಕುಲ ಸುಂದರಿಯರು ಹೊಗಳಿ ಹಾಡುವ ಯೌವನದ, ಕೋಮಲವಾಗಿ ನುಡಿಯುವ ಕೊಳಲನಾದದ, ಚೆಲುವಿಕೆಯ ಸಂಪತ್ತುಗಳ ಸಾರಭೂತ ನಿವಾಸ, ಆ ತಾಮರಸಲೋಚನನನ್ನು ಭಜಿಸುತ್ತೇನೆ.

ಲಲಿತವಾದ ಲೀಲೆಗಳಿಗೆ ಆಶ್ರಯನಾದ, ಚೆಲುವರೂಪದ ಸಂಪತ್ತಿನ ಉಗ್ರಾಣ ದಂತಿರುವ ನೀಲಮೇಘದ ಹೊಳಪಿನ ವಿಭ್ರಮ, ಆ ಬಾಲಕನನ್ನು ಮಾತ್ರ ನಾವು ಆದರಿಸುತ್ತೇವೆ.

ವಂದೇ ಮುರಾರೇಶ್ಚರಣಾರವಿಂದ
ದ್ವಂದ್ವಂ ದಯಾದರ್ಶಿತ ಶೈಶವಸ್ಯ
ವಂದಾರು ಬೃಂದಾರಕ ಬೃಂದ ಮೌಳಿ
ಮಂದಾರ ಮಾಲಾ ವಿನಿಮರ್ದ ಭೀರು ೧೫

ಯಸ್ಮಿನ್ನೃತ್ಯತಿ ಯಸ್ಯಶೇಖರಭರೈಃ ಕ್ರೌಂಚದ್ವಿಷಶ್ಚಂದ್ರಕೀ
ಯಸ್ಮಿನ್ದೃಪ್ಯತಿ ಯಸ್ಯ ಘೋಷಸುರಭಿಂ
ಜಿಘ್ರನ್ವೃಷೋಧೂರ್ಜಟೇಃ
ಯಸ್ಮಿನ್ಸಜ್ಜತಿ ಯಸ್ಯ ವಿಭ್ರಮಗತಿಂ ವಾಂಛನ್ಹರೇ ಸ್ಸಿಂಧುರಃ
ತದ್ಬೃಂದಾವನಕಲ್ಪಕದ್ರುಮವನಂ ತಂ ವಾ ಕಿಶೋರಂ ಭಜೇ ೧೬

ಅರುಣಾಧರಾಮೃತ ವಿಶೇಷಿತಸ್ಮಿತಂ
ವರುಣಾಲಯಾನುಗತ ವರ್ಣ ವೈಭವಮ್
ತರುಣಾರವಿಂದ ದಳ ದೀರ್ಘ ಲೋಚನಂ
ಕರುಣಾಲಯಂ ಕಮಪಿ ಬಾಲಮಾಶ್ರಯೇ ೧೭

ಲಾವಣ್ಯ ವೀಚೀ ರಚಿತಾಂಗಭೂಷಾಂ
ಭೂಷಾಪದಾರೋಪಿತ ಪುಣ್ಯ ಬರ್ಹಾಮ್
ಕಾರುಣ್ಯ ಧಾರಾಲ ಕಟಾಕ್ಷ ಮಾಲಾಂ
ಬಾಲಾಂ ಭಜೇ ವಲ್ಲವವಂಶಲಕ್ಷ್ಮೀಮ್ ೧೮

ಮಧುರೈಕರಸಂ ವಪುರ್ವಿಭೋಃ
ಮಧುರಾ ವೀಥಿ ಚರಂ ಭಜಾಮಹೇ
ನಗರೀ ಮೃಗಶಾಬ ಲೋಚನಾ
ನಯನೇಂದೀವರವರ್ಷ ವರ್ಷಿತಮ್ ೧೯

ವಂದಿಸುವ ಬೃಂದಾಕರ ವೃಂದದ ತಲೆಯ ಮಂದಾರ ಮಾಲೆಗಳ ಹೊರೆಗೆ ಅಂಜಿದ ಆ ದಯಾದರ್ಶಿತಶೈಶವದ ಮುರಾರಿಯ ಚರಣಾರವಿಂದ ದ್ವಂದ್ವ ವನ್ನು ವಂದಿಸುತ್ತೇನೆ.

ಎಲ್ಲಿ ಯಾರ ತಲೆಯ ತೊಡವಿನ ಕಾರಣ ಷಣ್ಮುಖಸ್ವಾಮಿಯ ನವಿಲು ಕುಣಿಯುತ್ತದೆ, ಎಲ್ಲಿ ಯಾರ ಮಂದೆಯ ಹಸುವನ್ನು ಮೂಸಿ ಶಿವನ ಗೂಳಿ ಉಬ್ಬುತ್ತದೆ, ಎಲ್ಲಿ ಯಾರ ವಿಲಾಸಯುಕ್ತವಾದ ನಡೆಯನ್ನು ಇಂದ್ರನ ಆನೆ ಬಯಸುತ್ತದೆ, ಆ ಬೃಂದಾವನದ ಕಲ್ಪಕವೃಕ್ಷದ ವನ ಆ ಬಾಲನನ್ನು ಅಲ್ಲವೆ ನಾನು ಭಜಿಸುತ್ತೇನೆ.

ಕೆಂದುಟಿಯ ಅಮೃತದಿಂದ ಸೊಗಸಾದ ನಗೆಯುವನು, ಸಾಗರವನ್ನು ಜೊತೆ ಗೊಂಡ ವರ್ಣವೈಭವದವನು, ಬೆಳೆದ ತಾವರೆಯ ದಳದಂತೆ ನಿಡಿದಾದ ನೋಟ ವುಳ್ಳವನು, ಅವರ್ಣನೀಯವಾದ ಕರುಣಾಲಯ ಆ ಬಾಲನನ್ನು ಆಶ್ರಯಿಸು ತ್ತೇನೆ.

ಲಾವಣ್ಯದ ತರಂಗಗಳಿಂದ ರಂಜಿತವಾದ ಅಂಗಾಂಗಗಳು ತೊಡವಾಗಿರಲು, ಪಾವನವಾದ ನವಿಲಗರಿಯನ್ನು ತೊಡವಾಗಿ ತಲೆಗೆ ಸೆಕ್ಕಿರುವ, ಕರುಣೆಯ ಧಾರೆಯಾಗಿರುವ ಕಡೆಗಣ್ ನೋಟದ ಮಾಲೆಯ, ಗೊಲ್ಲ ಮನೆತನದ ಎಳೆಯ ಸಂಪತ್ತನ್ನು ಭಜಿಸುತ್ತೇನೆ.

ಮಧುರೆಯ ಬೀದಿಯಲ್ಲಿ ನಡೆಯುತ್ತ, ನಗರಿಯ ಎರಳೆಕರುಕಣ್ಗಳ ಚೆಲುವೆಯರ ಕಣ್ಣ ಕನ್ನೈದಿಲೆಯ ಮಳೆಯಿಂದ ವರ್ಷಿತವಾದ, ಒಡೆಯನ ಆ ಮಾಧುರ್ಯ ಘನಿಸಿದ ಒಡಲನ್ನು ಭಜಿಸುವನಾಗುತ್ತೇನೆ.

ಪರ್ಯಾಕುಲೇನ ನಯನಾಂತ ವಿಜೃಂಭಿತೇನ
ವಕ್ತ್ರೇಣ ಕೋಮಲ ದರಸ್ಮಿತ ವಿಭ್ರಮೇಣ
ಮಂದ್ರೇಣ ಮಂಜುಲತರೇಣ ಚ ಜಲ್ಪಿತೇನ
ನಂದಸ್ಯ ಹಂತ ತನಯೋ ಹೃದಯಂ ಧುನೋತಿ ೨೦

ಕಂದರ್ಪ ಕಂಡೂಲ ಕಟಾಕ್ಷ ಬಂದೀಃ
ಇಂದೀವರಾಕ್ಷೀರಭಿಲಷ್ಯಮಾಣಾನ್
ಮಂದಸ್ಮಿತಾಧಾರಮುಖಾರವಿಂದಾ
ವಂದಾಮಹೇ ವಲ್ಲವಧೂರ್ತಪಾದಾನ್ ೭೧

ಲೀಲಾಟೋಪ ಕಟಾಕ್ಷ ನಿರ್ಭರ ಪರಿಷ್ವಂಗ ಪ್ರಸಂಗಾಧಿಕ
ಪ್ರೀತೇ ಗೀತಿ ವಿಭಂಗ ಸಂಗರ ಲಸದ್ವೇಣು ಪ್ರಣಾದಾಮೃತೇ
ರಾಧಾಲೋಚನ ಲಾಲಿತಸ್ಯ ಲಲಿತಸ್ಮೇರೇ ಮುರಾರೇರ್ಮುದಾ
ಮಾಧುರ್ಯೈಕರಸೇ ಮುಖೇಂದು ಕಮಲೇ ಮಗ್ನಂ ಮದೀಯಂಮನಃ

ಶರಣಾಗತವಜ್ರಪಂಜರೇ
ಶರಣೇ ಶಾರ್ಙ್ಗಧರಸ್ಯ ವೈಭವೇ
ಕೃಪಯಾ ಧೃತ ಗೋಪವಿಗ್ರಹೇ
ಕಿಯದನ್ಯನ್ ಮೃಗಯಾಮಹೇ ವಯಮ್ ೨೩

ಜಗತ್ರಯೈಕಾಂತ ಮನೋಜ್ಞ ಭೂಮಿ
ಚೇತಸ್ಯಜಸ್ರಂ ಮಮ ಸನ್ನಿಧತ್ತಾಮ್
ರಮಾ ಸಮಾಸ್ವಾದಿತ ಸೌಕುಮಾರ್ಯಂ
ರಾಧಾಸ್ತನಾಭೋಗ ರಸಜ್ಞ ಮೋಜಃ ೨೪

ಕೊನೆಗಣ್ಣಿಂದ ವಿಜೃಂಭಿಸುವ ಚಂಚಲ ದೃಷ್ಟಿಯಿಂದ, ಕೋಮಲವಾದ ಅರೆ ನಗೆಯ ವಿಭ್ರಮದ ಬಾಯಿಂದ, ಗಂಭೀರ ಮಂಜುಲತನ ಆದ ನುಡಿಯಿಂದ, ಆಹಾ, ನಂದನ ತನಯ ಹೃದಯವನ್ನು ಸೆಳೆಯುತ್ತಾನೆ.

ಕಂದರ್ಪನ ಕೂರು ನೋಟದ ಬಂದಿಗಳಾದ ಇಂದೀವರಾಕ್ಷಿಯರನ್ನು ಅಭಿಲಾಷೆಗೆ ಪಾತ್ರ ಮಾಡಿದ, ಎಳನಗೆಗೆ ಆಧಾರವಾದ ಮುಖಾರವಿಂದವುಳ್ಳ, ಗೊಲ್ಲರ ಧೂರ್ತಪಾದರಿಗೆ ವಂದಿಸುತ್ತೇನೆ.

ಹೆಚ್ಚಿನ ವಿಲಾಸದ ಓರೆನೋಟದ ಗಾಢವಾದ ಆಲಿಂಗನ ವ್ಯಾಪಾರದಿಂದ ಅತ್ಯಂತ ಪ್ರೀತನಾದ, ಗಾಯನದ ರೀತಿಗಳ ಸ್ಪರ್ಧೆಯಿಂದ ಸುಂದರವಾದ ಕೊಳಲ ಗಾನದ ಅಮೃತವುಳ್ಳ, ರಾಧಾಲೋಚನ ಲಾಲಿತ ಆದ ಲಲಿತಸ್ಮೇರದ, ಮಾಧುರ್ಯೈಕರಸದ ಮುರಾರಿಯ ಮುಖೇಂದು ಕಮಲದಲ್ಲಿ ನನ್ನದಾದ ಮನಸ್ಸು ಮಗ್ನವಾಗಿದೆ.

ರಕ್ಷಣೆ ಬೇಡಿ ಸಾರಿದವರಿಗೆ ವಜ್ರಪಂಜರವಾಗಿ ವಿಷ್ಣು ವೈಭವ ಕೃಪೆಯಿಂದ ಆರಿಸಿರುವ ಗೋಪಾಲ ಮೂರ್ತಿ ಆಶ್ರಯವಾಗಿರಲಾಗಿ ನಾವು ಬೇರೆ ಏತರ ದನ್ನು ಅರಸಿಯೇವು ?

ಲಕ್ಷ್ಮೀದೇವಿ ಆಸಕ್ತಿಯಿಂದ ಅನುಭವಿಸತಕ್ಕ ಸೌಕುಮಾರ್ಯ, ರಾಧೆಯ ಸ್ತನ ವೈಪುಲ್ಯದ ರಸವನ್ನು ಬಲ್ಲದ್ದು, ಮೂರು ಲೋಕಗಳ ಚೆಲುವಿನ ಒಂದೇ ನೆಲೆ ಆದ ಓಜ, ಘಗಲಿರುಳು ನನ್ನ ಚೇತನದಲ್ಲಿ ನೆಲಸಿರಲಿ.

ವಯಮೇತೇ ವಿಶ್ವಸಿಮಃ
ಕರುಣಾಕರಮೂರ್ತಿ ಕಿಂವದಂತ್ಯಂಗೇ
ಅಪಿಚ ವಿಭೋ ತವ ಲಲಿತೇ
ಚಪಲತರಾ ಮತಿರಿಯಂ ಬಾಲ್ಯೇ ೨[illegible]

ವತ್ಸಪಾಲ ಚರಃ ಕೋಪಿ
ವತ್ಸಃ ಶ್ರೀವತ್ಸಲಾಂಛನಃ
ಉತ್ಸವಾಯ ಕದಾಭಾವೀ
ತ್ಯುತ್ಸುಕೇ ಮಮ ಲೋಚನೇ ೨[illegible]

ಮಧುರಿಮಭರಿತೇ ಮನೋಭಿರಾಮೇ
ಮೃದುಲತರ ಸ್ಮಿತ ಮುದ್ರಿತಾನನೇಂದೌ
ತ್ರಿಭುವನ ನಯನೈಕಲೋಭನೀಯೇ
ಮಹಸಿ ವಯಂ ವ್ರಜಭಾಜಿ ಲಾಲಸಾಃ ಸ್ಮಃ ೨[illegible]

ಮುಖಾರವಿಂದೇ ಮಕರಂದಬಿಂದು
ನಿಷ್ಯಂದಲೀಲಾ ಮುರಲೀ ನಿನಾದೇ
ವ್ರಜಾಂಗನಾಪಾಂಗ ತರಂಗ ಭೃಂಗ
ಸಂಗ್ರಾಮ ಭೂಮೌ ತವ ಲಾಲಸಾಃ ಸ್ಮಃ ೨[illegible]

ಆತಾಮ್ರಾಯತ ಲೋಚನಾಂಶುಲಹರೀ ಲೀಲಾ ಸುಧಾಪ್ಯಾಯಿತೈಃ
ಗೀತಾಮ್ರೇಡಿತದಿವ್ಯ ಕೇಳಿ ಭರಿತೈಃ ಸ್ಫೀತಂ ವ್ರಜಶ್ರೀಜನೈಃ
ಸ್ವೇದಾಂಭಃಕಣ ಭೂಷಿತೇನ ಕಿಮಪಿ ಸ್ಮೇರೇಣ ವಕ್ತ್ರೇಂದುನಾ
ಪಾದಾಂಭೋಜಮೃದು ಪ್ರಚಾರಸುಭಗಂ ಪಶ್ಯಾಮಿ ದೃಶ್ಯಂಮಹಃ ೨[illegible]

ಕರುಣಾಕರಮೂರ್ತಿ ಎಂದು ಲೋಕ ಹೊಗಳುವ ಈ ನಿನ್ನಲ್ಲಿ ನಾವು ನಂಬಿಕೆ ಇರಿಸಿದ್ದೇವೆ; ಹಾಗೂ, ಹೇ ವಿಭು, ನಿನ್ನ ಲಲಿತವಾದ ಬಾಲ್ಯವನ್ನು ಕುರಿತು ಈ ಬುದ್ಧಿ ತುಂಬ ಚಪಲಗೊಂಡಿದೆ.

ಗೋಪಾಲ ಬಾಲರ ಮಧ್ಯದ ಆ ಒಬ್ಬ ಹಸುಳೆ ಶ್ರೀವತ್ಸಲಾಂಛನ ಉಳ್ಳವನು ಯಾವಾಗ ನಮಗೆ ಸಂತೋಷ ನೀಡುವನು ಎಂದು ನನ್ನ ಎರಡೂ ಕಣ್ಣು ಉತ್ಸುಕವಾಗಿವೆ.

ಮಾಧುರ್ಯದಿಂದ ತುಂಬಿ ಮನೋಭಿರಾಮವಾಗಿ ಅತ್ಯಂತ ಮೃದುವಾದ ಮುಗುಳು ನಗೆಯಿಂದ ಮುದ್ರಿತವಾಗಿರುವ ಮುಖ ಚಂದ್ರ ಇದೆಯಲ್ಲ, ಮೂರು ಲೋಕದ ಕಣ್ಣಿಗೆ ಏಕಮಾತ್ರ ಆಶೆಯ ವಸ್ತುವಾದದ್ದು, ನಂದ ಗೋಕುಲವಾಸಿಯಾದ ತೇಜಸ್ಸು ಅದನ್ನು ಕುರಿತು ನಾವು ಲಾಲಸರಾಗಿದೇವೆ.

ಕೊಳಲಗಾನ ಜೇನ ಹನಿಯಂತೆ ಸುರಿಯುವ ಲೀಲೆಯ ನಿನ್ನ ಮುಖಾರವಿಂದ, ಗೋಕುಲದ ಸುಂದರಿಯರ ಕಡೆಗಣ್ ನೋಟದ ಅಲೆಯೆಂಬ ತುಂಬಿಗಳ ಕದನದ ಕಳ, ಅದರಲ್ಲಿ ನಾವು ಲಾಲಸರು.

ಇನಸು ಕೆಂಪಾದ ಹರಹ ಕಣ್ಣ ಬೆಳಕ ಕಿರಣದ ಅಲೆಯ ಲೀಲಾಸುಧೆಯಿಂದ ಅಪ್ಯಾಯನ ಪಡೆದು, ಹಾಡಿನಿಂದ ಪ್ರೇರಿತವಾದ ಆನಂದ ನೃತ್ಯದಲ್ಲಿ ಮಗ್ನ ರಾದ ಗೋಕುಲ ಸುಂದರಿಯರಿಂದ ಆವೃತವಾದ, ಬೆವರ ಹನಿಯಿಂದ ಭೂಷಿತವಾಗಿ ನಗೆಗೂಡಿದ ಮುಖ ಚಂದ್ರದ ಕಾರಣದಿಂದ ನೋಡಲರ್ಹ ವಾದ, ಅಡಿದಾವರೆಯ ಹೊದುವಾದ ಚಲನದಿಂದ ಸುಂದರವಾದ, ತೇಜಸ್ಸು ಅದು ಯಾವುದೋ ಇದೆಯೆ ಅದನ್ನು ನೋಡುತ್ತೇನೆ.

ಪಾಣೌ ವೇಣುಃ ಪ್ರಕೃತಿಸುಕುಮಾರಾಕೃತೌ ಬಾಲ್ಯ ಲಕ್ಷ್ಮೀಃ
ಪಾರ್ಶ್ವೇ ಬಾಲಾಃ ಪ್ರಣಯಸರಸಾಲೋಕಿತಾಪಾಂಗ ಲೀಲಾ
ಮೌಳೌ ಬರ್ಹಂ ಮಧುರವದನಾಂಭೋರುಹೇ ಮೌಗ್ಧ್ಯಮುದ್ರೇ
ತ್ಯಾರ್ದ್ರಾಕಾರಂ ಕಿಮಪಿ ಕಿತವಂ ಜ್ಯೋತಿರನ್ವೇಷಯಾಮಃ ೩೦

ಆರೂಢವೇಣು ತರುಣಾಧರವಿಭ್ರಮೇಣ
ಮಾಧುರ್ಯಶಾಲಿ ವದನಾಂಬುಜ ಮುದ್ವಹಂತೀ
ಆಲೋಕ್ಯತಾಂ ಕಿಮನಯಾ ವನದೇವತಾ ವಃ
ಕೈಶೋರಕೇ ವಯಸಿ ಕಾಪಿ ಚ ಕಾಂತಿಯಷ್ಟಿಃ ೩೧

ಅನನ್ಯ ಸಾಧಾರಣಕಾಂತಿ ಕಾಂತಂ
ಆಕ್ರಾಂತ ಗೋಪೀನಯನಾರವಿಂದಮ್
ಪುಂಸಃ ಪುರಾಣಸ್ಯ ನವಂ ವಿಲಾಸಂ
ಪುಣ್ಯೇನ ಪೂರ್ಣೇನ ವಿಲೋಕಯಿಷ್ಯೇ ೩೨

ಸಾಷ್ಟಾಂಗಪಾತಮಭಿವಂದ್ಯ ಸಮಸ್ತಭಾವೈಃ
ಸರ್ವಾನ್ ಸುರೇಂದ್ರನಿಕರಾನಿದಮೇವ ಯಾಚೇ
ಮಂದಸ್ಮಿತಾರ್ದ್ರ ಮಧುರಾನನ ಚಂದ್ರಬಿಂಬೇ
ನಂದಸ್ಯ ಪುಣ್ಯ ನಿಚಯೇ ಮಮ ಭಕ್ತಿರಸ್ತು ೩೩

ಏಷು ಪ್ರವಾಹೇಷು ಸ ಏವ ಮನ್ಯೇ
ಕ್ಷಣೋಽಪಿ ಗಣ್ಯಃ ಪುರುಷಾಯುಷೇಷು
ಆಸ್ವಾದ್ಯತೇ ಯತ್ರ ಕಯಾಪಿ ಭಕ್ತ್ಯಾ
ನೀಲಸ್ಯ ಬಾಲಸ್ಯ ನಿಜಂ ಚರಿತ್ರಮ್ ೩೪

ಕೈಯಲ್ಲಿ ಕೊಳಲು, ಸಹಜವಾಗಿ ಸುಕುಮಾರವಾದ ಆಕಾರದಲ್ಲಿ ಬಾಲ್ಯ ಸೌಂದರ್ಯ, ಪಕ್ಕದಲ್ಲಿ ಪ್ರೀತಿಯಿಂದ ಸರಸವಾಗಿ ನೋಡುವ ಕಡೆಗಣ್ ನೋಟದ ಆಟದ ಬಾಲರು, ಮೌಳಿಯಲ್ಲಿ ನವಿಲಗರಿ, ಮಧುರವಾದ ಮುಖ ಕಮಲದಲ್ಲಿ ಚೆಂದದ ಮುದ್ರೆ, ಹೀಗೆ ಮೋಹಕವಾದ ಆಕಾರ ತಳೆದ ಆ ಅವರ್ಣನೀಯ ಕಿತವ ಜ್ಯೋತಿಯನ್ನು ಅರಸುತ್ತೇವೆ.

ಓ ವನದೇವತೆಗಳೆ, ಮೇಲಿರಿಸಿದ ಕೊಳಲನ್ನುಳ್ಳ ಎಳೆ ತುಟಿಯ ಸೊಬಗಿನಿಂದ ಮಾಧುರ್ಯಶಾಲಿಯಾದ ಮುಖ ಕಮಲವನ್ನು ಧರಿಸಿರುವ, ಕಿಶೋರವಯಸ್ಸಿನದೂ ಅವರ್ಣನೀಯವೂ ಆದ, ಕಾಂತಿಯಷ್ಟಿಯನ್ನು ನೋಡಿರಿ. ಇತರ ವ್ಯಾಪಾರದಿಂದ ನಿಮಗೇನು ಫಲ ?

ಅನನ್ಯ ಸಾಧಾರಣವಾದ ಕಾಂತಿಯಿಂದ ಆಕರ್ಷಕವಾಗಿ ಗೋಪಿಯರ ನಯನಾರವಿಂದವನ್ನು ಆಕ್ರಮಿಸಿರುವ ಪುರಾಣ ಪುರುಷನ ನವವಿಲಾಸವಿದನ್ನು ಪೂರ್ಣ ಪುಣ್ಯದಿಂದ ನೋಡುತ್ತಿದೇನೆ.

ಸಾಷ್ಟಾಂಗವಾಗಿ ಮಲಗಿ ಪ್ರಣಾಮ ಮಾಡಿ ಸರ್ವ ದೇವಪ್ರಮುಖ ಸಮುದಾಯದಲ್ಲಿ ಏಕಾಗ್ರಭಾವದಿಂದ ಈ ಪ್ರಾರ್ಥನೆಯನ್ನು ಮಾತ್ರ ಮಾಡುತ್ತೇನೆ. ಮುಗುಳುನಗೆಯಿಂದ ಸರಸವಾಗಿರುವ ಸುಂದರ ವದನ ಚಂದ್ರಬಿಂಬವಿದೆಯಲ್ಲ, ನಂದನ ಭಾಗ್ಯದ ಸರ್ವಸ್ವವಾದದ್ದು, ಅದರಲ್ಲಿ ನನಗೆ ಭಕ್ತಿ ಮೂಡಲಿ.

ಪುರುಷಾಯುಸ್ಸಿನ ಈ ಪ್ರವಾಹದಲ್ಲಿ ಒಂದೇ ಕ್ಷಣವಾಗಲಿ, ಯಾವುದರಲ್ಲಿ ಎಷ್ಟೋ ಸ್ವಲ್ಪ ಭಕ್ತಿಯಿಂದಲಾದರೂ ನೀಲವಿಗ್ರಹದ ಬಾಲನನ್ನು ಕುರಿತ ಕಥೆಯನ್ನು ಸವಿಯುತ್ತೇನೆ, ಆ ಕ್ಷಣವನ್ನು ನಾನು ಬೆಲೆಯದೆಂದು ಎಣಿಸುತ್ತೇನೆ,

ನಿಸರ್ಗಸರಸಾಧರಂ ನಿಜದಯಾರ್ದ್ರದಿವ್ಯೇಕ್ಷಣಂ
ಮನೋಜ್ಞ ಮುಖಪಂಕಜಂ ಮಧುರಸಾರ್ದ್ರ ಮಂದಸ್ಮಿತಮ್
ರಸಜ್ಞ ಹೃದಯಾಸ್ಪದಂ ರಮಿತ ವಲ್ಲವೀಲೋಚನಂ
ಪುನಃ ಪುನರುಪಾಸ್ಮಹೇ ಭುವನ ಲೋಭನೀಯಂ ಮಹಃ ೩೫

ಸ ಕೋಽಪಿ ಬಾಲಸ್ಸರಸೀರುಹಾಕ್ಷಃ
ಸಾ ಚ ವ್ರಜಸ್ತ್ರೀಜನ ಪಾದ ಧೂಳಿಃ
ಮುಹುಸ್ತದೇತದ್ಯುಗಳಂ ಮದೀಯೇ
ಮೋಮುಹ್ಯಮಾನೇಽಪಿ ಮನಸ್ಯುದೇತು ೩೬

ಮಯಿ ಪ್ರಯಾಣಾಭಿಮುಖೇ ಚ ವಲ್ಲವೀ
ಸ್ತನದ್ವಯೀ ದುರ್ಲಲಿತ ಸ್ಸ ಬಾಲಕಃ
ಶನೈಶ್ಶನೈಃ ಶ್ರಾವಿತ ವೇಣುನಿಸ್ವನೋ
ವಿಲಾಸ ವೇಷೇಣ ಪುರಃ ಪ್ರತೀಯತಾಮ್ ೩೭

ಅತಿ ಭೂಮಿಮಭೂಮಿಮೇವ ವಾ
ವಚಸಾಂ ವಾಸಿತ ವಲ್ಲವೀ ಸ್ತನಮ್
ಮನಸಾಮುಪರಂ ರಸಾಯನಂ
ಮಧುರಾದ್ವೈತಮುಪಾಸ್ಮಹೇ ಮಹಃ ೩೮

ಜನನಾಂತರೇಽಪಿ ಜಗದೇಕಮಂಡನೇ
ಕಮನೀಯ ಧಾಮ್ನಿ ಕಮಲಾಯತೇಕ್ಷಣೇ
ವ್ರಜ ಸುಂದರೀಜನ ವಿಲೋಚನಾಮೃತೇ
ಚಪಲಾನಿ ಸಂತು ಸಕಲೇಂದ್ರಿಯಾಣಿ ಮೇ ೩೯

ಸಹಜವಾಗಿ ರಸಯುಕ್ತವಾಗಿರುವ ತುಟಿ, ಸ್ವಭಾವವಾದ ದಯೆಯಿಂದ ತೇವವಾಗಿರುವ ದಿವ್ಯನೇತ್ರ, ಸುಂದರವಾದ ಮುಖಪಂಕಜ, ಮಧುರಸಾರ್ದ್ರ ಆದ ಮುಗುಳುನಗೆ, ಇವನ್ನುಳ್ಳ ಭುವನ ಲೋಭನೀಯವಾದ ತೇಜಸ್ಸು, ಬ್ರಹ್ಮಜ್ಞಾನಿಗಳ ಹೃದಯದಲ್ಲಿ ಎಡೆಮಾಡಿಕೊಂಡಿರುವುದೂ ಗೊಲ್ಲ ಹೆಣ್ಣುಗಳ ಕಣ್ಣನ್ನು ಸಂತೋಷಪಡಿಸಿರುವುದೂ ಯಾವುದು, ಅದನ್ನು ಮರಳಿ ಮರಳಿ ಉಪಾಸಿಸುತ್ತೇನೆ.

ಸರಸೀರುಹಾಕ್ಷನಾದ ಅವರ್ಣನೀಯ ಬಾಲಕ, ಮತ್ತು ನಂದವ್ರಜದ ಸುಂದರಿಯರ ಆ ಪಾದಧೂಳಿ, ಈ ಎರಡು ನನ್ನದಾದ ಮನಸ್ಸಿನಲ್ಲಿ ಅದೆಂಥ ಮೋಹದಲ್ಲೂ ಮರಮರಳಿ ಸ್ಫುರಿಸಲಿ.

ಮತ್ತು ನಾನು ಪ್ರಯಾಣಾಭಿಮುಖನಾದಾಗ, ಗೊಲ್ಲ ಚೆಲುವೆಯರ ಸ್ತನದ್ವಯಗಳಲ್ಲಿ ದಣಿಯುವ ಆ ಬಾಲಕನು, ಮೆಲ್ಲಮೆಲ್ಲನೆ ಕೊಳಲಿನ ಗಾನವನ್ನು ನನ್ನ ಕಿವಿಗೆ ಹಾಕುತ್ತ, ವಿಲಾಸವೇಷದಿಂದ ಎದುರಲ್ಲಿ ಸ್ಫುರಿಸಲಿ.

ಮಾತಿಗೆ ಮನಸ್ಸಿಗೆ ನಿಲುಕದ ವಿಷಯ, ಅಲ್ಲವೆ ವಿಷಯವೇ ಅಲ್ಲ ಎಂಬ ಆ ತೇಜಸ್ಸು ಗೊಲ್ಲ ಸುಂದರಿಯರ ಸ್ತನವನ್ನು ಆವಾಸಮಾಡಿಕೊಂಡದ್ದು, ಮಾಧುರ್ಯಕ್ಕೆ ಎಣೆಯಿಲ್ಲದ ದಿವ್ಯ ರಸಾಯನ, ಅದನ್ನು ಉಪಾಸಿಸುತ್ತೇವೆ.

ಜನ್ಮಾಂತರದಲ್ಲಿಯಾದರೂ ನನ್ನ ಸಕಲೇಂದ್ರಿಯಗಳೂ, ಕಮನೀಯ ತೇಜಕಮಲಾಯತೇಕ್ಷಣವೂ, ಗೋಕುಲದ ಸುಂದರಿಯರ ಲೋಚನಗಳಿಗೆ ಅಮೃತಪ್ರಾಯವೂ ಆದ, ಲೋಕಗಳ ಏಕೈಕ ಸುಂದರಮೂರ್ತಿಯಲ್ಲಿ ಆಸೆ ಉಳ್ಳವಾಗಲಿ.

ಮುನಿ ಶ್ರೇಣೀವಂದ್ಯಂ ಮದಭರಲಸದ್ವಲ್ಲವವಧೂ
ಸ್ತನ ಶ್ರೋಣೀ ಬಿಂಬಸ್ತಿಮಿತನಯನಾಂಭೋಜ ಸುಭಗಂ
ಪುನಃ ಶ್ಲಾಘಾ ಭೂಮಿಂ ಪುಲಕಿತಗಿರಾಂ ನೈಗಮಗಿರಾಂ
ಘನಶ್ಯಾಮಂ ವಂದೇ ಕಿಮಪಿ ಕಮನೀಯಾಕೃತಿ ಮಹಃ ೪

ಅನುಚುಂಬತಾಮವಿಚಲೇನ ಚೇತಸಾ
ಮನುಜಾಕೃತೇರ್ಮಧುರಿಮಶ್ರಿಯಂ ವಿಭೋಃ
ಅಯಿ ದೇವ ಕೃಷ್ಣ ದಯಿತೇತಿ ಜಲ್ಪತಾಂ
ಅಪಿ ನೋ ಭವೇಯುರಪಿ ನಾಮ ತಾದೃಶಾಃ ೪

ಕಿಶೋರ ವೇಷೇಣ ಕೃಶೋದರೀದೃಶಾಂ
ವಿಶೇಷ ದೃಶ್ಯೇನ ವಿಶಾಲ ಲೋಚನಮ್
ಯಶೋದಯಾ ಲಬ್ಧ ಯಶೋನವಾಂಬುಧೇಃ
ನಿಶಾಮಯೇ ನೀಲನಿಶಾಕರಂ ಕದಾ ೪

ಪ್ರಕೃತಿರವತು ನೋ ವಿಲಾಸಲಕ್ಷ್ಮ್ಯಾಃ
ಪ್ರಕೃತಿ ಜಡಂ ಪ್ರಣತಾಪರಾಧ ವೀಥ್ಯಾಮ್
ಸುಕೃತಿ ಕೃತಪದಂ ಕಿಶೋರ ಭಾವೇ
ಸುಕೃತಿ ಮನಃ ಪ್ರಣಿಧಾನ ಪಾತ್ರಮೋಜಃ ೪

ಅಪಹಸಿತ ಸುಧಾ ಮದಾವಲೇಪೈಃ
ಅತಿ ಸುಮನೋಹರಮಾರ್ದ್ರ ಮಂದಹಾಸೈಃ
ವ್ರಜ ಯುವತಿ ವಿಲೋಚನಾವಲೇಹ್ಯಂ
ಘಟಯತು ಧಾಮ ರಮಾವರೋ ಘನಂ ನಃ ೪

ಮುನಿಗಳ ಶ್ರೇಣಿ ವಂದಿಸತಕ್ಕದ್ದು, ಯೌವನ ಮದದ ಭರದಿಂದ ಸುಂದರವಾದ ಗೋಪಸುಂದರಿಯರ ಸ್ತನಶ್ರೋಣಿಗಳ ಬಿಂಬದಲ್ಲಿ ನಿಂತ ಕಣ್ತಾವರೆಯಿಂದ ಸುಂದರವಾದದ್ದು, ವೇದಗಳ ಶಬ್ದಗಳು ರೋಮಾಂಚಗೊಂಡು ಮತ್ತೆ ಮತ್ತೆ ಹೊಗಳುವ ವಸ್ತುವಾದದ್ದು. ಆ ಅವರ್ಣನೀಯ ಮೇಘಶ್ಯಾಮ ಕಮನೀಯಾಕಾರದ ತೇಜಸ್ಸನ್ನು ವಂದಿಸುತ್ತೇನೆ.

ವಿಭುವಿನ ಮಾನವಾಕೃತಿಯ ಸುಮಧುರ ಶ್ರೀಯನ್ನು ನಿಶ್ಚಲಚೇತನರಾಗಿ ಧ್ಯಾನ ಮಾಡುವವರಿಗೆ ಲಭಿಸುವ ಅಂಥ ಭಾಗ್ಯಗಳು, ಓ ದೇವ, ಕೃಷ್ಣ, ಪ್ರಿಯ, ಎಂದು ಮಾತಷ್ಟಕ್ಕೆ ಹೇಳುವ ನಮಗೆ ಕೂಡ ಲಭಿಸಬಹುದೆ ?

ಯಶೋದೆಗೆ ದೊರಕಿದ ಯಶಸ್ಸಿನ ನವಾಂಬುಧಿಯ ವಿಶಾಲ ಲೋಚನದ ನೀಲ ವರ್ಣದ ಚಂದ್ರನನ್ನು, ಗೋಕುಲದ ಸುಂದರಿಯರ ಕಣ್ಣುಗಳ ತುಂಬು ನೋಟಕ್ಕೆ ಯೋಗ್ಯವಾದ ಕಿಶೋರ ವೇಷದಿಂದ ಅದೆಂದು ಕಂಡೇನು ?

ಪ್ರಣತರಾದವರ ಅಪರಾಧಪರಂಪರೆಯ ವಿಷಯದಲ್ಲಿ ಸಹಜವಾಗಿ ಅಲಕ್ಷ್ಯ ಮಾಡುವುದು, ಪುಣ್ಯಕರ್ಮರಾದ ಜನರಲ್ಲಿ ನೆಲೆ ಮಾಡಿಕೊಳ್ಳುವುದು, ಸಜ್ಜನರ ಮನಸ್ಸಿನ ನಿಶ್ಚಲಧ್ಯಾನಕ್ಕೆ ಪಾತ್ರವಾದದ್ದು, ಆ ತೇಜಸ್ಸು, ವಿಲಾಸವಿಭವದ ಮೂಲವಾದದ್ದು, ಕಿಶೋರ ಭಾವದಲ್ಲಿ ನಮ್ಮನ್ನು ರಕ್ಷಿಸಲಿ.

ಸುಧೆಯ ಮದದ ಅಹಂಕಾರವನ್ನು ರೋಡಿಸಿ ನಗುವ ಮಂದಹಾಸದಿಂದ ನಂದ ಗೋಕುಲದ ಸುಂದರಿಯರ ಕಣ್ಣುಗಳಿಗೆ ಅವಲೇಹ್ಯವಾದ, ರಮಾದೇವಿಯ ಅಂತಃಪುರವಾದ, ಆ ಅತಿ ಸುಮನೋಹರ ತೇಜಸ್ಸು ನಮ್ಮನ್ನು ಸಂತೋಷ ಪಡಿಸಲಿ.

ಅಂಕೂರಿತ ಸ್ಮೇರ ದಶಾ ವಿಶೇಷೈಃ
ಆಶ್ರಾಂತ ಹರ್ಷಾಮೃತ ವರ್ಷಮಕ್ಷ್ಣಾಮ್
ಸಂಕ್ರೀಡತಾಂ ಚೇತಸಿ ಗೋಪಕನ್ಯಾ
ಘನಸ್ತನ ಸ್ವಸ್ತ್ಯಯನಂ ಮಹೋ ನಃ ೪೫

ಮೃಗಮದ ಪಂಕ ಸಂಕರ ವಿಶೇಷಿತ ವನ್ಯ ಮಹಾ
ಗಿರಿತಟ ಗಂಡ ಗೈರಿಕಘನದ್ರವ ವಿದ್ರುಮಿತಮ್
ಅಜಿತ ಭುಜಾಂತರಂ ಭಜತ ಹೇ ಬತ ಗೋಪವಧೂ
ಸ್ತನಕಲಶ ಸ್ಥಲೀ ಘುಸೃಣ ಮರ್ದನ ಕರ್ದಮಿತಮ್ ೪೬

ಆಮೂಲ ಪಲ್ಲವಿತ ಲೀಲಮಪಾಂಗ ಜಾಲೈಃ
ಆಸಿಂಚತೀ ಭುವನಮಾದೃತ ಗೋಪವೇಷಾ
ಬಾಲಾಕೃತಿ ರ್ಮೃದುಲ ಮುಗ್ಧ ಮುಖೇಂದು ಬಿಂಬಾ
ಮಾಧುರ್ಯಸಿದ್ಧಿ ರವತಾನ್ಮಧುವಿದ್ವಿಷೋ ನಃ ೪೭

ವಿರಣನ್ಮಣಿನೂಪುರಂ ವ್ರಜೇ
ಚರಣಾಂಭೋಜ ಮುಪಾಸ್ವ ಶಾರ್ಙ್ಗಿಣಃ
ಸರಸೇ ಸರಸಿ ಶ್ರಿಯಾಶ್ರಿತಂ
ಕಮಲಂ ವಾ ಕಲಹಂಸನಾದಿತಮ್ ೪೮

ಶರಣಮಶರಣಾನಾಂ ಶಾರದಾಂಭೋಜನೇತ್ರಂ
ನಿರವಧಿಮಧುರಿಮ್ಣಾ ನೀಲವೇಷೇಣ ರಮ್ಯಂ
ಸ್ಮರ ಶರ ಹರತಂತ್ರ ಸ್ಮೇರ ನೇತ್ರಾಂಬುಜಾಭಿಃ
ವ್ರಜಯುವತಿಭಿರವ್ಯಾ ದ್ಬ್ರಹ್ಮ ಸಂವೇಷ್ಟಿತಂ ನಃ ೪೯

ಅಂಕುರಿಸಿದ ಮಂದಹಾಸದ ಚೆಂದದ ಒಂದು ಪರಿಯಿಂದ ಕಣ್ಣುಗಳಿಗೆ ಒಂದೇ ಸಮನೆ ಸಂತೋಷದ ಮಳೆಯನ್ನು ಸುರಿಸತಕ್ಕ, ಗೋಪಕನ್ಯೆಯರ ಘನಸ್ತನಗಳಿಗೆ ಸ್ವಸ್ತ್ಯಯನವಾದ, ಆ ತೇಜಸ್ಸು ನಮ್ಮ ಚೇತನದಲ್ಲಿ ಚೆನ್ನಾಗಿ ಆಡಲಿ.

ಗೋಪವಧುಗಳ ಸ್ತನಕಲಶ ಸ್ಥಲದ ಅಂಗರಾಗ ತಿಕ್ಕಿ, ಕರ್ದಮಿತವಾಗಿ, ಕಸ್ತೂರಿಮೃಗದ ಮದಪಂಕ ಬೆರೆತು ಅತಿಶಯವಾದ, ವನ್ಯ ಮಹಾಗಿರಿತಟದ ಗಂಡ ಶೈಲದ ಮೇಲಣ ಘನದ್ರವದಂತೆ ಹವಳದ ಬಣ್ಣದಿಂದ ಕಾಣುವ, ಅಜಿತ ಭುಜಾಂತರನನ್ನು, ಹೇ ಚೇತನರೇ, ಭಜಿಸಿರಿ ಮತ್ತೆ.

ಗೋಪವೇಷವನ್ನಾದರಿಸಿದ ಬಾಲಾಕೃತಿಯಾಗಿ, ಕೊನೆಗಣ್ಣಲ್ಲಿ ತಳಿರಾದ ಲೀಲೆಯ ಅಪಾಂಗ ಜಾಲದಿಂದ ಲೋಕಕ್ಕೆ ತಂಪು ನೀಡುವ, ಮಧುವಿದ್ವೇಷಿಯ ಮೃದುಲ ಮುಗ್ಧ ಮುಖೇಂದು ಬಿಂಬದ ಮಾಧುರ್ಯಸಿದ್ಧಿ ನಮ್ಮನ್ನು ರಕ್ಷಿಸಲಿ.

ಸರಸ ಸರೋವರದಲ್ಲಿ ಕಲಹಂಸನಾದಿತ ಕಮಲದಂತಿರುವ, ನಂದವ್ರಜದಲ್ಲಿ ಸದ್ದು ಮಾಡುವ ಮಣಿನೂಪುರದ ಶಾರ್ಙ್ಗಧಾರಿಯ ಚರಣಾಂಭೋಜವನ್ನು ಉಪಾಸಿಸು.

ದಿಕ್ಕಿಲ್ಲದವರಿಗೆ ದಿಕ್ಕಾದ, ಶಾರದಾಂಭೋಜನೇತ್ರವೂ, ನಿರವಧಿ ಮಾಧುರ್ಯದ ನೀಲ ವೇಷದಿಂದ ರಮ್ಯವೂ, ಮದನ ಬಾಣದಿಂದ ಪರತಂತ್ರವಾದ ನಗೆಗಣ್ಣಾವರೆಗಳ ಗೋಪ ತರುಣಿಯರಿಂದ ಸಂವೇಷ್ಟಿತವೂ, ಆದ ಬ್ರಹ್ಮ ನಮ್ಮನ್ನು ರಕ್ಷಿಸಲಿ.

ಸುವ್ಯಕ್ತ ಕಾಂತಿಭರ ಸೌರಭ ದಿವ್ಯಗಾತ್ರಂ
ಅವ್ಯಕ್ತ ಯೌವನ ಪರೀತ ಕಿಶೋರ ಭಾವಮ್
ಗವ್ಯಾನು ಪಾಲನವಿಧಾವನು ಶಿಷ್ಯಮವ್ಯಾತ್
ಅವ್ಯಾಜರಮ್ಯಮಖಿಲೇಶ್ವರ ವೈಭವಂ ನಃ ೫೦

ಅನುಗತಮರೀಣಾಮಂಬರಾಲಂಬಿನೀನಾಂ
ನಯನ ಮಧುರಿಮ ಶ್ರೀ ನರ್ಮ ನಿರ್ಮಾಣ ಸೀಮ್ನಾಮ್
ವ್ರಜಯುವತಿ ವಿಲಾಸವ್ಯಾಪೃತಾಪಾಂಗಮವ್ಯಾತ್
ತ್ರಿಭುವನ ಸುಕುಮಾರಂ ದೇವ ಕೈಶೋರಕಂ ನಃ ೫೧

ಆಪಾದಮಾಚೂಡಮತಿ ಪ್ರಸಕ್ತೈಃ
ಆಪೀಯಮಾನಾ ಯಮಿನಾಂ ಮನೋಭಿಃ
ಗೋಪೀಜನ ಜ್ಞಾತರಸ್ಯಾವತಾ ನ್ನೋ
ಗೋಪಾಲ ಭೂಪಾಲ ಕುಮಾರ ಮೂರ್ತಿಃ ೫೨

ದಿಷ್ಟ್ಯಾ ಬೃಂದಾವನ ಮೃಗದೃಶಾಂ ವಿಪ್ರಯೋಗಾಕುಲಾನಾಂ
ಪ್ರತ್ಯಾಸನ್ನಂ ಪ್ರಣಯ ಚಪಲಾಪಾಂಗ ವೀಚೀತರಂಗೈಃ
ಲಕ್ಷ್ಮೀ ಲೀಲಾ ಕುವಲಯದಳ ಶ್ಯಾಮಲಂ ಧಾಮ ಕಾಮಾನ್
ಪುಷ್ಣೀಯಾ ನ್ನಃ ಪುಲಕ ಮುಕುಳಾಭೋಗ ಭೂಷಾವಿಶೇಷಮ್ ೫೩

ಜಯತಿ ಗುಹ ಶಿಖೀಂದ್ರ ಪಿಂಛ ಮೌಳಿಃ
ಸುರಗಿರಿ ಗೈರಿಕ ಕಲ್ಪಿತಾಂಗರಾಗಃ
ಸುರಯುವತಿ ವಿಕೀರ್ಣಸೂನವರ್ಷ
ಸ್ನಪಿತ ವಿಭೂಷಿತ ಕುಂತಲಃ ಕುಮಾರಃ ೫೪

ಸುವ್ಯಕ್ತವಾದ ತುಂಬು ಕಾಂತಿಯ ನರುಗಂಪಿನ ದಿವ್ಯಗಾತ್ರದ, ಅವ್ಯಕ್ತವಾದ ಯೌವನ ಬಳಸಿರುವ ಕಿಶೋರಭಾವದ, ಗೋವುಗಳನ್ನು ಕಾಯುವ ಕ್ರಮದಲ್ಲಿ ಅನುಶಿಷ್ಟವಾದ, ಅವ್ಯಾಜರಮ್ಯ ಅಖಿಲೇಶ್ವರ ವೈಭವ ನಮ್ಮನ್ನು ರಕ್ಷಿಸಲಿ.

ಅಂಬರಾಲಂಬಿನಿಯರಾದ ಅಮರಿಯರು ಕಣ್ಣ ಚೆಲುವ ಸಿರಿಯಿಂದ ಒಲವನ್ನು ಸೂಚಿಸುವುದರಲ್ಲಿ ಎಲ್ಲೆಮುಟ್ಟಿ ಅನುಸರಿಸುವುದು, ವ್ರಜಯುವತಿಯರ ವಿಲಾಸದಲ್ಲಿ ವ್ಯಾಪೃತವಾದ ಅಪಾಂಗವುಳ್ಳದ್ದು, ಆದ ತ್ರಿಭುವನ ಸುಕುಮಾರ ವಾದ ದೇವ ಕೈಶೋರಕ ನಮ್ಮನ್ನು ರಕ್ಷಿಸಲಿ.

ಯೋಗಿಜನರ ಮನಸ್ಸು ಅಡಿ ಮೊದಲು ಮುಡಿವರೆಗೆ ಅತ್ಯಂತ ಆದರದಿಂದ ಪಾನಮಾಡುತ್ತಿರುವ, ಗೋಪಿಯರಿಗೆ ತಿಳಿದ ರಸದ, ಗೋಪಾಲ ಭೂಪಾಲ ಕುಮಾರನ ಮೂರ್ತಿ ನಮ್ಮನ್ನು ರಕ್ಷಿಸಲಿ.

ವಿಪ್ರಯೋಗದಿಂದ ಆಕುಲರಾದ ಬೃಂದಾವನ ಮೃಗಾಕ್ಷಿಯರಿಗೆ ಪ್ರಣಯದಿಂದ ಚಪಲವಾದ ಅಪಾಂಗ ವೀಚಿಯ ತರಂಗಗಳಿಂದ ಹಠಾತ್ ಪ್ರತ್ಯಕ್ಷನಾಗಿ ಅವರ ರೋಮಾಂಚನದ ಮುಗುಳ ವೈಭವವೇ ಭೂಷಣ ವಿಶೇಷವಾದ, ಕುವಲಯದಳ ಶ್ಯಾಮಲವಾದ ಲಕ್ಷ್ಮೀ ಲೀಲಾಧಾಮ ನಮ್ಮ ಅಪೇಕ್ಷೆಗಳನ್ನು ಪೋಷಿಸಲಿ.

ಸ್ಕಂದನ ನವಿಲಗರಿಯನ್ನು ತಲೆಗಿಟ್ಟು, ಮೇರುವಿನ ಗೈರಿಕವನ್ನು ಮೈಗೆ ಲೇಪಿಸಿ, ಸುರಯುವತಿಯರು ಚೆಲ್ಲಿದ ಪುಷ್ಪ ವರ್ಷದಿಂದ ತೊಯ್ದು ಭೂಷಣ ಪಡೆದ ಕುಂತಲದಿಂದ, ನಂದಕುಮಾರನು ಜಯಶೀಲನಾಗಿದಾನೆ.

ಮಧುರ ಮಂದ ಶುಚಿಸ್ಮಿತ ಮಂಜುಲಂ
ಮದನಪಂಕಜಮಂಗಜವೇಲ್ಲಿತಮ್
ವಿಜಯತಾಂ ವ್ರಜಬಾಲವಧೂ ಜನ
ಸ್ತನತಟೀವಿಲುಠನ್ನಯನಂ ವಿಭೋಃ ೫೫

ಆಲಸವಿಲಸನ್ಮುಗ್ಧ ಸ್ನಿಗ್ಧಸ್ಮಿತಂ ವ್ರಜಸುಂದರೀ
ಮದನಕದನಸ್ವಿನ್ನಂ ಧನ್ಯಂ ಮಹದ್ವದನಾಂಬುಜಮ್
ತರುಣಮರುಣಜ್ಯೋತ್ಸ್ನಾ ಕಾರ್ತ್ಸ್ನ್ಯ ಸ್ಮಿತಸ್ನಪಿತಾಧರಂ
ಜಯತಿ ವಿಜಯಶ್ರೇಣೀ ವೇಣೀ ದೃಶಾಂ ಮದಯನ್ಮಹಃ ೫೬

ರಾಧಾ ಕೇಳಿಕಟಾಕ್ಷ ವೀಕ್ಷಿತ ಮಹಾವಕ್ಷಃಸ್ಥಲೀ ಮಂಡನಾ
ಜೀಯಾಸುಃ ಪುಲಕಾಂಕುರಾಸ್ತ್ರಿಭುವನ ಸ್ವಾದೀಯಸಸ್ತೇಜಸಃ
ಕ್ರೀಡಾಂತಪ್ರತಿಸುಪ್ತದುಗ್ಧ ತನಯಾ ಮುಗ್ಧಾವಬೋಧಕ್ಷಣ
ತ್ರಾಸಾರೂಢ ದೃಢೋಪಗೂಹನ ಮಹಾಸಾಮ್ರಾಜ್ಯಸಾಂದ್ರಶ್ರಿಯಃ

ಸ್ಮಿತಸ್ನುತ ಸುಧಾಧರ ಮದಶಿಖಂಡಿಬರ್ಹಾಂಕಿತಾ
ವಿಶಾಲನಯನಾಂಬುಜಾ ವ್ರಜವಿಲಾಸಿನೀ ವಾಸಿತಾಃ
ಮನೋಜ್ಞಮುಖಪಂಕಜಾ ಮಧುರವೇಣುನಾದದ್ರವಾ
ಜಯಂತಿ ಮಮ ಚೇತಸಶ್ಚಿರಮುಪಾಸಿತಾ ವಾಸನಾಃ ೫೮

ಜೀಯಾದಸೌ ಶಿಖಿ ಶಿಖಂಡಕೃತಾವತಂಸಾ
ಸಾಂಸಿದ್ಧಿಕೀ ಸರಸಕಾಂತಿ ಸುಧಾಸಮೃದ್ಧಿಃ
ಯದ್ಬಿಂದುಲೇಶ ಕಣಿಕಾ ಪರಿಮಾಣ ಭಾಗ್ಯಃ
ಸೌಭಾಗ್ಯಸೀಮಪದಮಂಚತಿ ಪಂಚಬಾಣಃ ೫೯

ಮಧುರ ಮಂದ ಶುಚಿ ಆದ ಮುಗುಳುನಗೆಯಿಂದ ಮಂಜುಲವಾಗಿರುತ್ತ ಮನ್ಮಥನಿಂದ ಚಂಚಲಗೊಂಡು ವ್ರಜದ ಬಾಲವಧೂಜನದ ಸ್ತನತಟಿಯಲ್ಲಿ ಸುಳಿಯುವ ಕಣ್ಣುಳ್ಳ, ವಿಭುವಿನ ವದನಪಂಕಜ ವಿಜಯಿಯಾಗಲಿ.

ಮಂದಪ್ರಕಾಶದ ಮುಗ್ಧ ಸ್ನಿಗ್ಧ ಆದ ಮುಗುಳುನಗೆಯು, ನಂದವ್ರಜದ ಸುಂದರೀ ಸುರತದಿಂದ ಬೆವೆತು ಬಹು ಧನ್ಯವಾಗಿರುವ ಮುಖಕಮಲದ, ಕೆನ್ನೆಕಾಂತಿಯು ಸರ್ವಸ್ವವಾದ ಎಳನಗೆಯಿಂದ ನನೆದ ಎಳೆಯ ಅಧರದ, ತೇಜಸ್ಸು, ಏಣಾಕ್ಷಿಯರ ವಿಜಯಶ್ರೇಣಿಯನ್ನು ಮತ್ತರನ್ನಾಗಿ ಮಾಡುತ್ತ ಗೆದ್ದಿದೆ.

ಕ್ರೀಡೆಯ ಅಂತ್ಯದಲ್ಲಿ ಮರಳಿ ನಿದ್ರಿಸಿ ಮುಗ್ಧವಾಗಿ ಎಚ್ಚರಗೊಳ್ಳುವ ಕ್ಷಣದಲ್ಲಿ ಕ್ಷೀರಸಾಗರತನಯೆ ಭಯಗೊಂಡು ದೃಢವಾಗಿ ಆಲಿಂಗಿಸುವ ಮಹಾಸಾಂರಾಜ್ಯ ಸಾಂದ್ರಶ್ರೀಗಳೂ, ರಾಧೆ ಲೀಲಾ ಕಟಾಕ್ಷದಿಂದ ವೀಕ್ಷಿಸುವ ವಿಶಾಲ ವಕ್ಷಃಸ್ಥಲಕ್ಕೆ ಅಲಂಕಾರಗಳೂ ಆದ, ತ್ರಿಲೋಕಕ್ಕೆ ಅತಿಶಯ ಪ್ರೀತಿ ವಿಷಯವಾದ ತೇಜಸ್ಸಿನ ಪುಲಕಾಂಕುರಗಳು ಜಯಿಸಲಿ.

ನನ್ನ ಚೇತನದ ಚಿರಕಾಲ ಉಪಾಸಿತ ಆದ ವಾಸನಗಳು, ನಗೆಯೊಸರುವ ಅಮೃತದ ತುಟಿಗಳಾಗಿ, ಮದಿಸಿದ ಗಂಡುನವಿಲಗರಿಯಿಂದ ಲಾಂಛಿತಗಳಾಗಿ, ವಿಶಾಲನಯನಾಂಬುಜಗಳಾಗಿ, ವ್ರಜವಿಲಾಸಿನಿಯರಿಂದ ವಾಸಿತಗಳಾದ ಮನೋಜ್ಞವಾದ ಮುಖಪಂಕಜ ಆಗಿ ಮಧುರವಾದ ವೇಣುನಾದವನ್ನು ದ್ರವಿಸುವವಾಗಿ ಗೆಲ್ಲುತ್ತಿವೆ.

ನವಿಲಗರಿಯಿಂದ ಮಾಡಿದ ಅವತಂಸದ, ಸಂಸಿದ್ಧಿಯ ಸರಸಕಾಂತಿಯೆಂಬ ಸುಧೆಯ ಸಮೃದ್ಧಿ ಇದು, ಜಯಿಸಲಿ. ಇದರ ಒಂದು ಬಿಂದುಲೇಶದ ಕಣದಷ್ಟು ಭಾಗ್ಯವುಳ್ಳ ಕಾರಣ ಮನ್ಮಥನು ಚೆಲುವಿನ ಎಲ್ಲೆಯ ನೆಲೆಯನ್ನು ಮುಟ್ಟಿದನು,

ಆಯಾಮೇನ ದೃಶೋರ್ವಿಶಾಲತರಯೋ ರಕ್ಷಯ್ಯಮಾರ್ದ್ರಸ್ಮಿತ
ಚ್ಛಾಯಾಧರ್ಷಿತಶಾರದೇಂದು ಲಲಿತಂ ಚಾಪಲ್ಯ ಮಾತ್ರಂ ಶಿಶೋಃ
ಆಯಾಸಾನಪರಾನ್ವಿಧಾಯ ರಸಿಕೈರಾಸ್ವಾದ್ಯಮಾನಂ ಮುಹುಃ
ಜೀಯಾದುನ್ಮದಪಲ್ಲವೀಕುಚಭರಾಧಾರಂ ಕಿಶೋರಂ ಮಹಃ ೬೦

ಸ್ಕಂಧಾವಾರಪದಂ ವ್ರಜಃ ಕತಿಪಯೇ ಗೋಪಾಃ ಸಹಾಯಾದಯಃ
ಸ್ಕಂಧಾಲಂಬಿನಿ ವತ್ಸದಾಮ್ನಿ ಧನದಾ ಗೋಪಾಂಗನಾಃ ಸ್ವಾಂಗನಾಃ
ಶೃಂಗಾರಾ ಗಿರಿಗೈರಿಕಂ ಶಿವಶಿವ ಶ್ರೀಮಂತಿ ಬರ್ಹಾಣಿ ವಾ
ಶೃಂಗಗ್ರಾಹಿಕಯಾ ತಥಾಪಿ ತದಿದಂ ಪ್ರಾಹುಸ್ತ್ರಿಲೋಕೇಶ್ವರಮ್ ೬೧

ಶ್ರೀಮದ್ಬರ್ಹಿಶಿಖಂಡಮಂಡನಜುಷೇ ಶ್ಯಾಮಾಭಿರಾಮತ್ವಿಷೇ
ಲಾವಣ್ಯೈಕರಸಾವಸಿಕ್ತವಪುಷೇ ಲಕ್ಷ್ಮೀಸರಃಪ್ರಾವೃಷೇ
ಲೀಲಾಕೃಷ್ಟರಸಜ್ಞಧರ್ಮಮನಸೇ ಲೀಲಾಮೃತಸ್ರೋತಸೇ
ಕೇ ವಾ ನ ಸ್ಪೃಹಯಂತಿ ಹಂತ ಮಹಸೇ ಗೋಪೀಜನಪ್ರೇಯಸೇ ೬೨

ಆಪಾಟಲಾ ಧರಮಧೀರ ವಿಲೋಲ ನೇತ್ರಂ
ಆಮೋದ ನಿರ್ಭರಿತಮದ್ಭುತ ಕಾಂತಿಪೂರಮ್
ಆವಿಸ್ಮಿತಾಮೃತಮನುಸ್ಮೃತಿ ಲೋಭನೀಯಂ
ಆಮುದ್ರಿತಾನನಮಹೋ ಮಧುರಂ ಮುರಾರೇಃ ೬೩

ಜಾಗೃಹಿ ಜಾಗೃಹಿ ಚೇತಃ
ಚಿರಾಯ ಚರಿತಾರ್ಥತಾ ಭವತಃ
ಅನುಭೂಯತಾಮಿದಮಿದಂ
ಪುರಃ ಸ್ಥಿತಂ ಪೂರ್ಣನಿರ್ವಾಣಮ್ ೬೪

ವಿಶಾಲತರವಾದ ಕಣ್ಣುಗಳ ನೀಳದಿಂದ ಅಕ್ಷಯ್ಯವಾದ, ಆರ್ದ್ರಸ್ಮಿತದ ಛಾಯೆಯಿಂದ ಶರಚ್ಚಂದ್ರನನ್ನು ಧಿಕ್ಕರಿಸುವ ಲಾಲಿತ್ಯದ, ಉಳಿದ ಆಯಾಸಗಳನ್ನು ತೊರೆದು ರಸಿಕರು ಪುನಃ ಪುನಃ ಆಸ್ವಾದಿಸತಕ್ಕ ಮತ್ತು ಉನ್ಮತ್ತರಾದ ಗೊಲ್ಲತಿಯರ ಕುಚಭರ ಆಧಾರ ಆದ, ಶಿಶುವಿನ ಚಪಲ ಕಾಂತಿಯು ಎಳೆಬೆಳಕು ಜಯಿಸಲಿ.

ದನಗಳ ಬೀಡು ಅರಮನೆ, ಕರುಗಳನ್ನು ಕಟ್ಟುವ ಹಗ್ಗಗಳನ್ನು ಹೆಗಲ ಮೇಲಿಟ್ಟ ಯಾರೋ ಕೆಲಗೋಪರು ಕರಕೊಡುವವರು, ಸಹಾಯಾದಿಗಳು, ಗೋಪಾಂಗನೆಯರ ಅಂತಃಪುರ, ಗಿರಿಯ ಗೈರಿಕ ಇಲ್ಲವೆ ಹೊಳೆಯುವ ಗರಿಗಳ ಶೃಂಗಾರ, ಹೀಗಿದ್ದೂ, ಶಿವಶಿವ, ಜಾಣರ ಅಭಿಪ್ರಾಯದಲ್ಲಿ ಇದು ತ್ರಿಲೋಕಗಳ ಈಶ್ವರನೆಂದು ಪರಿಗಣಿತವಾಯಿತು.

ಹೊಳೆಯುವ ನವಿಲಗರಿಯನ್ನು ತೊಡವು ಮಾಡಿಕೊಂಡ, ಮನೋಹರವಾದ ಶ್ಯಾಮಲಕಾಂತಿಯು ಲಾವಣ್ಯದ ಏಕರಸದಿಂದ ನಾಂದ ಒಡಲಿನ, ಲಕ್ಷ್ಮೀನಾಮಕ ಸರೋವರಕ್ಕೆ ವರ್ಷಋತು ಆದ, ರಸಜ್ಞ ಧರ್ಮ ಮನದ ಜನರನ್ನು ಲೀಲೆಯಿಂದ ಆಕರ್ಷಿಸಿದ್ದಾದ, ಲೀಲಾಮೃತ ಪ್ರವಾಹ ಆದ, ಗೋಪೀಜನ ಪ್ರಿಯತಮವಾದ ಕಾಂತಿಯಿದನ್ನು ಅಯ್ಯೋ. ಯಾರು ತಾನೇ ಬಯಸದೆ ಇದ್ದಾರು ?

ಚೆನ್ನಕೆನ್ನನ ತುಟಿಯು, ಚಂಚಲವಾಗಿ ಆಡುತ್ತಿರುವ ಕಣ್ಣುಗಳ, ಆಮೋದ ನಿರ್ಭರಿತವೂ ಅದ್ಭುತಕಾಂತಿಪೂರವೂ, ತುಂಬುನಗೆಯು ಅಮೃತದ ನಿರಂತರ ಸ್ಮರಣೆಯಿಂದ ಬಯಸಲರ್ಹವೂ, ಆದ ಮುರಾರಿಯು ಆಮುದ್ರಿತಾನನವು ಅಹೋ ಮಧುರ.

ಓ ಚೇತನವೇ ಎಚ್ಚರು ಎಚ್ಚರು. ಬಹುಕಾಲ ಕಳೆದು ನಿನಗೆ ಸಿದ್ಧಿ ಕೈಸೇರಿದೆ. ಇಕೋ ಇಕೋ, ಪೂರ್ಣ ನಿರ್ವಾಣ ಎದುರಲ್ಲಿ ನಿಂತಿದೆ. ಅದನ್ನು ಅನುಭವಿಸು.

ಚರಣಯೋರರುಣಂ ಕರುಣಾರ್ದ್ರಯೋಃ
ಕಚಭರೇ ಬಹುಲಂ ವಿಪುಲಂ ದೃಶೋಃ
ವಪುಷಿ ಮಂಜುಲಮಂಜನ ಮೇಚಕೇ
ವಯಸಿ ಬಾಲಮಹೋ ಮಧುರಂ ಮಹಃ ೬೫

ಮಾಲಾಬರ್ಹ ಮನೋಜ್ಞಕುಂತಲಭರಾಂ ವನ್ಯಪ್ರಸೂನೋಕ್ಷಿತಾಂ
ಶೈಲೇಯದ್ರವಕ್ಲೃಪ್ತಚಿತ್ರತಿಲಕಾಂ ಶಶ್ವನ್ಮನೋಹಾರಿಣೀಂ
ಲೀಲಾವೇಣುರವಾಮೃತೈಕರಸಿಕಾಂ ಲಾವಣ್ಯಲಕ್ಷ್ಮೀ ಮಯೀಂ
ಬಾಲಾಂ ಬಾಲತಮಾಲನೀಲ ವಪುಷಾಂ ವಂದೇ ಪರಾಂ ದೇವತಾಮ್

ಗುರು ಮೃದುಪದೇ ಗೂಢಂ ಗುಲ್ಫೇ ಘನಂ ಜಘನಸ್ಥಲೇ
ನಲಿನಮುದರೇ ದೀರ್ಘಂ ಬಾಹೋರ್ವಿಶಾಲಮುರಃ ಸ್ಥಲೇ
ಮಧುರಮಧರೇ ಮುಗ್ಧಂ ವಕ್ತ್ರೇ ವಿಲಾಸಿವಿಲೋಚನೇ
ಬಹುಕಚಭರೇ ಪನ್ಯಂ ವೇಷೇ ಮನೋಜ್ಞಮಹೋ ಮಹಃ ೬೭

ಜಿಹಾನಂ ಜಿಹಾನಂ ಸುಜಾನೇನ ಮೌಗ್ಧ್ಯಂ
ದುಹಾನಂ ದುಹಾನಂ ಸುಧಾಂ ವೇಣುನಾದೈಃ
ಲಿಹಾನಂ ಲಿಹಾನಂ ಸುದೀರ್ಘೈರಪಾಂಗೈಃ
ಮಹಾನಂದಸರ್ವಸ್ವಮೇಕಂ ನಮಸ್ತ್ರಮ್ ೬೮

ಲಸದ್ಬರ್ಹಾಪೀಡಂ ಲಲಿತಲಲಿತ ಸ್ಮೇರವದನಂ
ಭ್ರಮತ್ಕ್ರೀಡಾಪಾಂಗಂ ಪ್ರಣತ ಜನತಾ ನಿರ್ವೃತಿ ಪದಮ್
ನವಾಂಭೋದ ಶ್ಯಾಮಂ ನಿಜ ಮಧುರಿಮಾಭೋಗಭರಿತಂ
ಪರಂ ದೇವಂ ವಂದೇ ಪರಿಮಿಲಿತ ಕೈಶೋರಕ ರಸಮ್ ೬೯

ಚರಣಗಳಲ್ಲಿ ಅರುಣ, ಕರುಣಾರ್ದ್ರವಾದ ಕಣ್ಣುಗಳಲ್ಲಿ ವಿಪುಲ, ಹೆರಳಭಾರವೋ ಬಹುಳ, ಅಂಜನದಂತೆ ಕರಿದಾದ ದೇಹದಲ್ಲಿ ಮಂಜುಳ, ವಯಸ್ಸಿನಲ್ಲಿ ಬಾಲ ಆಗಿ ಆಹೋ ತೇಜವಿದು ಮಧುರ.

ಮಾಲೆಯಿಂದ ಗರಿಯಿಂದ ಮನೋಜ್ಞವಾದ ಹೆರಳಭಾರದ, ಮೇಲೆ ಚೆಲ್ಲಿರುವ ಕಾನನ ಕುಸುಮಗಳ, ಶಿಲಾಧಾತುಗಳ ದ್ರವದಿಂದ ರಚಿಸಿರುವ ವಿಚಿತ್ರ ತಿಲಕದ, ಲೀಲಾವೇಣುವಿನ ರವಾಮೃತದಲ್ಲಿ ಏಕ ರಸಿಕವಾಗಿರುವ, ನಿತ್ಯ ಮನೋಹಾರಿ ಲಾವಣ್ಯಲಕ್ಷ್ಮೀಮಯಿ ಆದ ಬಾಲತಮಾಲನೀಲ ದೇಹದ, ಬಾಲೆ ಪರಾದೇವತೆ ಯನ್ನು ವಂದಿಸುತ್ತೇನೆ.

ಅಡಿಗಳು ತೀರಾ ಮೃದು, ಮೊಳಕಾಲು ಮರೆ, ಜಘನಸ್ಥಲ ಘನ, ಹೊಕ್ಕುಳು ನಲಿನ, ತೋಳು ದೀರ್ಘ, ಎದೆ ಹರಹು ವಿಶಾಲ, ಅಧರ ಮಧುರ, ವಕ್ತ್ರ ಮುಗ್ಧ, ಇವುಗಳ, ವಿಲಾಸಯುಕ್ತವಾದ ಕಣ್ಣುಗಳ, ಹಿರಿದು ಹೆರಳ ಭಾರದ ವನ್ಯವೇಷದಲ್ಲಿ ಅಹೋ ತೇಜವಿದು ಮನೋಜ್ಞ.

ಹರೆಯದಿಂದ ತನ್ನ ಚೆಲುವನ್ನು ಹೆಚ್ಚಿಸುತ್ತ ಹೆಚ್ಚಿಸುತ್ತ ಇರುವ ವೇಣುನಾದ ದಿಂದ ಸುಧೆಯನ್ನು ಕರೆಯುತ್ತ ಕರೆಯುತ್ತ ಇರುವ, ಸುದೀರ್ಘವಾದ ಅಪಾಂಗ ಗಳಿಂದ ನೋಡುತ್ತ ನೋಡುತ್ತ ಇರುವ, ಮಹಾನಂದ ಸರ್ವಸ್ವ ಏಕ ಆದವ ನನ್ನು ನಮಿಸುವುದಾಗಲಿ.

ಹೊಳೆಯುವ ನವಿಲ ಗರಿ ತಲೆ ತೊಡವಾದ, ಲಲಿತವೆಂದರೆ ಲಲಿತ ಆದ ನಗೆಯ ಮುಖದ, ಚಂಚಲವಾದ ಕ್ರೀಡಾಪಾಂಗದ, ಪ್ರಣತರಾದ ಜನರ ಸುಖ ಸಾಧನ ಆದ, ಹೊಸಕಾಲದ ಮೇಘದಂತೆ ಶ್ಯಾಮಲವಾಗಿ ತನ್ನತೆ ಮಾಧುರ್ಯದ ಪರಿ ಪೂರ್ಣತೆಯಿಂದ ತುಂಬಿ ಕಿಶೋರತೆಯರಸದಿಂದ ತುಂಬ ಬೆರೆತಿರುವ, ಪರದೇವ ನನ್ನು ವಂದಿಸುತ್ತೇನೆ.

ಸಾರಸ್ಯ ಸಾಮಗ್ರ್ಯಮಿವಾನನೇನ
ಮಾಧುರ್ಯ ಚಾತುರ್ಯಮಿವ ಸ್ಮಿತೇನ
ತಾರುಣ್ಯ ಕಾರುಣ್ಯಮಿವೇಕ್ಷಣೇನ
ಚಾಪಲ್ಯಸಾಫಲ್ಯಮಿದಂ ದೃಶೋರ್ಮೇ ೭೦

ಯತ್ರವಾ ತತ್ರವಾ ದೇವ
ಯದಿ ವಿಶ್ವಸಿಮಸ್ತ್ವಯಿ
ನಿರ್ವಾಣಮಪಿ ದುರ್ವಾರಂ
ಅರ್ವಾಚೀನಾನಿ ಕಿಂ ಪುನಃ ೭೧

ರಾಗಾಂಧ ಗೋಪೀಜನ ವಂದಿತಾಭ್ಯಾಂ
ಯೋಗೀಂದ್ರ ಭೃಂಗೇಂದ್ರ ನಿಷೇವಿತಾಭ್ಯಾಮ್
ಆತಾಮ್ರ ಪಂಕೇರುಹ ವಿಭ್ರಮಾಭ್ಯಾಂ
ಸ್ವಾಮಿನ್ಪದಾಭ್ಯಾಮಯಮಂಜಲಿಸ್ತೇ ೭೨

ಅರ್ಥಾನುಲಾಪಾನ್ವ್ರಜಸುಂದರೀಣಾಂ
ಅಕೃತ್ರಿಮಾಣಾಂ ಚ ಸರಸ್ವತೀನಾಮ್
ಆರ್ದ್ರಾಶಯೇನ ಶ್ರವಣಾಂಚಲೇನ
ಸಂಭಾವಯಂತಂ ತರುಣಂ ಗೃಣೀಮಃ ೭೩

ಮನಸಿ ಮಮ ಸಂನಿಧತ್ತಾಂ
ಮಧುರಮುಖಾ ಮಂಥರಾಪಾಂಗಾ
ಕರಕಲಿತ ಲಲಿತವಂಶಾ
ಕಾಪಿ ಕಿಶೋರೀ ಕೃಪಾಲಹರೀ ೭೪

ಸರಸದ ಸಮಗ್ರತೆಯೆಂಬಂತೆ ಮುಖದಿಂದ, ಮಾಧುರ್ಯದ ಚಾತುರ್ಯವೆಂಬಂತೆ ನಗೆಯಿಂದ, ತಾರುಣ್ಯಕಾರುಣ್ಯವೆಂಬಂತೆ ನೋಟದಿಂದ, ಇದು ನನ್ನ ಕಣ್ಣುಗಳ ಚಾಪಲ್ಯವನ್ನು ಸಫಲಗೊಳಿಸಿದೆ.

ಅಲ್ಲಿಯೋ ಎಲ್ಲಿಯೋ ನಿನ್ನನ್ನು ನಂಬಿದೆವೆಂದರೆ, ದೇವ, ನಿರ್ವಾಣವೂ ತಪ್ಪಿದ್ದಲ್ಲ; ಇನ್ನು ಅದಕ್ಕೆ ಕಡಮೆಯ ಸುಖಗಳ ಮಾತೇನು ?

ಪ್ರೇಮದಿಂದ ಅಂಧರಾದ ಗೋಪೀಜನರಿಂದ ವಂದಿತವಾದ, ಯೋಗೀಂದ್ರರೆಂಬ ರಾಯತುಂಬಿಗಳಿಂದ ನಿಷೇವಿತವಾದ, ತೀರ ಕೆಂಪಾದ ತಾವರೆಯ ತೆರನ ವಿಭ್ರಮದ ಪಾದ ನಿನ್ನವಕ್ಕೆ, ಹೇ ಸ್ವಾಮಿ, ಈ ಅಂಜಲಿ.

ಅಕೃತ್ರಿಮ ಸರಸ್ವತಿಯರಾದ ವ್ರಜಸುಂದರಿಯರು ಮರಳಿ ಮರಳಿ ನುಡಿಯುವ ಅರೆನುಡಿಗಳನ್ನು ಸಹೃದಯ ಭಾವದ ಕೊನೆಗಿವಿಯಿಂದ ಮನ್ನಿಸುವನಾದ ತರುಣನನ್ನು ಹೆಸರಿಸೋಣ.

ಮಧುರ ಮುಖದ, ಮಂಥರ ಅಪಾಂಗದ, ಕರದಲ್ಲಿ ಹಿಡಿದ ಲಲಿತವೇಣುವಿನ, ಯಾವುದೋ ಒಂದು ಕಿಶೋರಿ ಆದ, ಆ ಕೃಪಾಲಹರಿ ನನ್ನ ಮನಸ್ಸಿನಲ್ಲಿ ಭದ್ರವಾಗಿ ನಿಲ್ಲಲಿ.

ರಕ್ಷಂತು ನಃ ಶಿಕ್ಷಿತಪಾಶುಪಾಲ್ಯಾ
ಬಾಲಾವೃತಾ ಬರ್ಹಿಶಿಖಾವತಂಸಾಃ
ಪ್ರಾಣಪ್ರಿಯಾ ಪ್ರಸ್ತುತ ವೇಣುಗೀತಾಃ
ಶೀತಾ ದೃಶೋಃ ಶೀತಲಗೋಪಕನ್ಯಾಃ ೭೫

ಸ್ಮಿತ ಸ್ತಬಕಿತಾಧರಂ ಶಿಶಿರ ವೇಣುನಾದಾಮೃತಂ
ಮುಹುಸ್ತರಲಲೋಚನಂ ಮದ ಕಟಾಕ್ಷ ಮಾಲಾಕುಲಮ್
ಉರಸ್ತಟ ವಿಲೀನಯಾ ಕಮಲಯಾ ಸಮಾಲಿಂಗಿತಂ
ಭುವಃಸ್ಥಲಮುಪಾಗತಂ ಭುವನ ದೈವತಂ ಪಾತು ನಃ ೭೬

ನಯನಾಂಬುಜೇ ಭಜತ ಕಾಮದುಘಂ
ಹೃದಯಾಂಬುಜೇ ಕಿಮಪಿ ಕಾರುಣಿಕಮ್
ಚರಣಾಂಬುಜೇ ಮುನಿಕುಲೈಕಧನಂ
ವದನಾಂಬುಜೇ ವ್ರಜವಧೂ ವಿಭವಮ್ ೭೭

ನಿರ್ವಾಸನಂ ಹಂತ ರಸಾಂತರಾಣಾಂ
ನಿರ್ವಾಣಸಾಮ್ರಾಜ್ಯ ಮಿವಾವತೀರ್ಣಮ್
ಅವ್ಯಾಜ ಮಾಧುರ್ಯ ಮಹಾನಿಧಾನಂ
ಅವ್ಯಾದ್ವ್ರಜಾನಾಮಧಿ ದೈವತಂ ನಃ ೭೮

ಖೇಲತಾಂ ಮನಸಿ ಖೇಚರಾಂಗನಾ
ಮಾನನೀಯ ಮೃದುವೇಣು ನಿಸ್ವನೈಃ
ಕಾಲಮೇಘ ಕಲಹೋದ್ವಹಂ ಮಹಃ
ಕಾನನೇ ಕಿಮಪಿ ನಃ ಕೃಪಾಸ್ಪದಮ್ ೭೯

ದನ ಕಾಯುವುದನ್ನು ಕಲಿತ, ಬಾಲರಿಂದ ಆವೃತವಾದ, ನವಿಲಗರಿಯ ತಲೆ ತೊಡವಿನ, ಪ್ರಾಣದಂತೆ ಪ್ರಿಯವಾದ ವೇಣುಗೀತವನ್ನು ಪ್ರಸ್ತುತಮಾಡಿದ, ಗೋಪಕನ್ನೆಯರನ್ನು ತಣಿಸಿದ, ಕಣ್ಗಳ ತಂಪು ನಮ್ಮನ್ನು ರಕ್ಷಿಸಲಿ.

ನಗೆ ಗೊಂಚಲನ್ನು ತಳೆದ ಅಧರ, ತಂಪಾದ ವೇಣುನಾದದ ಅಮೃತ, ಮದ ಕಟಾಕ್ಷ ಮಾಲೆಯಿಂದ ಆಕುಲವಾಗಿ ಮರಮರಳಿ ಚಲಿಸುವ ನೋಟ, ಇವನ್ನು ತಳೆದು, ವಕ್ಷಸ್ಥಲದಲ್ಲಿ ಬೆರೆತ ಲಕ್ಷ್ಮೀದೇವಿಯಿಂದ ಸಮಾಲಿಂಗಿತವಾಗಿರುವ ಭುವನದೈವತ, ಭೂಲೋಕವನ್ನು ಸಾರಿರುವುದು, ನಮ್ಮನ್ನು ರಕ್ಷಿಸಲಿ.

ನಯನಾಂಬುಜದಲ್ಲಿ ಕಾಮಧೇನು, ಹೃದಯಾಂಬುಜದಲ್ಲಿ ಕಾರುಣಿಕ, ಚರಣಾಂಬುಜದಲ್ಲಿ ಮುನಿಕುಲದ ಏಕಧನ, ವದನಾಂಬುಜದಲ್ಲಿ ವ್ರಜವಧುಗಳ ವಿಭವ ಆದ ಅದಾವುದೋ ಆ ತತ್ವವನ್ನು ಸೇವಿಸು.

ಬೇರೆ ರಸಗಳ ತಿರಸ್ಕಾರಕ ರಸವಾಗಿ, ಅವತರಿಸಿ ಬಂದ ಮುಕ್ತಿ ಸಾಮ್ರಾಜ್ಯ ವೆಂಬಂತೆ, ಅವ್ಯಾಜ ಮಾಧುರ್ಯದ ಮಹಾ ನಿಕ್ಷೇಪ ಆದ, ನಂದವ್ರಜಗಳ ಅಧಿದೈವತ ಆಹಾ, ನಮ್ಮನ್ನು ರಕ್ಷಿಸಲಿ.

ಖೇಚರಾಂಗನೆಯರಿಗೂ ಮೆಚ್ಚಾದ ಮೃದುವೇಣು ನಿಸ್ವನಗಳಿಂದ ಕಾಲಮೇಘದೊಡನೆ ಕಾದಲು ಸನ್ನದ್ಧವಾಗಿರುವ ಕೃಪಾಸ್ಪದವಾದ ತೇಜಸ್ಸು ಅದು ಯಾವುದೋ ಅದು ನಮ್ಮ ಮನಸ್ಸಿನ ಕಾನನದಲ್ಲಿ ವಿಹರಿಸಲಿ,

ಗೋಪೀನಾಮಭಿಮತ ಗೀತವೇಷಹರ್ಷಾತ್
ಆಪೀನಸ್ತನಘರ ನಿರ್ಘರೋಪ ಗೂಢಮ್
ಕೇಲೀನಾಮವತು ರಸೈರುಪಾಸ್ಯಮಾನಂ
ಕಾಲಿಂದೀ ಪುಲಿನಚರಂ ಪರಂ ಮಹೋ ನಃ ೮೦

ಏಣೀಶಾಬ ವಿಲೋಚನಾಭಿರಲಸ ಶ್ರೋಣೀಭರ ಪ್ರೌಢಿಭಿಃ
ವೇಣೀಭೂತರಸ ಕ್ರಮಾಭಿರಭಿತಃ ಶ್ರೇಣೀಕೃತಾಭಿರ್ವೃತಃ
ಪಾಣೌದ್ವೌಚ ವಿನೋದಯನ್ ರತಿಪತೇಸ್ತೂಣೀ ಶಯ್ಯೈಃ ಸಾಯಕೈಃ
ವಾಣೀನಾಮಪದಂ ಪರಂ ವ್ರಜಜನಕ್ಷೋಣೀಪತಿಃ ಪಾತು ನಃ ೮೧

ಕಾಲಿಂದೀ ಪುಲಿನೇ ತಮಾಲನಿಬಿಡಚ್ಛಾಯೇ ಪುರಃ ಸಂಚರತ್
ತೋಯೇ ತೋಯಜ ಪತ್ರಪಾತ್ರನಿಹಿತಂ ದಧ್ಯನಮಶ್ನಾತಿ ಯಃ
ವಾಮೇ ಪಾಣಿತಲೇ ನಿಧಾಯ ಮಧುರಂ ವೇಣುಂ ವಿಷಾಣಂ ಕಟಿ
ಪ್ರಾಂತೇ ಗಾಶ್ಚ ವಿಲೋಕಂರ್ಯಪ್ರತಿಕಲಂ ತಂ ಬಾಲಮಾಲೋಕಯೇ

ಯದ್ಗೋಪೀವದನೇಂದು ಮಂಡನಮಭೂತ್ಕಸ್ತೂರಿಕಾ ಪತ್ರಕಂ
ಯಲ್ಲಕ್ಷ್ಮೀಕುಚಶಾತಕುಂಭಕಲಶೇ ವ್ಯಾಕೋಚಮಿಂದೀವರಮ್
ಯನ್ನಿರ್ವಾಣಸಿಧಾನಸಾಧನವಿಧೌ ಸಿದ್ಧಾಂಜನಂ ಯೋಗಿನಾಂ
ತನ್ನಃ ಶ್ಯಾಮಲಮಾವಿರಸ್ತು ಹೃದಯೇ ಕೃಷ್ಣಾಭಿಧಾನಂ ಮಹಃ ೮೩

ಫುಲ್ಲೇಂದೀವರ ಕಾಂತಮಿಂದುವದನಂ ಬರ್ಹಾವತಂಸಪ್ರಿಯಂ
ಶ್ರೀವತ್ಸಾಂಕಮುದಾರಕೌಸ್ತುಭಧರಂ ಪೀತಾಂಬರಮ್ ಸುಂದರಮ್
ಗೋಪಿನಾಂ ನಯನೋತ್ಪಲಾರ್ಚಿತ ತನುಂ ಗೋ ಗೋಪಸಂಘಾವೃತಂ
ಗೋವಿಂದಂ ಕಲವೇಣುನಾದ ನಿರತಂ ದಿವ್ಯಾಂಗಭೂಷಂ ಭಜೇ ೮೪

ಅಭಿಮತವಾದ ಗೀತವೇಷಗಳ ಹರ್ಷದ ದೆಸೆಯಿಂದ ಗೋಪಿಯರು ಆಪೀನ ಸ್ತನಭರದಲ್ಲಿ ನಿರ್ಭರವಾಗಿ ಉಪಗೂಢ ಮಾಡಿದ, ಕೇಲಿಗಳ ರಸಗಳಿಂದ ಉಪಾಸನ ಮಾಡತಕ್ಕದ್ದಾದ, ಪರಂಜ್ಯೋತಿ, ಕಾಲಿಂದೀ ಪುಲಿನಚರ ಆದದ್ದು, ನಮ್ಮನ್ನು ರಕ್ಷಿಸಲಿ.

ಎರಳೆಕರುಗಳ ತೆರನ ಕಣ್ಣುಗಳವರೂ, ಅಲಸ ಮಾಡುವ ನಿತಂಬ ಭಾರದಿಂದ ಪ್ರೌಢಿಯರೂ, ಪ್ರವಾಹವಾದ ರಸಕ್ರಮದವರೂ, ಆದ ವ್ರಜಯುವತಿಯರು, ಬತ್ತಳಿಕೆಯ ಕಣೆಗಳಿಂದ ರತಿಪತಿಯ ಎರಡೂ ಕೈಗಳನ್ನು ಬಳಕೆಗೆ ತಂದು, ಶ್ರೇಣಿಯಾಗಿ ಸುತ್ತಿರುವುದಾದ, ಗೋಕುಲದ ಜನರ ದೊರೆಯಾದ, ಉಕ್ತ್ಯತೀತ ಪರತತ್ತ್ವ ನಮ್ಮನ್ನು ರಕ್ಷಿಸಲಿ.

ಕಾಲಿಂದಿಯ ಪುಲಿನದಲ್ಲಿ ತಮಾಲದ ನಿಬಿಡವಾದ ಛಾಯೆಯಲ್ಲಿ, ಎದುರಲ್ಲಿ ನೀರು ಹರಿಯುತ್ತಿರಲಾಗಿ, ಎಡಗೈಯಲ್ಲಿ ಮಧುರವೇಣುವನ್ನು ನಡುವಿನಲ್ಲಿ ಕೊಂಬನ್ನು ಇರಿಸಿ, ಕ್ಷಣಕ್ಷಣವೂ ದನಗಳನ್ನು ನೋಡಿಕೊಳ್ಳುತ್ತ ಕಮಲದ ಎಲೆಯಲ್ಲಿಟ್ಟ ಮೊಸರನ್ನವನ್ನು ಯಾವನು ಉಣ್ಣುತ್ತಾನೆ ಆ ಬಾಲಕನನ್ನು ನೋಡುತ್ತೇನೆ.

ಯಾವುದು ಗೋಪಿಯ ಮುಖಚಂದ್ರದಲ್ಲಿ ಕಸ್ತೂರಿ ತಿಲಕದಂದ ಅಲಂಕಾರ ಆಯಿತು, ಯಾವುದು ಲಕ್ಷ್ಮೀದೇವಿಯ ಕುಚಗಳ ಸ್ವರ್ಣಕುಂಭ ಕಲಶದಲ್ಲಿ ಅರಳುವ ಕುವಲಯವಾಯಿತು, ಯಾವುದು ಯೋಗಿಗಳಿಗೆ ಮುಕ್ತಿ ನಿಕ್ಷೇಪದ ಸಾಧನಕ್ರಮದಲ್ಲಿ ಸಿದ್ಧಾಂಜನ, ಕೃಷ್ಣನಾಮಕವಾದ ಆ ಶ್ಯಾಮಲ ತೇಜಸ್ಸು ನಮ್ಮ ಹೃದಯದಲ್ಲಿ ಪ್ರಕಾಶಿಸಲಿ.

ಅರಳಿದ ಇಂದೀವರದ ಕಾಂತಿಯ, ಚಂದ್ರನಂಥ ಮುಖವುಳ್ಳ, ನವಿಲಗರಿಯ ತಲೆ ತೊಡವು ಯಾರಿಗೆ ಪ್ರಿಯ ಆ ಶ್ರೀವತ್ಸಾಂಕ; ಉದಾರ ಕೌಸ್ತುಭಧರ ಪೀತಾಂಬರಧಾರಿ ಆದ ಸುಂದರ; ಗೋಪಿಯರ ನಯನೋತ್ಸವಾರ್ಚಿತವಾದ ತನುವಿನ, ಗೋವೃಗಳ ಗೋಪರ ಸಂಘದಿಂದ ಆವೃತನಾಗಿ ಕಲವೇಣುನಾದ ನಿರತನಾದ ದಿವ್ಯಾಂಗ ಭೂಷ; ಈ ಗೋವಿಂದನನ್ನು ನಾನು ಭಜಿಸುತ್ತೇನೆ.

ರಕ್ಷಂತು ತ್ವಾಮಸಿತ ಜಲಜೈರಂಜಲಿಃ ಪಾದ ಮೂಲೇ
ಮೀನಾ ನಾಭೀಸರಸಿ ಹೃದಯೇ ಮಾರಬಾಣಾ ಮುರಾರೇಃ
ಹಾರಾಃ ಕಂಠೇ ಹರಿಮಣಿಮಯಾ ವಕ್ತ್ರಪದ್ಮೇ ದ್ವಿರೇಫಾಃ
ಪಿಂಛಾ ಚೂಡಾಶ್ಚಿಕುರನಿಚಯೇ ಘೋಷಯೋಷಿತ್ಕಟಾಕ್ಷಾಃ ೮೫

ದಧಿಮಥನ ನಿನಾದೈಸ್ತ್ಯಕ್ತನಿದ್ರಪ್ರಭಾತೇ
ನಿಭೃತಪದಮಗಾರಂ ವಲ್ಲವೀನಾಂ ಪ್ರವಿಷ್ಟಃ
ಮುಖಕಮಲ ಸಮೀರೈರಾಶು ನಿರ್ವಾಪ್ಯ ದೀಪಾನ್
ಕಬಲಿತನವನೀತಃ ಪಾತು ಗೋಪಾಲಬಾಲಃ ೮೬

ಪ್ರಾತಃಸ್ಮರಾಮಿ ದಧಿಘೋಷವಿಧೂತನಿದ್ರಂ
ನಿದ್ರಾವಸಾನ ರಮಣೀಯಮುಖಾರವಿಂದಮ್
ಹೃದ್ಯಾನವದ್ಯವಪುಷಂ ನಯನಾಭಿರಾಮಂ
ಉನ್ನಿದ್ರ ಪದ್ಮನಯನಂ ನವನೀತ ಚೋರಮ್ ೮೭

ಫುಲ್ಲ ಪಲ್ಲಕ ವತಂಸಕೋಜ್ಜ್ವಲತ್
ಗಲ್ಲಮಾಗಮ ಗವೀಗವೇಷಿತಮ್
ವಲ್ಲವೀ ಚಿಕುರ ವಾಸಿತಾಂಗುಲೀ
ಪಲ್ಲವಂ ಕಮಪಿ ವಲ್ಲವಂ ಭಜೇ ೮೮

ಸ್ತೇಯಂ ಹರೇರ್ಹರತಿ ಯಸ್ಸ್ವನವನೀತಚೌರ್ಯಂ
ಜಾರತ್ವಮಸ್ಯ ಗುರುತಲ್ಪಕೃತಾಪರಾಧಮ್
ಹತ್ಯಾಂ ದಶಾನನ ಹತಿರ್ಮಧುಪಾನಗೋಷ್ಠಿಂ
ಯತ್ಪೂತ ನಾಸ್ತನಪಯಃ ಸ ಪುನಾತು ಕೃಷ್ಣಃ ೮೯

ಮುರಾರಿಯ ಪಾದಮೂಲದಲ್ಲಿ ಕನ್ನೈದಿಲೆಗಳ ಅಂಜಲಿಯಂತೆ, ನಾಭಿಸರೋವರ ದಲ್ಲಿ ಮೀನುಗಳಂತೆ, ವಕ್ಷಃಸ್ಥಳದಲ್ಲಿ ಮನ್ಮಥಶರಗಳಂತೆ, ಕಂಠದಲ್ಲಿ ನೀಲ ಮಣಿಯ ಹಾರಗಳಂತೆ, ಮುಖ ಕಮಲದಲ್ಲಿ ತುಂಬಿಗಳಂತೆ, ಹೆರಳ ಮೇಲೆ ನವಿಲಗರಿಯ ತೊಡವಂತೆ, ಕಂಡ ವ್ರಜ ಸುಂದರಿಯರ ಕಟಾಕ್ಷಗಳು ನಿನ್ನನ್ನು ರಕ್ಷಿಸಲಿ.

ಮುಂಜಾವಿನಲ್ಲಿ ಮೊಸರು ಕಡೆಯುವ ಶಬ್ದದಿಂದ ಎಚ್ಚರಗೊಂಡು, ಸದ್ದಿಲ್ಲದ ನಡೆಯಿಂದ ಗೊಲ್ಲತಿಯರ ಮಂದಿರಗಳನ್ನು ಹೊಕ್ಕು, ಮುಖಕಮಲ ಸಮೀರ ದಿಂದ ದೀಪಗಳನ್ನು ಬೇಗ ಆರಿಸಿ, ಬೆಣ್ಣೆಯನ್ನು ಕಬಳಿಸಿದ ಗೋಪಾಲ ಬಾಲನು ರಕ್ಷಿಸಲಿ.

ದಧಿಘೋಷದಿಂದ ಚೆದರಿದ ನಿದ್ರೆಯ, ಮುಗಿದ ನಿದ್ರೆಯಿಂದ ರಮಣೀಯ ವಾಗಿರುವ ಮುಖಾರವಿಂದದ, ಹೃದ್ಯವಾದ ಅನದ್ಯವಪುಷ ನಯನಾಭಿರಾಮ ಆದ, ಅರಳಿದ ತಾವರೆಯಂದದ ಕಣ್ಣುಗಳ ನವನೀತ ಚೋರನನ್ನು ಬೆಳಗಾಗ ನೆನೆಯುತ್ತೇನೆ.

ಕಿವಿಗಳಲ್ಲಿ ತೊಟ್ಟ ಅರಳಿದ ಕೆಂದಾವರೆಗಳಿಂದ ಉಜ್ವಲವಾದ ಕೆನ್ನೆಯುಳ್ಳ, ವೇದದ ಶಬ್ದಗಳು ಅರಸುವವನಾದ, ಗೊಲ್ಲತಿಯರ ಕುರುಳುಗಳಿಂದ ಕಂಪು ಪಡೆದ ಅಂಗುಲಿ ಪಲ್ಲವದ, ಅವರ್ಣನೀಯನಾದ ಆ ಗೊಲ್ಲನನ್ನು ಭಜಿಸುತ್ತೇನೆ.

ಹರಿಯ ಯಾವ ನವನೀತಚೌರ್ಯ ಕಳವಿನ ದೋಷವನ್ನೂ, ಅವನ ಚಾರಿತ್ರ್ಯ ಗುರುತಲ್ಪ ಕೃತಾಪರಾಧವನ್ನೂ, ದಶಾನನನ ಕೊಲೆ ಕೊಲೆಯ ದೋಷವನ್ನೂ, ಪೂತನೆಯ ಮೊಲೆ ಹಾಲು ಮಧುಪಾನಗೋಷ್ಠಿ ದೋಷವನ್ನೂ, ಕಳೆಯುವುವು: ಆ ಕೃಷ್ಣನು ಪಾವನ ಮಾಡಲಿ.

ಮಾರ ಮಾ ವಸ ಮದೀಯ ಮಾನಸೇ
ಮಾಧವೈಕ ನಿಲಯೇ ಯದೃಚ್ಛಯಾ
ಶ್ರೀರಮಾಪತಿರಿಹಾಗಮೇದಸೌ
ಕಃ ಸಹೇತ ನಿಜವೇಶ್ಮಲಂಘನಮ್ ೯೦

ಆಕುಂಚಿತಂ ಜಾನು ಕರಂ ಚ ವಾಮಂ
ನ್ಯಸ್ಯಾವನೌ ದಕ್ಷಿಣ ಹಸ್ತ ಪದ್ಮೇ
ಆಲೋಕಯಂತಂ ನವನೀತ ಖಂಡಂ
ಬಾಲಂ ಭಜೇ ಕೃಷ್ಣಮುಪಾಸತಾಂಗಮ್ ೯೧

ಮಂದಾರಮೂಲೇ ಮದನಾಭಿರಾಮಂ
ಬಿಂಬಾಧರಾಪೂರಿತ ವೇಣುನಾದಮ್
ಗೋಗೋಪ ಗೋಪೀಜನಮಧ್ಯ ಸಂಸ್ಥಂ
ಗೋಪಂ ಭಜೇ ಗೋಕುಲ ಪೂರ್ಣಚಂದ್ರಂ ೯೨

ಜಾನುಭ್ಯಾಮಭಿಧಾವಂತಂ
ಬಾಹುಭ್ಯಾಮಪಿ ಸುಂದರಮ್
ಸಕುಂಡಲಾಲಕಂ ಬಾಲಂ
ಗೋಪಾಲಂ ಚಿಂತಯೇದುಷಃ ೯೩

ವಿಹಾಯ ಕೋದಂಡಶರೌ ಮುಹೂರ್ತಂ
ಗೃಹಾಣ ಪಾಣೌ ಮಣಿಚಾರುವೇಣುಮ್
ಮಯೂರಬರ್ಹಂ ಚ ನಿಜೋತ್ತಮಾಂಗೇ
ಸೀತಾಪತೇ ತ್ವಾಂ ಪ್ರಣಮಾಮಿ ಪಶ್ಚಾತ್ ೯೪

ಮಾರ,ನನ್ನಮನಸ್ಸಿನಲ್ಲಿ ನಿಲ್ಲಬೇಡ, ಅದು ಯದೃಚ್ಛೆಯಾಗಿ ಮಾಧವನೊಬ್ಬನದೆ ಮನೆಯಾಗಿದೆ. ಶ್ರೀರಮಾಪತಿ ಇಲ್ಲಿ ಬಂದಾನು. ತನ್ನ ಮನೆಯ ಅತಿಕ್ರಮ ಪ್ರವೇಶವನ್ನು ಯಾವನು ಸಹಿಸುವನು ?

ಮಂಡಿಯನ್ನೂ ಎಡಕೈಯನ್ನೂ ಮಡಿಸಿ ನೆಲದಲ್ಲಿರಿಸಿ ಬಲಗೈ ತಾವರೆಯಲ್ಲಿ ಬೆಣ್ಣೆಯ ಉಂಡೆಯನ್ನು ನೋಡುತ್ತಿರುವ ಬಾಗಿದ ಮೈಯ ಬಾಲಕೃಷ್ಣನನ್ನು ನಾನು ಭಜಿಸುತ್ತೇನೆ.

ಮಂದಾರದ ಬುಡದಲ್ಲಿ ಮದನನಂದ ಅಭಿರಾಮನಾಗಿ, ಬಿಂಬಾಧರದಿಂದ ತುಂಬಿದ ವೇಣುನಾದ ಉಳ್ಳ, ಗೋವುಗಳು ಗೋಪಾಲರು ಗೋಪಿಯರು ಇವರ ಮಧ್ಯೆ ನಿಂತಿರುವ, ಗೋಕುಲ ಪೂರ್ಣಚಂದ್ರನಾದ ಗೋಪಾಲನನ್ನು ಭಜಿಸುತ್ತೇನೆ.

ಮಂಡಿಗಳಿಂದ ಹಾಗೆಯೆ ತೋಳುಗಳಿಂದ ಓಡುತ್ತಿರುವ, ಕುಂಡಲ ಅಲಕಗಳಿಂದ ಸುಂದರನಾದ, ಬಾಲ ಗೋಪಾಲನನ್ನು ಉಷಃಕಾಲದಲ್ಲಿ ಚಿಂತಿಸತಕ್ಕದ್ದು,

ಮುಹೂರ್ತಕಾಲ ಕೋದಂಡಶರಗಳನ್ನು ಬಿಟ್ಟು, ಕೈಯಲ್ಲಿ ಮಣಿಗಳಿಂದ ಸುಂದರ ವಾದ ವೇಣುವನ್ನು ಹಿಡಿದು, ನಿನ್ನ ತಲೆಯ ಮೇಲೆ ನವಿಲಗರಿಯನ್ನು ಸೆಕ್ಕು, ಸೀತಾಪತಿ. ಆಮೇಲೆ ನಾನು ನಿನಗೆ ಪ್ರಣಾಮ ಮಾಡುತ್ತೇನೆ.

ಅಯಂ ಕ್ಷೀರಾಂಭೋಧೇಃ ಪತಿರಿತಿ ಗವಾಂ ಪಾಲಕ ಇತಿ
ಶ್ರಿತೋಽಸ್ಮಾಭಿಃ ಕ್ಷೀರೋಪನಯನಧಿಯಾ ಗೋಪತನಯಃ
ಅನೇನ ಪ್ರತ್ಯೂಹೋ ವ್ಯರಚಿ ಯೇನ ಜನನೀ
ಸ್ತನಾದಪ್ಯಸ್ಮಾಕಂ ಸಕೃದಪಿ ಪಯೋ ದುರ್ಲಭಮಭೂತ್ ೯೫

ಹಸ್ತಮಾಕ್ಷಿಪ್ಯ ಯಾತೋಽಸಿ
ಬಲಾತ್ಕೃಷ್ಣ ಕಿಮದ್ಭುತಮ್
ಹೃದಯಾದ್ಯದಿ ನಿರ್ಯಾಸಿ
ಪೌರುಷಂ ಗಣಯಾಮಿ ತೇ ೯೬

ತಮಸಿ ರವಿರಿವೋದ್ಯನ್ಮಜ್ಜತಾಮಂಬುರಾಶೌ
ಪ್ಲವ ಇವ ತೃಷಿತಾನಾಂ ಸ್ವಾದುವರ್ಷೀವ ಮೇಘಃ
ನಿಧಿರಿವ ನಿಧನಾನಾಂ ದೀರ್ಘತೀವ್ರಾಮಯಾನಾಂ
ಭಿಷಗಿವ ಕುಶಲಂ ನೋ ದಾತುಮಾಯಾತಿ ಶೌರಿಃ ೯೭

ಕೋದಂಡಂ ಮಸೃಣಂ ಸುಗಂಧಿ ವಿಶಿಖಂ ಚಕ್ರಾಬ್ಜಪಾಶಾಂಕುಶಂ
ಹೈಮೀಂ ವೇಣುಲತಾಂ ಕರೈಶ್ಚ ದಧತಂ ಸಿಂದೂರ ಪುಂಜಾರುಣಮ್
ಕಂದರ್ಪಾಧಿಕ ಸುಂದರಂ ಸ್ಮಿತಮುಖಂ ಗೋಪಾಂಗನಾವೇಷ್ಟಿತಂ
ಗೋಪಾಲಂ ಮದನಾಧಿಪಂ ತಮಭಜಂ ತ್ರೈಲೋಕ್ಯರಕ್ಷಾಮಣಿಮ್ ೯೮

ಸಾಯಂಕಾಲೇ ವನಾಂತೇ ಕುಸುಮಿತಸಮಯೇ ಸೈಕತೇ ಚಂದ್ರಿಕಾಯಾಂ
ತ್ರೈಲೋಕ್ಯಾಕರ್ಷಣಾಂಗಂ ಸುರ ನರ ಗಣಿಕಾ ಮೋಹನಾಪಾಂಗಮೂರ್ತಿಂ
ಸೇವ್ಯಂ ಶೃಂಗಾರಭಾವೈಃ ನವರಸಭರಿತೈಃ ಗೋಪಕನ್ಯಾ ಸಹಸ್ರೈಃ
ವಂದೇಹಂ ರಾಸಕೇಲೀ ರತಿಮತಿಸುಭಗಂ ವಶ್ಯಗೋಪಾಲಕೃಷ್ಣಮ್ ೯೯

ಕದಂಬಮೂಲೇ ಕ್ರೀಡಂತಂ
ವೃಂದಾವನ ನಿವೇಶಿತಂ
ಪದ್ಮಾಸನಸ್ಥಿತಂ ವಂದೇ
ವೇಣುಂ ಗಾಯಂತಮಚ್ಯುತಂ ೧೦೦

ಈತ ಕ್ಷೀರಸಾಗರದ ಒಡೆಯನೆಂದು, ಆಕಳ ರಕ್ಷಕನೆಂದು, ಹಾಲು ಪಡೆಯುವ ಎಂಬ ಆಸೆಯಲ್ಲಿ ನಾವು ಗೋಪತನಯನನ್ನು ಆಶ್ರಯಿಸಿದೆವು. ಈತ ನಮಗೆ ಮಾಡಿದ ಪ್ರತೀಕಾರ ಇಂಥದು: ಅದರಿಂದ ನಮಗೆ ಎಂದೂ ಒಂದೇ ಸಲ ವಾದರೂ ತಾಯ ಮೊಲೆಯ ಹಾಲು ದುರ್ಲಭ ಆಯಿತು.

ಕೃಷ್ಣ, ಬಲದಿಂದ ಕೈಯನ್ನು ಕೊಸರಿ ಹೊರಟು ಹೋಗಿದೀಯೆ. ಇದೇನು ದೊಡ್ಡದು? ನನ್ನ ಹೃದಯದಿಂದ ತಪ್ಪಿಸಿಕೊಂಡೆಯೆಂದರೆ ನಿನ್ನ ಪೌರುಷವನ್ನು ಒಪ್ಪುತ್ತೇನೆ.

ಕತ್ತಲಲ್ಲಿ ಉದಯರವಿಯಂತೆ, ನೀರಲ್ಲಿ ಮುಳುಗುತ್ತಿರುವವರಿಗೆ ಓಡಂತೆ, ದಾಹ ಗೊಂಡವರಿಗೆ ಸ್ವಾದುವರ್ಷಿಯಾದ ಮೇಘದಂತೆ, ನಿರ್ಧನರಿಗೆ ನಿಧಿಯಂತೆ' ದೀರ್ಘ ತೀವ್ರ ಆದ ರೋಗದ ಜನರಿಗೆ ವೈದ್ಯನಂತೆ, ನಮಗೆ ಕುಶಲವನ್ನು ನೀಡಲು ಶೌರಿ ಬರುತ್ತಾನೆ.

ರುಚಿಯ ಕೋದಂಡವನ್ನು ಸುಗಂಧಿ ಶರವನ್ನು, ಚಕ್ರಶಂಖ ಪಾಶಾಂಕುಶಗಳನ್ನು ಸ್ವರ್ಣವೇಣು ನಾಳವನ್ನು ಕೈಗಳಲ್ಲಿ ಧರಿಸಿ; ಸಿಂದೂರ ರಾಶಿಯಂತೆ ಅರುಣ ವರ್ಣನಾಗಿ; ಮನ್ಮಥನಿಗಿಂತ ಅಧಿಕ ಸುಂದರನಾಗಿ; ಗೋಪಾಂಗನೆಯರಿಂದ ವೇಷ್ಟಿತನಾಗಿರುವ ಆ ತ್ರೈಲೋಕ್ಯ ರಕ್ಷಾಮಣಿ, ನಗೆಮುಖದ ಮದನಾಧಿಪ ಗೋಪಾಲನನ್ನು ನಾನು ಭಜಿಸಿದೇನೆ.

ವನಾಂತದಲ್ಲಿ ಕುಸುಮಿತ ಸಮಯದಲ್ಲಿ, ಮರಳ ಮೇಲೆ ಬೆಳದಿಂಗಳಲ್ಲಿ, ತ್ರಿಲೋಕವಾಸಿಗಳನ್ನು ಆಕರ್ಷಿಸುವ ಅಂಗವುಳ್ಳವನಾಗಿ, ಸುರನರಗಣಕೇಯರನ್ನು ಮೋಹಗೊಳಿಸುವ ಅಪಾಂಗದ ಮೂರ್ತಿಯಾಗಿ, ನವರಸಭರಿತವಾದ ಶೃಂಗಾರ ಭಾವಗಳಿಂದ ಗೋಪಕನ್ಯಾ ಸಹಸ್ರಗಳಿಂದ ಸೇವೆ ಪಡೆಯುತ್ತ, ರಾಸಕೇಲಿಯಲ್ಲಿ ರತನಾಗಿರುವ ಅತಿ ಸುಭಗ ವಶ್ಯ ಗೋಪಾಲಕೃಷ್ಣನನ್ನು ಸಂಜೆಯಲ್ಲಿ ನಾನು ವಂದಿಸುತ್ತೇನೆ,

ಬೃಂದಾವನದಲ್ಲಿ ನೆಲಸಿ ಕದಂಬವೃಕ್ಷದ ಅಡಿಯಲ್ಲಿ ಆಡಿಕೊಂಡು, ಕೊಳಲನ್ನು ನುಡಿಸುತ್ತ ಪದ್ಮಾಸನನಾಗಿ ಕುಳಿತಿರುವ ಅಚ್ಯುತನಿಗೆ ನಮಸ್ಕಾರ.

ಬಾಲಂ ನೀಲಾಂಬುದಾಭಂ ನವಮಣಿವಿಲಸತ್ಕಿಂಕಿಣೀಜಾಲಬದ್ಧ
ಶ್ರೋಣೀ ಜಂಘಾಂತಯುಗ್ಮಂ ವಿಪುಲ ರುರುನಖ ಪ್ರೋಲ್ಲಸತ್ಕಂಠಭೂಷಂ
ಫುಲ್ಲಾಂಭೋಜಾಭವಕ್ತ್ರಂ ಹತಶಕಟ ಮರುತ್ಪೂತನಾದ್ಯಂ ಪ್ರಸನ್ನಂ
ಗೋವಿಂದಂ ವಂದಿತೇಂದ್ರಾದ್ಯಮರವರಮಜಂ ಪೂಜಯೇದ್ವಾಸರಾದೌ ೧೦೧

ವಂದ್ಯಂ ದೇವೈರ್ಮುಕುಂದಂ ವಿಕಸಿತಕುರವಿಂದಾಭಮಿಂದೀವರಾಕ್ಷಂ
ಗೋ ಗೋಪೀವೃಂದವೀತಂ ಜಿತರಿಪುನಿವಹಂ ಕುಂದ ಮಂದಾರ ಹಾಸಂ
ನೀಲಗ್ರೀವಾಗ್ರ್ಯ ಪಿಂಛಗ್ರಥನ ಸುವಿಲಸತ್ಕುಂತಲಂ ಭಾನುಮನ್ತಂ
ದೇವಂ ಪೀತಾಂಬರಾಢ್ಯಂ ಯಜ ಯಜ ದಿನಶೋ ಮಧ್ಯಮಾಹ್ನೇ ರಮಾಯೈ

ಚಕ್ರಾಂತ ಧ್ವಸ್ತ ವೈರಿವ್ರಜಮಜಿತಮಪಾಸ್ತಾವನೀ ಭಾರಮಾದ್ಯೈಃ
ಆವೀತಂ ನಾರದಾದ್ಯೈರ್ಮುನಿಭಿರಭಿನುತಂ ತತ್ತ್ವನಿರ್ಣೀತಿಹೇತೋಃ
ಸಾಯಾಹ್ನೇ ನಿರ್ಮಲಾಂಗಂ ನಿರುಪಮರುಚಿರಂ ಚಿಂತಯೇನ್ನೀಲಭಾಸಂ
ಮನ್ತ್ರೀ ವಿಶ್ವೋದಯಸ್ಥಿತ್ಯಪಹರಣಪದಂ ಮುಕ್ತಿದಂ ವಾಸುದೇವಂ ೧೦೩

ಕೋದಂಡಮೈಕ್ಷವಮಖಂಡಮಿಷುಂ ಚ ಪೌಷ್ಪಂ
ಚಕ್ರಾಬ್ಜ ಪಾಶ ಸೃಣಿ ಕಾಂಚನವಂಶನಾಳಂ
ಬಿಭ್ರಾಣಮಷ್ಟವಿಧ ಬಾಹುಭಿರರ್ಕವರ್ಣಂ
ಧ್ಯಾಯೇತ್ ಹರಿಂ ಮದನ ಗೋಪವಿಲಾಸವೇಷಂ ೧೦೪

ಬಾಲ, ನೀಲಮೇಘದ ಮಿರುಗಿನವನು, ನವಮಣಿಗಳಿಂದ ವಿಲಸಿಸುವ ಕಿರುಗಂಟೆಗಳ ಸಾಲುಕಟ್ಟಿರುವ ಶ್ರೋಣೀ ಜಂಘಾತಯುಗ್ಮದಾತ, ರುರುನಖದಿಂದ ತುಂಬ ಹೊಳೆಯುವ ವಿಪುಲಕಂಠಭೂಷವುಳ್ಳವನು, ಅರಳಿದ ಅಂಭೋಜದ ಕಾಂತಿಯ ಮುಖದಾತ, ಶಕಟ ವಾತ ಪೂತನಾದಿಗಳನ್ನು ಕೊಂದವನು. ಇಂದ್ರಾದಿ ಅಮರವರ ವ್ರಜದಿಂದ ವಂದಿತನು, ಆದ ಅಜ ಪ್ರಸನ್ನ ಗೋವಿಂದನನ್ನು ದಿನದ ಆದಿಯಲ್ಲಿ ಪೂಜಿಸತಕ್ಕದ್ದು.

ದೇವರಿಂದ ವಂದ್ಯನಾದ ಅರಳಿದ ಕುರವಿಂದದ ಕಾಂತಿಯುವನು, ಇಂದೀವರಾಕ್ಷ; ಗೋವುಗಳ ಗೋಪಿಯರ ವೃಂದದಿಂದ ವೀತನಾಗಿರುವವನು ರಿಪುನಿವಹವನ್ನು ಗೆದ್ದವನು; ಕುಂದಮಂದಾರಹಾಸ, ನವಿಲ ಚೆಂದದ ಗರಿಯಿಂದ ಕಟ್ಟಿರುವ ತೊಡವಿಂದ ಚೆನ್ನ ಬೆಳಗುವ ಹರಳು, ಇವನ್ನು ಉಳ್ಳ ಭಾನುವಂತ ಪೀತಾಂಬರಾಢ್ಯದೇವ ಮುಕುಂದನನ್ನು, ಸೌಭಾಗ್ಯಕ್ಕಾಗಿ, ಹಗಲ ಮಧ್ಯೆ ದಿನ ತಪ್ಪದೆ ಪೂಜಿಸು.

ಚಕ್ರದ ಅಲಗಿಂದ ವೈರಿವ್ರಜವನ್ನು ಧ್ವಂಸಮಾಡಿ ಭೂಭಾರವನ್ನು ಕಳೆದ ಅಜಿತ ಆದ್ಯರಿಂದ ಆವೀತನಾಗಿರುವನು, ತತ್ತ್ವನಿರ್ಣಯದ ಸಲುವಾಗಿ ನಾರದಾದಿ ಮುನಿಗಳಿಂದ ಅಧಿಸುತನಾದವನು, ಸೃಷ್ಟಿಯ ಉದಯ ಸ್ಥಿತಿ ಲಯಗಳ ಮುಖ್ಯ ಕಾರಣ ಸ್ಥಾನವನ್ನು ಹಿಡಿದವನು, ಇಂಥ ನಿರ್ಮಲಾಂಗ, ನಿರುಪಮರುಚಿರ, ನೀಲಭಾಸ, ಮುಕ್ತಿದಾಯಕ ವಾಸುದೇವನನ್ನು ಸಂಜೆ ನೆನೆಯತಕ್ಕದ್ದು.

ಕಬ್ಬಿನ ಜಲ್ಲೆಯ ಅಖಂಡ ಕೋದಂಡ, ಹೂವಿನದು ಸರಳು, ಚಕ್ರ, ಕಮಲ, ಪಾಶ, ಸೃಣಿ, ಹೊನ್ನಬಿದಿರ ಕೊಳಲು, ಇವನ್ನು ಎಂಟು ತೆರ ತೋಳಿಂದ ಧರಿಸಿರುವ ಅರ್ಕವರ್ಣದ ಮದನ ಗೋಪವೇಷದ ಹರಿಯನ್ನು ನೆನೆಯತಕ್ಕದ್ದು,

ಯಾ ಪ್ರೀತಿರ್ವಿದುರಾರ್ಪಿತೇ ಮುರರಿಪ್ರೋ ಕುಂತ್ಯರ್ಪಿತೇ ಯಾದೃಶೀ
ಯಾ ಗೋವರ್ಧನಮೂರ್ಧ್ನಿ ಯಾಚ ಪೃಥುಕೇ ಸ್ತನ್ಯೇ ಯಶೋದಾರ್ಪಿತೇ
ಭಾರದ್ವಾಜ ಸಮರ್ಪಿತೇ ಶಬರಿಕಾದತ್ತೇಽಧರೇಯೋಷಿತಾಂ
ಯಾ ಪ್ರೀತಿರ್ಮುನಿಪತ್ನಿಭಕ್ತಿರಚಿತೇಽಪ್ಯತ್ರಾಪಿ ತಾಂ ತಾಂ ಕುರು ೧೦೪

ಕೃಷ್ಣಾನುಸ್ಮರಣಾದೇವ ಪಾದಸಂಘಾತ ಪಂಜರಃ
ಶತಧಾ ಭೇದಮಾಯಾತಿ ಗಿರಿಃ ವಜ್ರಹತೋ ಯಥಾ ೧೦೫

ತೃತೀಯ ಆಶ್ವಾಸಃ

ವಿದುರನಿಂದ ಅರ್ಪಿತವಾದದ್ದರಲ್ಲಿ ಯಾವ ಪ್ರೀತಿ ; ಕುಂತಿಯಿಂದ ಅರ್ಪಿತವಾದದ್ದರಲ್ಲಿ ಎಂಥದು ; ಗೋವರ್ಧನ ಶಿಖರದಲ್ಲಿ ಯಾವುದು ; ಮತ್ತೆ ಅವಲಕ್ಕಿಯಲ್ಲಿ, ಯಶೋದೆಯಿಂದ ಅರ್ಪಿತವಾದ ಮೊಲೆ ಹಾಲಲ್ಲಿ, ಯಾವುದು: ಭಾರದ್ವಾಜನಿಂದ ಸಮರ್ಪಿತವಾದದ್ದರಲ್ಲಿ, ಶಬರಿ ಕೊಟ್ಟದ್ದರಲ್ಲಿ, ವ್ರಜ ಸುಂದರಿಯ ತುಟಿಯಲ್ಲಿ, ಮುನಿಪತ್ನಿಯರ ಭಕ್ತಿ ರಚಿಸಿದ್ದರಲ್ಲಿ, ಯಾವ ಪ್ರೀತಿ; ಇಲ್ಲಿ ಕೂಡ ಆ ಪ್ರೀತಿಯನ್ನು ತೋರಿಸು.

ಕೃಷ್ಣನ ಅನುಸ್ಮರಣಮಾತ್ರದಿಂದ ಪಾಪಗಳ ಸಂಘಾತದ ಪಂಜರ ವಜ್ರಹತವಾದ ಗಿರಿ ಹೇಗೆ ಹಾಗೆ ನೂರು ಪಾಲಾಗಿ ತುಂಡಾಗುತ್ತದೆ.

ನೂರನೆಯ ಆಶ್ವಾಸಃ

ಪರಿಶಿಷ್ಟ

ಮೌಳಿಶ್ಚಂದ್ರಕಭೂಷಣಾ ಮರಕತ ಸ್ತಂಭಾಭಿರಾಮಂ ವಪುಃ
ವಕ್ತ್ರಂ ಚಿತ್ರವಿಮುಗ್ಧಹಾಸಮಧುರಂ ಬಾಲೇ ವಿಲೋಲೇ ದೃಶೌ
ವಾಚಃ ಶೈಶವ ಶೀತಲಾ ಮದಗಜಶ್ಲಾಘ್ಯಾ ವಿಲಾಸ ಸ್ಥಿತಿಃ
ಮನ್ದಂ ಮನ್ದಮಯೇ ಕ ಏಷ ಮಥುರಾವೀಥೀಮಿತೋ ಗಾಹತೇ ೧

ಕಾನ್ತಾಕಚಗ್ರಹಣ ವಿಗ್ರಹ ಬದ್ಧಲಕ್ಷ್ಮೀ
ಖಂಡಾಂಗರಾಗ ರಸರಂಜಿತ ಮಂಜುಲ ಶ್ರೀ
ಗಂಡಸ್ಥಲೀ ಮುಕುರಮಂಡಲ ಖೇಲಮಾಸ
ಘರ್ಮಾಂಕುರಂ ಕಿಮಪಿ ಖೇಲತಿ ಕೃಷ್ಣತೇಜಃ ೨

ಶುಶ್ರೂಷಸೇ ಯದಿ ವಚಃ ಶೃಣು ಮಾಮಕೀನಂ
ಪೂರ್ವೈರಪೂರ್ವಕಭಿರ್ನಕಟಾಕ್ಷಿತಂ ಯತ್
ನೀರಾಜನಕ್ರಮ ಧುರಂ ಭವದಾನನೇಂದೋಃ
ನಿರ್ವ್ಯಾಜಮರ್ಹತಿಚಿರಾಯ ಶಶಿಪ್ರದೀಪಃ ೩

ಭವನಂ ಭುವನಂ ವಿಲಾಸಿನೀ ಶ್ರೀಃ
ತನಯಃ ತಾಮರಸಾನಃ ಸ್ಮರಶ್ಚ
ಪರಿಚಾರ ಪರಂಪರಾ ಸುರೇಂದ್ರಾಃ
ತದಪಿ ತ್ವಚ್ಚರಿತಂ ವಿಭೋ ವಿಚಿತ್ರಂ ೪

ಪರಿಶಿಷ್ಟ

ಮೌಳಿ ನವಿಲಗರಿಯ ತೊಡವನ್ನು ಪಡೆದಿದೆ ; ಮರಕತದ ಕಂಬದಂತೆ ಅಭಿರಾಮ ವಾಗಿದೆ ದೇಹ ; ವಿಚಿತ್ರವಾದ ಮುಗ್ಧಹಾಸದಿಂದ ಮಧುರವಾಗಿದೆ ಮುಖ ; ಕಣ್ಣುಗಳು ಎಳೆಯುವಾಗಿ ವಿಲೋಲವಾಗಿವೆ ; ಮಾತು ಹಸುಳೆಯುವು, ತಂಪಾದವು ; ವಿಲಾಸದ ನಿಲುವು ಮದಗಜ ಶ್ಲಾಘ್ಯ. ಎಲೆ, ಯಾರು ಇದು, ಮಂದಮಂದವಾಗಿ ಮಥುರೆಯ ಬೀದಿಯಲ್ಲಿ ಇತ್ತಲಿಂದ ಹೊಕ್ಕವನು ?

ಕಾನ್ತೆಯ ಕಚವನ್ನು ಗ್ರಹಿಸುವ ವಿಗ್ರಹದಲ್ಲಿ ಬದ್ಧವಾದ ಶ್ರೀಗಂಧದ ಅಂಗ ರಾಗ ರಸದಿಂದ ರಂಜಿತವಾದ ಮಂಜುಲಶ್ರೀಯು, ಕಪೋಲದ ಕನ್ನಡಿಯ ಫಲಕದ ಮೇಲೆ ಮಿನುಗುವ ಬೆವರಿನ ಹನಿಯು, ಕೃಷ್ಣತೇಜ, ಅದೇತರದೊ, ಪ್ರಕಾಶಿಸುತ್ತಿದೆ.

ಕಿವಿ ಕೊಡುವೆಯಾದರೆ ನನ್ನದಾದ ಮಾತನ್ನು ಕೇಳು. ಇದನ್ನು ಪೂರ್ವಿಕರಾದ ಅಪೂರ್ವ ಕವಿಗಳು ಕಟಾಕ್ಷಿಸಲಿಲ್ಲ. ನಿನ್ನ ಮುಖವೆಂಬ ಚಂದ್ರನಿಗೆ ಆ ಚಂದ್ರ ಎಂಬ ದೀಪ ಎಂದೆಂದೂ ನಿರ್ವ್ಯಾಜ ನೀರಾಜನ ಕ್ರಮವನ್ನು ವಹಿಸಲು ತಕ್ಕುದಾಗಿದೆ.

ಮನೆ ಲೋಕ, ಜೊತೆಗಾತಿ ಲಕ್ಷ್ಮಿ, ಬ್ರಹ್ಮ ಮಗ, ಮನ್ಮಥನೂ ಸಹ, ಪರಿಚಾರಕ ವೃಂದ ದೇವತೆಗಳ ನಾಯಕರು, ಹೀಗಿದ್ದೂ ಓ ವಿಭುವೇ, ನಿನ್ನ ಚರಿತ ವಿಚಿತ್ರವಾಗಿದೆ.

ದೇವಸ್ತ್ರಿಲೋಕೀ ಸೌಭಾಗ್ಯ ಕಸ್ತೂರಿ ತಿಲಕಾಂಕುರಃ
ಜೀಯಾತ್ ವ್ರಜಾಂಗನಾನಂಗಕೇಲೀ ಲಲಿತ ವಿಭ್ರಮಃ ೫

ಯಸ್ಯಾತ್ಮ ಭೂತಸ್ಯ ಗುರೋಃ ಪ್ರಸಾದಾತ್
ಅಹಂ ವಿಮುಕ್ತೋಽಸ್ಮಿ ಶರೀರ ಬಂಧಾತ್
ಸರ್ವೋಪದೇಷ್ಟುಃ ಪುರುಷೋತ್ತಮಸ್ಯ
ತಸ್ಯಾಂಘ್ರಿಪದ್ಮಂ ಪ್ರಣತೋಽಸ್ಮಿ ನಿತ್ಯಂ ೬

ಯನ್ನಾಭೀ ಸರಸೀರುಹಾಂತರ ಪುಟೇ ಭೃಂಗಾಯಮಾಣೋ ವಿಧಿಃ
ಯದ್ವಕ್ಷಃ ಕಮಲಾವಿಲಾಸ ಸದನಂ ಯಚ್ಚಕ್ಷುಷೀ ಚೇಂದ್ವಿನೌ
ಯತ್ಪಾದಾಬ್ಜ ವಿನಿಃಸೃತಾ ಸುರನದೀ ಶಂಭೋಃ ಶಿರೋಭೂಷಣಂ
ಯನ್ನಾಮಸ್ಮರಣಂ ಧುನೋತಿ ದುರಿತಂ ಪಾಯಾತ್ಸನಃ ಕೇಶವಃ ೭

ಅಂಗುಲ್ಯಾ ಯಃ ಕವಾಟಂ ಪ್ರಹರತಿ ಕುಟಿಲೇ ಮಾಧವಃ ಕಿಂ ವಸನ್ತೋ
ನೋ ಚಕ್ರೀ ಕಿಂ ಕುಲಾಲೋ ನಹಿ ಧರಣಿಧರಃ ಕಿಂ ದ್ವಿಜಿಹ್ವಃ ಫಣೀಂದ್ರಃ
ನಾಹಂ ಘೋರಾಹಿಮರ್ದೀ ಕಿಮಸಿ ಖಗಪತಿಃ ನೋ ಹರಿಃ ಕಿಂ ಕಪೀಂದ್ರಃ
ಇತ್ಯೇವಂ ಗೋಪಕನ್ಯಾ ಪ್ರತಿವಚನ ಜಿತಃ ಪಾತುವಃ ಚಕ್ರಪಾಣಿಃ ೮

ರಾಧಾಮೋಹನ ಮಂದಿರಾದುಪಗತಃ ಚಂದ್ರಾವಳೀ ಮೂಚಿವಾನ್
ರಾಧೇ ಕ್ಷೇಮಮಯೇಽಸ್ತಿ ತಸ್ಯ ವಚನಂ ಶ್ರುತ್ವಾಽಹ ಚಂದ್ರಾವಳೀ
ಕಂಸಕ್ಷೇಮಂ ಅಯೇ ವಿಮುಗ್ಧ ಹೃದಯೇ ಕಂಸಃ ಕ್ವ ದೃಷ್ಟಸ್ತ್ವಯಾ
ರಾಧಾ ಕ್ವೇತಿ ವಿಲಜ್ಜಿತೋ ನತಮುಖಃ ಸ್ಮೇರೋ ಹರಿಃ ಪಾತುವಃ ೯

ಮೂರು ಲೋಕಗಳ ಸೌಭಾಗ್ಯಕ್ಕೆ ಅಂಕುರವಾದ ಕಸ್ತೂರಿ ತಿಲಕದ ದೇವ, ವ್ರಜಾಂಗನೆಯರೊಡನೆ ಅನಂಗ ಕೇಲಿಗಾಗಿ ಲಲಿತ ವಿಭ್ರಮನಾಗಿರುವವನು, ಜಯಿಸಲಿ.

ಆತ್ಮಭೂತನಾದ ಗುರು ಯಾರ ಪ್ರಸಾದದಿಂದ ನಾನು ಶರೀರ ಬಂಧದಿಂದ ವಿಮುಕ್ತನಾಗಿದೇನೆ, ಆ ಸರ್ವೋಪದೇಶಕ ಪುರುಷೋತ್ತಮ, ಅವನ ಅಂಘ್ರಿ ಪದ್ಮದಲ್ಲಿ ನಿತ್ಯ ಪ್ರಣಾಮ ಮಾಡುತ್ತೇನೆ.

ಯಾರ ನಾಭೀಕಮಲದ ಮುಗುಳಲ್ಲಿ ಬ್ರಹ್ಮ ತುಂಬಿಯಂತಾಗಿದ್ದಾನೆ, ಯಾರ ವಕ್ಷಸ್ಸು ಲಕ್ಷ್ಮಿಗೆ ವಿಲಾಸ ಸದನ, ಯಾರ ಕಣ್ಣುಗಳು ಚಂದ್ರ ಸೂರ್ಯರು, ಶಂಭುವಿನ ಶಿರೋಭೂಷಣವಾದ ಸುರನದಿ ಯಾರ ಪಾದಕಮಲದಿಂದ ವಿನಿಃಸೃತ, ಯಾರ ಹೆಸರ ನೆನವು ದುರಿತವನ್ನು ಚೆದರಿಸುತ್ತದೆ, ಆ ಕೇಶವನು ನಮ್ಮನ್ನು ಕಾಪಾಡಲಿ.

ಬೆರಳಿಂದ ಬಾಗಿಲನ್ನು ತಟ್ಟುವುದು ಯಾರು ? ಎಲೆ ಕುಟಿಲೇ, ಮಾಧವ. ಏನು ವಸಂತನೆ ? ಅಲ್ಲ ಚಕ್ರೀ. ಯಾರು ಕುಂಬಾರನೆ ? ಛೆ ಅಲ್ಲ, ಧರಣೀಧರ. ಎಂದರೆ ಎರಡು ನಾಲಗೆಯ ಫಣೀಂದ್ರನೆ ? ಅಲ್ಲ, ನಾನು ಘೋರ ಅಹಿಯನ್ನು ಮರ್ದಿಸಿದವನು. ಹಾಗೆಂದರೆ ನೀನು ಗರುಡನೊ ? ಅಲ್ಲ, ಹರಿ. ಕಪೀಂದ್ರನೇನು ? ಈ ರೀತಿ ಗೋಪಕನ್ಯೆಯ ಉತ್ತರಗಳಿಂದ ಸೋತ ಚಕ್ರಪಾಣಿ ನಿಮ್ಮನ್ನು ರಕ್ಷಿಸಲಿ.

ರಾಧೆಯ ಮೋಹನ ಮಂದಿರದಿಂದ ಹೊರಗೆ ಬಂದವನು ಚಂದ್ರಾವಳಿಗೆ ಹೇಳಿದವನಾದ : ಏನು ರಾಧೆ ಕ್ಷೇಮವೆ ? ಅವನ ಮಾತನ್ನು ಕೇಳಿ ಚಂದ್ರಾವಳಿ ಹೇಳಿದಳು : ಕ್ಷೇಮ ಕಂಸ. ಎಲೇ ವಿಮುಗ್ಧ ಹೃದಯೇ ನೀನು ಕಂಸನನ್ನು ಎಲ್ಲಿ ಕಂಡೆ ? ಪ್ರತಿ : ರಾಧೆ ಎಲ್ಲಿ ? ತುಂಬ ನಾಚಿ ತಲೆ ತಗ್ಗಿಸಿದ ನಗೆಮುಖದ ಹರಿ ನಿಮ್ಮನ್ನು ರಕ್ಷಿಸಲಿ,

ಟಿಪ್ಪಣಿಗಳು

(ಸಂಖ್ಯೆಗಳು ಆಯಾ ಆಶ್ವಾಸದ ಪದ್ಯಗಳವು.)

ನಿವೇದನ : ಸಿರಿವಡಿ : ತಮಿಳ ತಿರುವಡಿಯ ಕನ್ನಡ ರೂಪ.

ಆಶ್ವಾಸ ೧

೧. ಈ ಗುರುಗಳ ಪಾದದಲ್ಲಿ ತಲೆ ಇರಿಸಿದವನು ಸುಲಭವಾಗಿ ಗೆಲ್ಲುತ್ತಾನೆ.

೩. ನಿಧಾನ : ನಿಕ್ಷೇಪ

೪. ಆಪೀನ : ತೀರ ತುಂಬಿದ. ಕುಟ್ಮಲ : ಮುಗುಳು.

೫. ಅರ್ಥದಲ್ಲಿ ಅನ್ವಯ : ನನ್ನ ಇಂಥ ಚೇತಸ್ಸಿನಲ್ಲಿ ಪ್ರಕಾಶಿಸುತ್ತದೆ.

೮. ಮಂಥರ : ಮಂದವಾದ.

೯. ಪಂಕಿಲ : ಪಂಕದಿಂದ ಕೂಡಿದ.

೧೪. ಮಾಧುರ್ಯವಾರಿಧಿ : ಮಾಧುರ್ಯವೆಂಬ ಸಮುದ್ರ.

೧೬. ಅರ್ಥದಲ್ಲಿ ಅನ್ವಯ : ಗುರುತುಗಳನ್ನು ಮಾಡಿದ ಚರಣಗಳು.

೧೭. ಅರ್ಥದಲ್ಲಿ ಅನ್ವಯ : ಮರ್ತ್ಯಾದೆ ಪಡೆಯುವಂಥದಾದ ಮಧುರ ಧ್ವನಿ.

೩೮. ಅರ್ಥದಲ್ಲಿ ಅನ್ವಯ : ಲಾವಣ್ಯಕೇಲಿಸದನ ಆದ ಮುಖೇಂದು ಬಿಂಬ.

೫೬. ಕಂದಲ : ಅಂಕುರ.

೫೭. ದೋಪದ : ಅಕಾಲದಲ್ಲಿ ಪ್ರಪ್ಪತರಿಸುವ ಶಕ್ತಿ ಅಥವಾ ಕಲೆ.

೬೨. ಕೈಶೋರಗಂಧಿ : ಕಿಶೋರ ಭಾವ ಸ್ವಲ್ಪ ಉಳಿದಿರುವ.

೬೭. ಆವಿಷ್ಕೃತ : ಪ್ರಕಾಶಿತ.

೭೦. "ಶಿಶುಪಾಲ"ಕ್ಕೆ ಪ್ರತಿ "ಪಶು ಪಾಲ" ಎಂದು ಒಂದು ಪಾಠ ಉಂಟು.

೭೮. ಕಂದಲಿತ : ಆನಂದಾಂಕುರವನ್ನು ಮೂಡಿಸಿದ.

ಆಶ್ವಾಸ ೨

೧. ತಾಪಿಂಛ : ತಮಾಲ.

೪. ಪಿಠರ : ಗುಡಾಣ.

೮. ಪಂಕ್ತಿ ೨. ಕಾಚಿನ್ಮುಹುರನುನಯೈಃ : ಕಾ, ಚಿತ್, ಮುಹುಃ, ಅನುನಯೈಃ.

೧೩. ಕಮ್ರ : ಕಾಂತಿಯುಕ್ತ.

೧೬. ದಮುನಾ : ಕಿಚ್ಚು.

೧೮. ಒಂದು ಪಾಠದಲ್ಲಿ ಈ ಶ್ಲೋಕದ ಪೂರ್ವಾರ್ಧ ಉತ್ತರಾರ್ಧವಾಗಿ ಇದರ ಉತ್ತರಾರ್ಧ ಪೂರ್ವಾರ್ಧವಾಗಿ ಕಾಣುತ್ತವೆ.

೨೦. ಕಾಕಪಕ್ಷ : ಜುಟ್ಟು.

೨೨. ಸಾಚೀ : ತಿರ್ಯಕ್.

೩೨. ಸೀಮಿ : ಅರೆ. ವಲ್ಗಿತ : ಎತ್ತಿ ಇರಿಸಿದ.

೩೩. ಚಿನ್ನವ : ಚಿತ್, ನವ.

೩೫. ರಾಸಕ್ರೀಡೆಯ ಕಲ್ಪನೆ.

೩೬. ಪಂಕೇರುಹ : ಅಲೀನ.

೩೭. ವೀಣೆಯನ್ನು ಕುರಿತ ಮೂರು ಪದ ಹೀಗೆ : ವೀಣಾಭಿಃ ಆರಾ ವಿಣಾ ; ವೀಣಾ ಭಿರಾಃ ಕಿಂಕಿಣೀ ; ವೀಣಾ ಅಭಿರಾಮ ಅನ್ತರಂ ;

೪೧. ತಾಲಿಕಾ : ತಾಲಯುಕ್ತ. ತಾಲಲೀಲಾ ಲಯ ಆಸಂಗ ಸಂದರ್ಶಿತ.

೪೬. ಆವಿಃ : ಪ್ರಕಾಶಮಾನ.

೪೭. ವಿತತಗಾತ್ರಃ, ತೋತ್ರ ಸಂಸ್ಪೃಶ ಮೌಲಿಃ.

೫೪. ಧಾತ್ರೀ ಎಂದರೆ ತಾಯಿ ಎಂದರೂ ಆಗುವುದು,

೫೬. ಹಾಲೂ, ಮೊಸರೂ, ಬೆಣ್ಣೇ ಎನ್ನಬೇಕಾದವಳು ಗೋವಿಂದಾ, ದಾಮೋದರಾ, ಮಾಧವಾ, ಎಂದಳು.

೬೦–೬೩. ಕೃಷ್ಣನನ್ನು ಕುರಿತ ನಾಲ್ಕು ಕಥೆ.

೬೪–೬೫. ಎರಡು ಸಂದರ್ಭದ ವರ್ಣನೆ.

೬೬. ಕೃಷ್ಣ ಜನನ ರೋಹಿಣೀ ನಕ್ಷತ್ರದಲ್ಲಿ.

೭೦–೭೨. ಇನ್ನೆರಡು ಕಥೆ.

೭೫. ಒಂದು ಪಾಠದಲ್ಲಿ ಈ ಪದ್ಯದ ಮೊದಲ ಪಾದ "ಪಾಣೌ" ಪದದಿಂದಲೂ, ಎರಡನೆಯ ಪಾದ "ಸವ್ಯೇ" ಪದದಿಂದಲೂ ಆರಂಭವಾಗುತ್ತವೆ. ಇದರಿಂದ ಅರ್ಥ ಬಹಳ ಬೇರೆಯಾಗುವುದಿಲ್ಲ.

೭೭. ಜಂಬಾಲ : ಪಂಕ.

೮೦. ಪರಿವಸನ : ಶುಶ್ರೂಷೆ ಅಥವಾ ಧ್ಯಾನ.

೮೨. ಇನ್ನೊಂದು ಕಥೆ.

೮೬. ಅರ್ಥದ ಕೊನೆಯ ಪಾದದಲ್ಲಿ "ಎಳೆಯ" ನಾಮಪದ.

೯೦. ಗೋಪಾಲರಾಯಂ ಎಂಬಲ್ಲಿ "ರಾಯ" "ರಾಜ"ದ ತದ್ಭವವೋ ಎಂದು ಭ್ರಮೆ ಮೂಡಬಹುದು. ಇದು ಸಂಸ್ಕೃತ ಶಬ್ದ ; ಅರ್ಥ, ಸಂಪತ್ತು.

೯೨. ಮೂಲದ ಮೊದಲ ಪಾದ : ಮದಮಯಂ, ಅದಮಯತ್, ಉರಗಂ. ಮೂರನೆಯ ಪಾದ : ಮಮ, ರತಿಂ, ಅಮರ, ತಿರಸ್ಕೃತಿ.

೯೪. ಸಂಹತಿ : ಸಮೂಹ.

೯೭. ಆನಕದುಂದುಭಿ : ವಸುದೇವ.

೯೮. ಕೃಷ್ಣನನ್ನು ಕುರಿತ ಮತ್ತೊಂದು ಕಥೆ.

೧೦೧. ಪಂಕ್ತಿ ೪. ವ್ಯಾಪಲ್ಗತ್ : ತುಂಬ ಆಡಿಸಿದ.

೧೦೨. ಮುರಲಿಕಾಂ (ಮುರಲಿಯನ್ನು) ಆಪೂರಯಂತಂ.

೧೦೩. ರಂಗಾವತಾರೇ : ರಂಗಕ್ಕೆ ಇಳಿದಾಗ.

೧೦೮. ಇದು ಮುಕುಂದಮಾಲಾ ಗ್ರಂಥದ ಒಂದು ಶ್ಲೋಕ.

೧೧೧. ಒಂದು ಪಾಠದಲ್ಲಿ ಮೊದಲ ಪಂಕ್ತಿ.

"ಲೋಕಾನುನ್ಮದಯನ್ ಶ್ರುತೀರ್ಮುಖರಯನ್ ಕ್ಷೋಣೀರುಹಾನ್ ಹರ್ಷಯನ್" ಎಂದಿದೆ. "ಲೋಕಗಳನ್ನು ಉನ್ಮತ್ತ ಮಾಡಿ ವೇದಗಳನ್ನು ಮೊಳಗಿಸಿ ಮರಗಳನ್ನು ಸಂತೋಷಗೊಳಿಸಿ."

ಮೂರನೆಯ ಆಶ್ವಾಸ

೧೪. ವಿಭ್ರಮ : ವಿಭ್ರಮವೇ ತಾನಾದ.
೧೯. ವನ : ವನವೇ ತಾನಾದ.
೨೧. ಭಗವತ್ಪಾದರು ಎಂಬಂತೆ ವ್ಯಂಗ್ಯದಲ್ಲಿ ಧೂರ್ತಪಾದರು.
೪೯. ಶಾರದಾಂಭೋಜ ನೇತ್ರವೂ : ನೇತ್ರವುಳ್ಳದ್ದೂ.
೫೫. ಪೇಲ್ಲಿತಂ = ಚಂಚಲೀಕೃತ ; ವಿಲುಠನ್ : ಸುತ್ತಾಡುತ್ತ
೫೭. ಸ್ವಾದೀಯಸ : ಸ್ವಾದು ಆದದ್ದಾದ.
೫೮. ತುಟಿಗಳಾಗಿ, ಅಂಬುಜಗಳಾಗಿ : ಇವನ್ನು ಉಳ್ಳವಾಗಿ.
೬೩. ಆಪಾಟಲ + ಅಧರ
೬೬. ಕ್ಲೃಪ್ತ : ರಚಿತ (ಈ ಪದ ಕ್ಲ್‌ಪ್ತ ಅಲ್ಲ.)
೭೧. ದುರ್ವಾರಂ : ಒಲ್ಲೆನೆಂದರೆ ಬಿಡುವುದಿಲ್ಲ.
೭೩. ಮೂಲ "ಅರ್ಥಾನುಲಾಪಾನ್" ಎಂದೂ ಪಾಠವುಂಟು.
೮೧. ಅಪದಂ : ಅವಿಷಯ.
೮೨. ಪ್ರತಿಕಲಂ : ಒಂದೊಂದೂ ಕ್ಷಣ.
೮೮. ಹಲ್ಲಕ : ರಕ್ತಸಂಧ್ಯಾ.
೯೪. "ಒಂದುಕ್ಷಣ ಕೃಷ್ಣನಾಗಿ ಕಾಣು."
೯೫. ಪುನರ್ಜನ್ಮ ಇಲ್ಲ ಆಯಿತು. ನಿಂದೆಯಂತೆ ತೋರುವ ಸ್ತುತಿ.
೯೯. ವಶ್ಯ : ಬಯಕೆಯ ವಸ್ತು ಆದ.
೧೦೧. ಪತತ್ : ಪವನ.
೧೦೩. ಅಪಾಸ್ತ ಅಪಸೀಘಾರಂ. ಮಂತ್ರೀ : ಕೆಲಸ ನಡೆಸುವವನು.
೧೦೪. ಕೊಳಲಿಗೆ ಎರಡು ಕೈ : ಅದ್ದರಿಂದ ಏಳು ವಸ್ತುವಿಗೆ ಎಂಟು ಕೈ.

೧೦೫. ಅವಲಕ್ಕಿ : ಕುಚೇಲ ಕೊಟ್ಟದ್ದು. ಮುನಿಪತ್ನಿಯರು : ಯಜ್ಞದ ವೇಳೆ ಕೃಷ್ಣನಿಗೆ ಅನ್ನ ತೆಗೆದುಕೊಂಡು ಹೋದವರು : ಭಾಗವತದಲ್ಲಿ ಒಂದು ಪ್ರಸಂಗ.

ಪರಿಶಿಷ್ಟ

೧. ಈ ಶ್ಲೋಕ ಒಂದು ಪಾಠದಲ್ಲಿ ಮೊದಲ ಆಶ್ವಾಸದ ೫೬, ೫೭ನೆಯು

೨. ಇದು ಅದೇ ೮೯, ೯೦ನೆಯು,

೩. ಇದು ಅದೇ ೯೫, ೯೬ನೆಯು ;

೪,೫. ಇವು ಅದೇ ೯೮, ೯೯ನೆಯು ಪದ್ಯಗಳ ಮಧ್ಯೆ ;

೬. ಇದು ಎರಡನೆಯು ಆಶ್ವಾಸದ ಕೊನೆಯುಲ್ಲಿ,

೭. ಇದು ಮೂರನೆಯು ಆಶ್ವಾಸದ ೮೪, ೮೫ನೆಯು,

೯,೧೦. ಇವು ಅದೇ ೧೦೩, ೧೦೪ನೆಯು ಪದ್ಯಗಳ ಮಧ್ಯೆ ಬರುತ್ತವೆ.

೨. ಅರ್ಥ ಸ್ವಲ್ಪ ಕ್ಲಿಷ್ಟ.

ಶ್ಲೋಕ ಸೂಚಿ

(ಅಂಕಿಗಳು ಪುಟಗಳನ್ನು ಶ್ಲೋಕಗಳನ್ನು ಸೂಚಿಸುತ್ತವೆ.)